ಸಂಪುಟ: 13 Volume | ಸಂಚಿಕೆ: 347 Issue | ಪುಟಗಳು 08 Pages | ಬುಧವಾರ 11 ಮಾರ್ಚ್ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 7204184576

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಪ್ರೀತಿಯಿಂದಾಡಿದ ಪ್ರತಿಯೊಂದು ನುಡಿಯು ಸಿಡಿಲಿನಂತೆ ಪರಿಣಾಮಕಾರಿ.
–ಸ್ವಾಮಿ ವಿವೇಕಾನಂದ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಡಾ.ಎಂ.ಮಹ್ಮದ್ ಬಾಷ ಗೂಳ್ಯಂ

ಕೋಟೆ ಪ್ರವೇಶದ್ವಾರ ಬೊಂಬುಗಳಿಗೆ ಬೆಂಕಿ 6
ಉತ್ತಮ ಅಂಕ ಪಡೆಯುವುದು ಸುಲಭ 7
ಕೈಗಾರಿಕಾ ಬೆಳವಣಿಗೆಗೆ ಇಂಬು ನೀಡಲು ಸಮಿತಿ 8

## ಮಲ್ಲಮ್ಮ ನುಡಿ ಯುಗಾದಿ ವಿಶೇಷಾಂಕ- 2026

ಸದಾ ಹೊಸತನಕ್ಕೆ ಹೆಸರಾದ ಪ್ರತಿಷ್ಠಿತ ಪ್ರಾದೇಶಿಕ ಮಲ್ಲಮ್ಮನುಡಿ ದಿನಪತ್ರಿಕೆಯು ಈ ಬಾರಿ ಯುಗಾದಿ ವಿನೂತನ ವಿಶೇಷಾಂಕ–2026 ಹೊರತರಲಿದೆ. ಇದರ ಸಿದ್ಧತೆಯು ಈಗಾಗಲೇ ಆರಂಭವಾಗಿದೆ. ಇದರ ಪ್ರಯುಕ್ತ ವಿಶೇಷ ಸಂಚಿಕೆಗಾಗಿ ಲೇಖಕರಿಂದ ಬರಹಗಳನ್ನು ಆಹ್ವಾನಿಸುತ್ತಿದೆ.

**ಲೇಖಕರು ಪಾಲಿಸಬೇಕಾದ ಸೂಚನೆಗಳು**

- ನನ್ನೂರು ಹಲವು ವೈಶಿಷ್ಟ್ಯಗಳ ತವರು: 200 ಪದ ಮಿತಿ
- ನನ್ನ ಜೀವನದ ಟರ್ನಿಂಗ್ ಪಾಯಿಂಟ್: 200 ಪದಮಿತಿ
- ನಾನು ಪ್ರೀತಿಸಿದೆ. ಆದರೆ ಆಕೆಗೆ ಹೇಳಲೇ ಇಲ್ಲ, ಸ್ವ ಅನುಭವ: 200 ಪದ ಮಿತಿ
- ಕಥೆಗಳು: 600 ಪದಮಿತಿ
- ಯಾವುದೇ ವಿಷಯ ಕುರಿತ ಲಲಿತ ಪ್ರಬಂಧ: 300 ಪದ
- ಕವನ 24 ಸಾಲು ಮೀರದಿರಲಿ.


► ಲೇಖನಗಳನ್ನು ಕಳುಹಿಸಲು ಅಂತಿಮ ದಿನಾಂಕ: 5–03–2026

► ಬರಹಗಳ ಆಯ್ಕೆಯಲ್ಲಿ ಸಂಚಿಕೆ ಸಂಪಾದಕರ ತೀರ್ಮಾನವೇ ಅಂತಿಮ.

ಈ ಮೇಲ್: mallammanudi@gmail.com

## ಸ್ಪೀಕರ್ ವಿರುದ್ಧ ಪದಚ್ಯುತಿ ನಿರ್ಣಯ

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ



ಸಂವಿಧಾನವನ್ನು ಉಳಿಸಲು ಮತ್ತು ಸದನದ ಗೌರವ ಕಾಪಾಡಲು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಪದಚ್ಯುತಗೊಳಿಸುವಂತೆ ಪ್ರತಿಪಕ್ಷಗಳು ನಿರ್ಣಯ ಮಂಡಿಸಬೇಕಾಯಿತು ಎಂದು ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್ ಹೇಳಿದ್ದಾರೆ.

ಲೋಕಸಭೆಯಲ್ಲಿ ಸ್ಪೀಕರ್ ವಿರುದ್ಧದ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ ಆರಂಭಿಸಿ ಮಾತನಾಡಿ, ಓಂ ಬಿರ್ಲಾ ಅವರು ಪಕ್ಷಪಾತಿಯಾಗಿ ವರ್ತಿಸುತ್ತಿದ್ದಾರೆ. ಫೆಬ್ರವರಿಯಲ್ಲಿ ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯ ಸಮಯದಲ್ಲಿ ಪ್ರತಿಪಕ್ಷಗಳ ಸದಸ್ಯರಿಗೆ ಸಂಸತ್ತಿನ ಮಾತನಾಡಲು ಅವಕಾಶ ನೀಡಲಿಲ್ಲ. ಏಕೆಂದರೆ ದೇಶದ ನಾಯಕತ್ವವು "ದುರ್ಬಲ"ವಾಗಿದೆ ಎಂದು ಟೀಕಿಸಿದ್ದಾರೆ. ಸ್ಪೀಕರ್ ಅವರು, ರಾಹುಲ್ ಗಾಂಧಿ ಮಾತನಾಡಲು ಅವಕಾಶ ನೀಡಲಿಲ್ಲ. ಸದನ ಮತ್ತು ದೇಶದ ಜನರಿಗೆ ತಿಳಿದಿರಬೇಕಾದ ಕೆಲವು ನಿರ್ಣಾಯಕ ವಿಷಯಗಳನ್ನು ಕಡ್ಡಾಯವಾಗಿ ಮಂಡಿಸಲು ಪ್ರಯತ್ನಿಸುವಾಗ ಎಲ್‌ಒಪಿಗೆ ಪದೇ ಪದೇ ಅಡ್ಡಿಪಡಿಸಲಾಯಿತು ಎಂದಿದ್ದಾರೆ.

## ದೇಶ ಪ್ರಗತಿಗೆ ಮಹಿಳೆಯೂ ಕಾರಣ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಭಾರತವು 2047ನೇ ಇಸವಿಗೆ ಅಭಿವೃದ್ಧಿ ಹೊಂದಿದ ದೇಶವಾಗಿ ಪರಿವರ್ತನೆ ಹೊಂದಲು ಪುರುಷರ ಜೊತೆಜೊತೆಯಲ್ಲಿ ಮಹಿಳೆಯರ ಪಾತ್ರವೂ ಬಹಳ ಮಹತ್ವವನ್ನು ಹೊಂದಿದೆ ಎಂಬ ನಂಬಿಕೆ ಪ್ರಧಾನಿ ನರೇಂದ್ರ ಮೋದಿಜೀ ಅವರದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಬೆಂಗಳೂರು ಮಹಾನಗರ ಮಹಿಳಾ ಮೋರ್ಚಾ ವತಿಯಿಂದ ಮಲ್ಲೇಶ್ವರದ ಹವ್ಯಕ ಭವನದಲ್ಲಿ ವಿಶ್ವ ಮಹಿಳಾ ದಿನಾಚರಣೆಯ ಪ್ರಯುಕ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ರಾಜ್ಯದಲ್ಲಿ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಾಗಿದ್ದಾಗ ಬಡವರ ಮನೆಯ ಹೆಣ್ಣುಮಗು ಶಾಪ ಎಂದು ತಿರಸ್ಕರಿಸುವ ಕಾಲಘಟ್ಟವಿತ್ತು. ಆ ಮಗು ಶಾಪವಲ್ಲ; ಭಾಗ್ಯಲಕ್ಷ್ಮಿ ಎಂದು ತಿಳಿಸಿ ಭಾಗ್ಯಲಕ್ಷ್ಮಿ ಯೋಜನೆಯನ್ನು ಜಾರಿಗೊಳಿಸಿದ್ದರು ಎಂದು ವಿವರಿಸಿದ್ದಾರೆ. ಆ ಮಗುವಿಗೆ ಬದುಕು ಕಟ್ಟಿಕೊಡುವ ಕೆಲಸವನ್ನು ಬಿಜೆಪಿ ಸರಕಾರ ಮಾಡಿದೆ. ಗ್ರಾಮೀಣ ಭಾಗದಲ್ಲಿ ಮೂಲಭೂತ ಸೌಕರ್ಯ, ಅನಾನುಕೂಲತೆ ಕಾರಣದಿಂದ 5, 6 ಅಥವಾ 7ನೇ ತರಗತಿ ಬಳಿಕ ಹೆಣ್ಮಕ್ಕಳು ಶಿಕ್ಷಣದಿಂದ ವಂಚಿತರಾಗಿ ಮನೆಯಲ್ಲೇ ಉಳಿಯುವ ಸ್ಥಿತಿ ಇತ್ತು. ಯಡಿಯೂರಪ್ಪನವರ ಬಿಜೆಪಿ ಸರಕಾರದ ಬೈಸಿಕಲ್ ಯೋಜನೆ ಮೂಲಕ ಹೆಣ್ಮಕ್ಕಳು ಶಿಕ್ಷಣದಿಂದ ವಂಚಿತರಾಗುವುದು ತಪ್ಪಿತು ಎಂದು ತಿಳಿಸಿದ್ದಾರೆ.

# ವಾರ್ ಕಾರ್ಮೋಡ ಗ್ಯಾಸ್ ಗಡಗಡ

## ಎಲ್ಲೆಲ್ಲೂ ಯುದ್ಧದ ಕಾರ್ಮೋಡ | ಅಡುಗೆ ಅನಿಲಕ್ಕಾಗಿ ಜನರ ಆತಂಕ | ಕೆಲ ಹೋಟೆಲ್‌ಗಳು ಬಂದ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಇರಾನ್, ಇಸ್ರೇಲ್ ಹಾಗೂ ಅಮೆರಿಕ ನಡುವಿನ ಯುದ್ಧದ ಬಿಸಿ ಮನೆಗಳಿಗೂ ತಾಕಿದೆ. ಅಪಾರ ಸಾವು ನೋವು ಒಂದೆಡೆ ಆದರೆ ಪೆಟ್ರೋಲ್ ಮತ್ತು ಅನಿಲ ಸರಬರಾಜಿನ ಮೇಲೆ ದಟ್ಟ ಪರಿಣಾಮ ಬೀರುತ್ತಿದೆ. ದೇಶದ ಪ್ರಮುಖ ನಗರಗಳಲ್ಲಿನ ಹೋಟೆಲ್, ರೆಸ್ಟೋರೆಂಟ್‌ಗಳು ಅಡುಗೆ ಅನಿಲ ಇಲ್ಲದೆ ಉದ್ಯಮವನ್ನು ಬಂದ್ ಮಾಡುವ ಹಂತಕ್ಕೆ ಹೋಗಿವೆ.

**ವಾಣಿಜ್ಯ ಅನಿಲ್ ಅಭಾವ:** ಬೆಂಗಳೂರು ನಗರದ ಹಲವಾರು ಹೋಟೆಲ್, ರೆಸ್ಟೋರೆಂಟ್‌ಗಳ ಸಿಬ್ಬಂದಿ ಪ್ರತಿಕ್ರಿಯಿಸಿ, ಸ್ಟಾಕ್ ಖಾಲಿಯಾದ ಬಳಿಕ ಅವುಗಳನ್ನು ಮುಚ್ಚಬೇಕಾಗುತ್ತದೆ ಎಂದು ಅಲವತ್ತುಕೊಂಡಿದ್ದಾರೆ. ಪೂರೈಕೆ ಸಮಸ್ಯೆಯನ್ನು ಆದಷ್ಟು ಬೇಗ ಪರಿಹರಿಸುವ ಸಾಧ್ಯತೆ ಇದೆ ಎಂದಿದ್ದಾರೆ.

**ಹೋಟೆಲ್‌ಗಳ ಸಂಘ ಹೇಳಿದ್ದು:** ಯುದ್ಧದಿಂದ ಉಂಟಾದ ಹೆಚ್ಚುತ್ತಿರುವ ಇಂಧನ ವೆಚ್ಚ, ಪೂರೈಕೆ ನಿರ್ಬಂಧಗಳ ನಡುವೆ ವಾಣಿಜ್ಯ ಅನಿಲ ಸಿಲಿಂಡರ್‌ಗಳ ಪೂರೈಕೆಯಲ್ಲಿ ಹಠಾತ್ ಅಭಾವ ಉಂಟಾಗಿದೆ. ಇದ–ರಿಂದ ಹೋಟೆಲ್ ಸೇವೆ ಬಂದ್ ಮಾಡಬೇಕಾಗಿದೆ ಎಂದು ಬೆಂಗಳೂರು ಹೋಟೆಲ್‌ಗಳ ಸಂಘ ತಿಳಿಸಿದೆ.



### ಅಭಾವ ಹೆಚ್ಚಳಕ್ಕೆ ಕಾರಣ..?

ಪ್ರಾಚ್ಯ ಯುದ್ಧ ಸಂಘರ್ಷದ ಪರಿಣಾಮ ಬೇರೆ ಬೇರೆ ರೀತಿ ಉಪದ್ರಕ್ಕೆ ಕಾರಣವಾಗಿದೆ. ಇದೇ ಸಂದರ್ಭವನ್ನು ಬಳಸಿಕೊಂಡಿರುವ ಕೆಲವು ಸಂಸ್ಥೆಗಳು ಇಂಧನವನ್ನು ಸಂರಕ್ಷಿಸಲು ಮತ್ತು ತಮ್ಮ ಅಸ್ತಿತ್ವದಲ್ಲಿರುವ ಸ್ಟಾಕ್ ಅನ್ನು ದೀರ್ಘಕಾಲದವರೆಗೆ ವಿಸ್ತರಿಸಲು ಹೆಚ್ಚಿನ ಅನಿಲವನ್ನು ಬಳಸುವ ಕೆಲವು ತಿನಿಸುಗಳ ತಯಾರಿಕೆಯನ್ನೇ ನಿಲ್ಲಿಸಿವೆ. ಇದರಿಂದ ಆತಂಕ ಹೆಚ್ಚಿದೆ.

### ಬಿಜೆಪಿ ಸಂಸದರು ಎಲ್ಲಿ?

ಸಣ್ಣಪುಟ್ಟ ವಿಷಯ ಮುಂದಿಟ್ಟುಕೊಂಡು ಚೀರಾಡುತ್ತಿದ್ದ ನಮ್ಮ ಬಿಜೆಪಿ ಶಾಸಕರು, ಸಂಸದರು ಏಗೆಲ್ಲಿದ್ದಾರೆ? ವಾಣಿಜ್ಯ ಬಳಕೆಯ ಎಲ್ಪಿಜಿ ಸಿಲಿಂಡರ್ ಪೂರೈಕೆಯಲ್ಲಿ ಉಂಟಾಗಿರುವ ತೀವ್ರ ವ್ಯತ್ಯಯ ಬಗ್ಗೆ ಮೌನವೇಕೆ? ಭಯಬಿಟ್ಟು ಈ ಸಮಸ್ಯೆ ಕುರಿತು ಸಂಸತ್ತಿನಲ್ಲಿ ಚರ್ಚಿಸಬೇಕು. ಆನಪರ ಧ್ವನಿಯಾಗಬೇಕು ಎಂದಿದ್ದಾರೆ ಡಿಸಿಎಂ ಡಿಕೆಶಿವಕುಮಾರ್.

### ಅಗತ್ಯ ಸರಕು ಕಾಯಿದೆ ಜಾರಿ

ದೇಶಾದ್ಯಂತ ಅಡುಗೆ ಅನಿಲದ ನಿರಂತರ ಪೂರೈಕೆಗಾಗಿ ಸಂಸ್ಕರಣಾಗಾರ ಮತ್ತು ಪೆಟ್ರೋಕೆಮಿಕಲ್ ಘಟಕಗಳಿಗೆ ಎಲ್ಪಿಜಿ ಉತ್ಪಾದನೆ ಗರಿಷ್ಠಗೊಳಿಸಲು, ಹೈಡ್ರೋ ಕಾರ್ಬನ್ ಹೊಳೆಗಳನ್ನು ಎಲ್ಪಿಜಿ ಪೂಲ್‌ಗೆ ತಿರುಗಿಸಲು ಆದೇಶ ನೀಡಿದೆ.

### ಗ್ಯಾಸ್‌ಗಾಗಿ ಮುಗಿಬಿದ್ದರು..!

ವಿಜಯಪುರದ ಭಾರತ ಗ್ಯಾಸ್ ಮುಂಭಾಗ ಹೆಚ್ಚಿನ ಸಂಖ್ಯೆಯಲ್ಲಿ ಜನರು ಕ್ಯೂ ನಿಂತಿದ್ದಾರೆ. ಗ್ಯಾಸ್ ಸಿಗತ್ತೊ, ಇಲ್ಲವೊ ಎಂಬ ಆತಂಕ ಉಂಟಾಗಿದೆ. ಆದರೆ ಗ್ಯಾಸ್ ಅಂಗಡಿಯವರು ಮಾತ್ರ ಗೃಹ ಬಳಕೆಯ ಗ್ಯಾಸ್‌ಗೆ ಯಾವುದೇ ಸಮಸ್ಯೆ ಇಲ್ಲ ಎನ್ನುತ್ತಿದ್ದಾರೆ.

### ಗ್ಯಾಸ್ ಇರೋವರೆಗೆ ಸೇವೆ

ಹೋಟೆಲ್ ಮುಚ್ಚುವ ನಿರ್ಧಾರವು ವೈಯಕ್ತಿಕ. ಅವರ ಬಳಿ ಗ್ಯಾಸ್ ಇರುವವರೆಗೂ ಅವು ಕಾರ್ಯ ನಿರ್ವಹಿಸುತ್ತವೆ. ಗ್ಯಾಸ್ ಲಭ್ಯವಿಲ್ಲದಿದ್ದರೆ, ಬೇರೆ ಆಯ್ಕೆಗಳಿಲ್ಲ. ಆಗ ಅದು ಸ್ವಯಂಚಾಲಿತವಾಗಿ ಮುಚ್ಚಲ್ಪಡುತ್ತದೆ. ಕೊನೆಯ ಹನಿ ಗ್ಯಾಸ್ ಲಭ್ಯವಾಗುವವರೆಗೆ, ನಾವು ಅಡುಗೆ ಮಾಡಿ ಬಡಿಸುತ್ತೇವೆ ಎನ್ನುತ್ತಾರೆ ಈ ಬೆಂಗಳೂರು ಹೋಟೆಲ್‌ಗಳ ಸಂಘದ ಗೌರವಾಧ್ಯಕ್ಷ ಪಿಸಿ ರಾವ್.

## ಎಲ್ಲಾ ಮಹಿಳೆಯರಿಗೆ ಸಮಾನ ಹಕ್ಕು



**ನವದೆಹಲಿ:** ಏಕರೂಪ ನಾಗರಿಕ ಸಂಹಿತೆ ಪರ ಸುಪ್ರೀಂಕೋರ್ಟ್ ಬ್ಯಾಟ್ ಬೀಸಿದೆ. ದೇಶದ ಎಲ್ಲಾ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಖಾತ್ರಿಪಡಿಸುವ ಏಕೈಕ ಮಾರ್ಗವೆಂದರೆ ದೇಶಾದ್ಯಂತ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರುವುದು ಎಂದು ಅತ್ಯುನ್ನತ ನ್ಯಾಯಾಲಯ ಹೇಳಿದೆ. ಮುಸ್ಲಿಂ ವೈಯಕ್ತಿಕ ಕಾನೂನು (ಶರಿಯತ್) ಅಡಿಯಲ್ಲಿ ಮಹಿಳೆಯರ ಹಕ್ಕುಗಳ ಉಲ್ಲಂಘನೆಯನ್ನು ಆರೋಪಿಸಿ ಒಂದು ಬ್ಯಾಚ್ ಅರ್ಜಿಯ ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿಗಳ ನ್ಯಾಯಪೀಠ ಈ ತೀರ್ಪು ನೀಡಿದೆ.

## ಕೊಲೆ ಮಾಡಿದ್ದ ಬಾಲಕ ಸೆರೆ



**ಬಳ್ಳಾರಿ:** ಬಳ್ಳಾರಿಯಲ್ಲಿ ಖಾಸಗಿ ವಸತಿ ಶಾಲೆಯಲ್ಲಿ ಮಲಗಿದ್ದ ತನ್ನ ಸಹಪಾಠಿಗಳ ಮೇಲೆ ಮನಸೋ ಇಚ್ಛೆ ಹಲ್ಲೆ ನಡೆಸಿ ಒಬ್ಬನ ಸಾವಿಗೂ ಕಾರಣನಾಗಿದ್ದ ಬಾಲಕನನ್ನು ಪೊಲೀಸರು ಪತ್ತೆ ಹಚ್ಚಿ, ಬಂಧನಕ್ಕೊಳಪಡಿಸಿದ್ದಾರೆ. ಮಾ.7ರಾತ್ರಿಯಿಂದ ನಾಪತ್ತೆಯಾಗಿದ್ದ ಬಾಲಕನ ಪತ್ತೆಗಾಗಿ ಪೊಲೀಸರು ಪ್ರತ್ಯೇಕ ಏಳು ತಂಡ ರಚನೆ ಮಾಡಿದ್ದರು. ನಗರದ 7ಸಾವಿರ ಸಿಸಿಟಿವಿ ಪರಿಶೀಲಿಸಿದ ಪೊಲೀಸರು, ಖಚಿತ ಮಾಹಿತಿ ಮೇರೆಗೆ ಬಾಲಕನನ್ನು ಪತ್ತೆ ಹಚ್ಚಿದ್ದಾರೆ.

## ಮಾಧ್ಯಮ ಪ್ರವೇಶಕ್ಕೆ ನಿರ್ಬಂಧ ಇಲ್ಲ..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಭದ್ರತಾ ಕಾರಣಕ್ಕೆ ನಿರ್ದಿಷ್ಟ ಸ್ಥಳದಲ್ಲೇ ಬೈಟ್ ಪಡೆಯಲು ಸೂಚನೆ ನೀಡಲಾಗಿತ್ತೇ ಹೊರತು ವಿಧಾನಸೌಧಕ್ಕೆ ಮಾಧ್ಯಮಗಳ ಪ್ರವೇಶಕ್ಕೆ ನಿರ್ಬಂಧ ಹೇರಿಲ್ಲ ಎಂದು ರಾಜ್ಯ ಸರ್ಕಾರ ಸ್ಪಷ್ಟ ಪಡಿಸಿದೆ.

ವಾರ್ತಾ ಇಲಾಖೆ ಅನುಮತಿ ನೀಡಿರುವ ಪತ್ರಕರ್ತರನ್ನು ಹೊರತುಪಡಿಸಿ, ಪತ್ರಿಕಾ ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮಗಳಿಗೆ ವಿಧಾನಸೌಧಕ್ಕೆ ಪ್ರವೇಶವಿಲ್ಲ ಎಂದು ಇತ್ತೀಚೆಗೆ ಸರ್ಕಾರ ಆದೇಶ ಹೊರಡಿಸಿತ್ತು. ಈ ಆದೇಶದ ವಿರುದ್ಧ ಪ್ರತಿಪಕ್ಷಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದವು. ವಿಧಾನಸಭೆಯ ಪ್ರತಿಪಕ್ಷದ ನಾಯಕ ಅಶೋಕ ಅವರ ಪತ್ರಕ್ಕೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಕಾರ್ಯದರ್ಶಿ ಡಾ. ಕೆ.ಜಿ.ಜಗದೀಶ ಅವರು ಮಾ.5 ರಂದು ಉತ್ತರ ನೀಡಿದ್ದಾರೆ. ವಿಧಾನಸೌಧ ಮತ್ತು ಸಭಾಂಗಣ ಸಂಕೀರ್ಣದ ಒಳಭಾಗದಲ್ಲಿ ಮಾಧ್ಯಮ ಮಾನ್ಯತಾ ಕಾರ್ಡ್ ಹೊಂದಿರುವ ಮಾಧ್ಯಮ ಪ್ರತಿನಿಧಿಗಳಿಗೆ ವಿಧಾನಸೌಧದಲ್ಲಿ ನಡೆಯುವ ಕಾರ್ಯಕ್ರಮಗಳು, ಕಾರ್ಯಾಗಾರ ಹಾಗೂ ಸಭೆಗಳಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿದೆ.

## ಡಿಸಿಎಂ ಡಿಕೆಶಿ ಜೊತೆ ನಾವೆಲ್ಲಾ ಇದ್ದೇವೆ..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಸರ್ಕಾರದ ಎಲ್ಲಾ ನಾಯಕರು ಸಂಪೂರ್ಣ ಬೆಂಬಲ ನೀಡುತ್ತಿದ್ದಾರೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ. ಡಿಕೆಶಿವಕುಮಾರ್ ಅವರು ದೆಹಲಿಯಿಂದ ಒಂದು ದಿನ ತಡವಾಗಿ ಬೆಂಗಳೂರಿಗೆ ಆಗಮಿಸಿದರೂ ಯಾವುದೇ ಸಮಸ್ಯೆಯಿಲ್ಲ ಎಂದು ತಿಳಿಸಿದ್ದಾರೆ.

ವಿಧಾನಸೌಧ ಬಳಿ ಪತ್ರಕರ್ತರ ಜೊತೆಗೆ ಮಾತನಾಡಿದ ಸತೀಶ್ ಜಾರಕಿಹೊಳಿ, ಡಿ ಕೆಶಿವಕುಮಾರ್ ಅವರ ಅನುಪಸ್ಥಿತಿಯಲ್ಲಿ ರಾಜ್ಯ ನಾಯಕತ್ವವು ಎಲ್ಲಾ ವಿಚಾರಗಳನ್ನು ನಿರ್ವಹಿಸಲಿದೆ ಎಂದಿದ್ದಾರೆ.

ನಾವು ಎಲ್ಲರೂ ಡಿ.ಕೆ.ಶಿ ಅವರೊಂದಿಗೆ ನಿಂತಿದ್ದೇವೆ. ಅವರು ನಾಳೆ ಮರಳಿದರೂ ಯಾವುದೇ ಸಮಸ್ಯೆಯಿಲ್ಲ. ಇಲ್ಲಿ ನಡೆಯುವ ಕೆಲಸಗಳನ್ನು ನಾವು ನೋಡಿಕೊಳ್ಳುತ್ತೇವೆ ಎಂದು ಉಪ ಮುಖ್ಯಮಂತ್ರಿ ದೆಹಲಿಯಲ್ಲಿ ಇನ್ನೂ ಉಳಿಯುತ್ತಿರುವ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದ್ದಾರೆ.

## ಒಳಮೀಸಲಿಗಾಗಿ ಬೆಂಗಳೂರು ಚಲೊ




• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಒಳಮೀಸಲಾತಿಗಾಗಿ ನಮ್ಮ ಮಾದಿಗ ಸಮಾಜದಿಂದ ಹೋರಾಟಗಾರರು, ಬುದ್ಧಿಜೀವಿಗಳಿಗೆ ಇತರರು ಸೇರಿದಂತೆ 35 ವರ್ಷಗಳು ಕಾಲ ಸುಧೀರ್ಘ ಹೋರಾಟ ಮಾಡುತ್ತಾ ಬಂದಿದ್ದಾರೆ.

ಇದರ ಪ್ರತಿಫಲವಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಒಂದು ತೀರ್ಮಾನ ತೆಗೆದುಕೊಂಡು ಸರ್ಕಾರದಿಂದ ಏಳು ಜನರ ನ್ಯಾಯಾಧೀಶರನ್ನು ನೇಮಕ ಮಾಡಿ ಒಳ ಮೀಸಲಾತಿ ಸಾರಾಂಶ ಪಡೆದುಕೊಂಡು ಸರ್ಕಾರ ಜಾರಿಗೆ ತರಲು ಮುಂದಾಗಬೇಕೆಂದು ಒತ್ತಾಯಿಸಿ ದಿನಾಂಕ 12 ರಂದು ಬೆಂಗಳೂರು ಫ್ರೀಡಮ್ ಪಾರ್ಕಿನಲ್ಲಿ ಬೃಹತ್ ಹೋರಾಟವನ್ನು ಹಮ್ಮಿಕೊಳ್ಳಲಾಗಿದೆ ಈ ಹೋರಾಟಕ್ಕೆ ಮಾದಿಗ ಸಮುದಾಯದಿಂದ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಮಾದಿಗ ಕ್ಷೇಮಾಭಿವೃದ್ಧಿ ಸಂಘದ ತಾಲೂಕು ಅಧ್ಯಕ್ಷರಾದ ಮರಿಯಪ್ಪ ಜಾಲಿಹಾಳ ಕರೆ ನೀಡಿದ್ದಾರೆ. ಮಾದಿಗ ಸಮುದಾಯ ಹಿರಿಯ ಮುಖಂಡರು ಅಲ್ಲಮ ಪ್ರಭು ಪೂಜಾರ್, ಸುಭಾಷ್ ಫ್ರಾಂಕ್ಲಿನ್, ರಾಮಣ್ಣ ಸಾಸಲಮರಿ, ಭೀಮೇಶ ಕವಿತಾಳ ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಸ್ವಾಭಿಮಾನಿ ಚಪ್ಪಲಿ ಪಾಲೀಶ್ ಈರಪ್ಪಾ..!

• ಮಲ್ಲಮ್ಮ ನುಡಿ ವಾರ್ತೆ ಮಲ್ಲಿಕಾರ್ಜುನ ರಡ್ಡಿ ಹುಮನಾಬಾದ್

ಕಾಯಕವೇ ಕೈಲಾಸ ಎಂದರು ಬಸವಣ್ಣ. ಸ್ವಾಭಿಮಾನದಿಂದ ಬದುಕಲು ಶ್ರಮವೇ ಮುಖ್ಯ ಎಂಬುದನ್ನು ಸಾಬೀತುಪಡಿಸಿದ್ದಾರೆ ಈರಪ್ಪಾ ಗಂಗಾರಾಮ. ವೃತ್ತಿಯಾಗಿ ಚಪ್ಪಲಿ ಪಾಲೀಶ್ ಮಾಡುವ ಕೆಲಸ ಮಾಡಿಕೊಂಡಿರುವ ಇವರು ಪ್ರತಿದಿನ 300 ದುಡಿದು ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ.

ಹುಮನಾಬಾದ್ ಪ್ರವಾಸಿ ಮಂದಿರ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಕುಳಿತು ಚಪ್ಪಲಿ ಪಾಲೀಶ್ ಮಾಡುವ ಮೂಲಕ ಜನರಿಗೆ ಸೇವೆ ನೀಡುತ್ತಿರುವ ಇವರು, ಯಾವ ಕೆಲಸವೂ ದೊಡ್ಡದಲ್ಲ, ಯಾವುದೂ ಸಣ್ಣದಲ್ಲ ಎಂಬ ಸಂದೇಶವನ್ನು ಸಾರುತ್ತಿದ್ದಾರೆ.



### ಸರ್ಕಾರ ಪ್ರಶಸ್ತಿ ಕೊಡಲಿ

ನಿತ್ಯವೂ ಕಾಯಕದಲ್ಲಿ ತೊಡಗಿಕೊಂಡು ತಮ್ಮ ಜೀವನ ಸಾಗಿಸುತ್ತಿರುವ ಈರಪ್ಪಾ ಗಂಗಾರಾಮ ಅವರ ಶ್ರಮ ನಿಜಕ್ಕೂ ಪ್ರಶಂಸನೀಯ. ಇಂಥವರಿಗೆ ಸರ್ಕಾರ ಗುರುತಿಸಿ, ಪ್ರಶಸ್ತಿ ನೀಡಿ ಗೌರವವಿಸಬೇಕು. ಸರ್ಕಾರದಿಂದ ಸಿಗುವ ಸೌಲಭ್ಯ ಕಲ್ಪಿಸಬೇಕು ಎನ್ನುವುದು ಜನರ ಆಗ್ರಹವಾಗಿದೆ.

### ಪ್ರಾಮಣಿಕ ಕಾಯಕಕ್ಕೆ ಮನ್ನಣೆ

ಸಾಮಾನ್ಯ ಜೀವನವಿದ್ದರೂ ತಮ್ಮ ಕಾಯಕದಲ್ಲಿ ಪ್ರಾಮಾಣಿಕತೆಯಿಂದ ನಿರತರಾಗಿರುವ ಇವರು ಯುವಕರಿಗೆ ಕೂಡ ಪ್ರೇರಣೆ. ದುಡಿಮೆ ಮತ್ತು ಸ್ವಾಭಿಮಾನದಿಂದ ಬದುಕುವ ಅವರಂತಹ ಶ್ರಮಜೀವಿಗಳನ್ನು ಸಮಾಜ ಗೌರವದಿಂದ ಕಾಣಬೇಕು ಎಂಬುದು ಇವರ ಹಿತೈಷಿಗಳ ಒತ್ತಾಯ.

ಕೇಂದ್ರ ಸರ್ಕಾರ ವಾಣಿಜ್ಯ ಬಳಕೆಯ ಎಲ್.ಪಿ ಜಿ ಸಿಲಿಂಡರ್ ಗೆ 115ರೂ. ಗಳನ್ನು ಹಾಗೂ ಮನೆ ಬಳಕೆಯ ಸಿಲಿಂಡರ್ ಗೆ 60 ರೂ ಹೆಚ್ಚಳ ಮಾಡಿದೆ. ಅವರು ಮಾಡುತ್ತಿರುವುದು ಸರಿಯಲ್ಲ: ಸಿದ್ದರಾಮಯ್ಯ, ಸಿಎಂ

# ನೆಹೆಮಿಯಾ ಶಾಲೆಯಲ್ಲಿ ವಾರ್ಷಿಕೋತ್ಸವ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ




• ಮಲ್ಲಮ್ಮ ನುಡಿ ವಾರ್ತೆ ಬೀದರ

ನಗರದ ನೆಹೆಮಿಯಾ ಶಾಲೆಯಲ್ಲಿ ವಾರ್ಷಿಕೋತ್ಸವ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮವನ್ನು ಬೀದರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಪ್ರದೀಪ ಗುಂಟಿ ಹಾಗೂ ಶೈನಿ ಗುಂಟಿ ಅವರು ಉದ್ಘಾಟಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಪ್ರದೀಪ ಗುಂಟಿ ಅವರು ಮಹಿಳೆಯರ ಸಬಲೀಕರಣ, ಶಿಕ್ಷಣದ ಮಹತ್ವ ಹಾಗೂ ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಅವಕಾಶಗಳ ಅಗತ್ಯತೆ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಮಹಿಳೆಯರು ಸಮಾಜದ ಅಭಿವೃದ್ಧಿಯಲ್ಲಿ ಮಹತ್ವದ

ಪಾತ್ರವಹಿಸುತ್ತಾರೆ, ಮಹಿಳಾ ದಿನಾಚರಣೆಯನ್ನು ವಾರ್ಷಿಕೋತ್ಸವದೊಂದಿಗೆ ಆಚರಿಸುವುದರಿಂದ ವಿದ್ಯಾರ್ಥಿಗಳಲ್ಲಿ ಮಹಿಳೆಯರ ಬಗ್ಗೆ ಗೌರವ, ಸಮಾನತೆ ಹಾಗೂ ಸಾಮಾಜಿಕ ಜವಾಬ್ದಾರಿಯ ಅರಿವು ಮೂಡಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು. ನೃತ್ಯ, ಗೀತೆಗಳು, ನಾಟಕಗಳು ಹಾಗೂ ಸಂದೇಶಾತ್ಮಕ ಪ್ರದರ್ಶನಗಳ ಮೂಲಕ ಮಹಿಳಾ ಸಬಲೀಕರಣ

, ಸಾಮಾಜಿಕ ಜಾಗೃತಿ ಹಾಗೂ ಶಿಕ್ಷಣದ ಮಹತ್ವವನ್ನು ಮನದಟ್ಟುಗೊಳಿಸಿದರು. ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಅತಿಥಿಗಳು ಮತ್ತು ಪೋಷಕರ ಮೆಚ್ಚುಗೆಗೆ

ಪಾತ್ರವಾದವು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಲಾಯಿತು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಶಾಲೆಯ ಮಹಿಳಾ ಶಿಕ್ಷಕಿಯರನ್ನು ಗೌರವಿಸಲಾಯಿತು. ಶಿಕ್ಷಣ ಕ್ಷೇತ್ರದಲ್ಲಿ ಅವರ ಸೇವೆಯನ್ನು ಶ್ಲಾಘಿಸಿ ಶಾಲೆಯ ಆಡಳಿತ ಮಂಡಳಿ ಹಾಗೂ ಅತಿಥಿಗಳು ಅಭಿನಂದನೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಸಂಸ್ಥಾಪಕಿ ಇಂದಿರಾ ನೆಹೆಮಿಯಾ, ಹಾಗೂ ಕಾರ್ಯದರ್ಶಿ ಮೈಕಲ್ ನೆಹೆಮಿಯಾ ಉಪಸ್ಥಿತರಿದ್ದು ವಿದ್ಯಾರ್ಥಿಗಳಿಗೆ

ಪ್ರೋತ್ಸಾಹ ನೀಡಿದರು. ಇದೇ ಸಂದರ್ಭದಲ್ಲಿ ಮೈಕಲ್ ಮೆಡಂ, ಶ್ರದ್ಧಾ ಗುದಗೆ, ನವಾಜ್ ಖಾನ್, ಸಯ್ಯದ್ ಹಾಶ್ಮಿ, ಡಾ. ಅನುರಾಧಾ ಶಾ ಹಾಗೂ ಡಾ. ಪ್ರಾಚಿ ಅವರು ವಿಶೇಷ ಅತಿಥಿಗಳಾಗಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಶಿಕ್ಷಕರು, ಪೋಷಕರು ಹಾಗೂ ಅನೇಕ ಗಣ್ಯರು ಉಪಸ್ಥಿತರಿದ್ದು ವಿದ್ಯಾರ್ಥಿಗಳ ಪ್ರತಿಭೆಯನ್ನು ಮತ್ತು ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದ ಶಾಲಾ ಆಡಳಿತ ಮಂಡಳಿಯ ಪ್ರಯತ್ನವನ್ನು ಮೆಚ್ಚಿದರು.

# ಸೋನಾಳ ಗ್ರಾಮಾಭಿವೃದ್ಧಿ ಯೋಜನೆ ಅಶಕ್ತರಿಗೆ ಚಕ್ರದ ಕುರ್ಚಿ ವಿತರಣೆ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

"ಸೇವೆಯೇ ಪರಮ ಧರ್ಮ" ಎಂಬ ಧ್ಯೇಯವಾಕ್ಯದೊಂದಿಗೆ ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಅಶಕ್ತರ ಬಾಳಿಗೆ ಬೆಳಕಾಗುತ್ತಿದೆ.


ತಾಲೂಕಿನ ಸೋನಾಳ ಗ್ರಾಮದಲ್ಲಿ ಇತ್ತೀಚೆಗೆ 'ಜನಮಂಗಳ' ಕಾರ್ಯಕ್ರಮದ ಅಡಿಯಲ್ಲಿ ವಿಶೇಷ ಚೇತನರಿಗೆ ಸಾಧನ ಸಲಕರಣೆ ವಿತರಿಸುವ ಕಾರ್ಯಕ್ರಮ ನಡೆಯಿತು.

ಕಳೆದ ಏಳು ವರ್ಷಗಳಿಂದ ಅಂಗವಿಕಲತೆಯಿಂದ ಬಳಲುತ್ತಿದ್ದ ಗ್ರಾಮದ ನಿವಾಸಿ ಮಲ್ಲಿಕಾರ್ಜುನ್ ಶಿವಪ್ಪ ಪಾರ್ಶೆಟ್ಟಿ ಅವರಿಗೆ ಯೋಜನೆಯ ವತಿಯಿಂದ ಉಚಿತವಾಗಿ ವೀಲ್ ಚೇರ್ (ಚಕ್ರದ ಕುರ್ಚಿ) ವಿತರಿಸಲಾಯಿತು.

ಈ ವೇಳೆ ತಾಲೂಕು ಯೋಜನಾಧಿಕಾರಿಗಳಾದ ರಾಘವೇಂದ್ರ ಅವರು ಫಲಾನುಭವಿಗೆ ವೀಲ್ ಚೇರ್ ಹಸ್ತಾಂತರಿಸಿ, ಯೋಜನೆಯ ಸಾಮಾಜಿಕ ಕಾಳಜಿಯ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಸತೀಶ್,

ವಲಯದ ಮೇಲ್ವಿಚಾರಕರಾದ ಶರಣಬಸಪ್ಪ, ಸ್ಥಳೀಯ ಸೇವಾಪ್ರತಿನಿಧಿ ಮೀನಾಕ್ಷಿ, ಹಾಗೂ ಸೇವಾಕರ್ತರಾದ ಆದರ್ಶ್ ಮತ್ತು ಮಲ್ಲಿಕಾರ್ಜುನ್ ಮಾರುತಿ ಉಪಸ್ಥಿತರಿದ್ದರು.




**ಚಿಟಗುಪ್ಪ: ಶಿವಯೋಗಿ ಧೂಳಯ್ಯಾ ಮಠ ಹಾಗೂ ಅವರ ಧರ್ಮ ಪತ್ನಿ ಪಾರ್ವತಮ್ಮಾ ಇವರ ಸತ್ಯ ಸಂಕಲ್ಪದಂತೆ ಮಾರ್ಚ್ 10ರಂದು ತಾಲೂಕಿನ ಇಟಗಾ ಗ್ರಾಮದ ತೋಟದಲ್ಲಿ 3ನೇ ವರ್ಷದ ಶಿವಪಾರ್ವತಿ, ಗಣೇಶ್, ಕಾರ್ತಿಕ ಹಾಗೂ ನಂದಿ ಲಕ್ಷ್ಮಿ ಪೂಜಾ ಮತ್ತು ಗೋ ಮಾತೆಯ ಪೂಜಾ ಕಾರ್ಯಕ್ರಮಗಳು ವಿಶ್ವಶಾಂತಿ ಮನುಕುಲದ ಉದ್ಧಾರಕ್ಕಾಗಿ ಪ್ರತಿ ವರ್ಷ ಆಚರಿಸಿಕೊಂಡು ಬರಲಾಗುತ್ತಿದೆ ಎಂದರು. ಕಾರ್ಯಕ್ರಮದ ದಿವ್ಯ ಸಾನಿಧ್ಯ ಪರಮ ಪೂಜ್ಯ ಶ್ರೀಶ್ರೀಶ್ರೀ ಶಿವಯೋಗಿ ಧುಳಯ್ಯಾ ಮಠ ವಹಿಸಿದರು. ಅಧ್ಯಕ್ಷತೆ ರೇವಪ್ಪ ಪಾಟೀಲ್ ವಹಿಸಿದ್ದರು. ಆಚಾರ್ಯ ಕಲ್ಯಯ, ವಿರೂಪಾಕ್ಷ ಮತ್ತು ಸಂಗೀತ ಕಲಾವಿದರಾದ ಕೃಷ್ಣ ಮಳಸಾಪುರ, ಶರಣು ನೇಳಕೂಡ, ರಮೇಶ್ ಪಂಚಾಳ, ಮಲ್ಲಿಕಾರ್ಜುನ ರೆಡ್ಡಿ, ಚಂದ್ರಕಾಂತ ನಾರಯಣಪೂರ, ಜಗದೀಶ್ ಮಠ, ಶಂಕರಯ್ಯ ಡಾಕುಳಗಿ, ಸೇರಿದಂತೆ ಅಪಾರ ಭಕ್ತರು ಆಗಮಿಸಿ ದೇವರ ದರ್ಶನ ಪಡೆದರು.(ಮಲ್ಲಮ್ಮ ನುಡಿ ಚಿತ್ರ)**

# ಸಾಧನೆಗೆ ಗುರಿ ಮುಖ್ಯ: ಹಳ್ಳದ್




• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಬೇಕು. ಸಾಧನೆಗೆ ಮಹೋನ್ನತ ಗುರಿ ಹೊಂದಿರಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ್ ಹೇಳಿದರು.

ತಾಲೂಕಿನ ಕಲವಾಡಿ ಗ್ರಾಮದ ಮಹಾತ್ಮಾಗಾಂಧಿ ಪ್ರೌಢಶಾಲೆಯಲ್ಲಿ, ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ನಿಮಿತ್ಯ ಮಂಗಳವಾರ ನಡೆದ 42ನೇ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು. ಕೆಲವೇ ದಿನಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆ ಪ್ರಾರಂಭವಾಗುತ್ತವೆ. ಪರೀಕ್ಷೆಗಳಲ್ಲಿ ಯಾವುದೇ ಆತಂಕಕ್ಕೆ ಒಳಗಾಗದೇ ಮಹೋನ್ನತ ಗುರಿಯೊಂದಿಗೆ ಪರೀಕ್ಷೆ ಎದುರಿಸಬೇಕು. ಉತ್ತಮ ಗುರಿಯನ್ನು ಹೊಂದಿರುವ ಸಾಧನೆ ಯಾವತ್ತೂ ವ್ಯರ್ಥವಾಗುವುದಿಲ್ಲ. ಹೀಗಾಗಿ ಸಾಧನೆಗೆ ಉತ್ತಮ ಗುರಿ ಮುಖ್ಯವಾಗಿದೆ. ಪರೀಕ್ಷೆಗಳನ್ನು ಹಬ್ಬದಂತೆ ಸಂಭ್ರಮಿಸಿ, ಉತ್ತಮ ಫಲಿತಾಂಶದತ್ತ ಗಮನ ಹರಿಸಿರಿ ಎಂದು ಕಿವಿಮಾತು ಹೇಳಿದರು. ಪರೀಕ್ಷಾ ಸಮಯದಲ್ಲಿ ಯಾವುದೇ ಅನಗತ್ಯ ಕಾರ್ಯಗಳಲ್ಲಿ ತೊಡಗಿಸಿಕೊಳ್ಳದೇ, ಓದಿನ ಕಡೆ ಹೆಚ್ಚಿನ ಗಮನ ಹರಿಸಬೇಕು ಎಂದು ಹೇಳಿದರು.

ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ದತ್ತಾತ್ರಿ ಕಾಟಕರ ಮಾತನಾಡಿ, ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಪಾಠ ಮಾಡಬೇಕು. ಸಂಸ್ಕಾರಯುತ ಶಿಕ್ಷಣದೊಂದಿಗೆ ಫಲಿತಾಂಶ ಹೆಚ್ಚಿಸುವಲ್ಲಿ ಗಮನ ಹರಿಸಬೇಕು ಎಂದು ಹೇಳಿದರು.

ಕರ್ನಾಟಕ ಪಬ್ಲಿಕ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ನಂದಾದೀಪ ಬೋರಾಳೆ ವಿದ್ಯಾರ್ಥಿಗಳೊಂದಿಗೆ ಪ್ರೇರಣಾದಾಯಕ ಮಾತುಗಳನ್ನಾಡಿ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ಕಾರ್ಯ ಮಾಡಿದರು. ಕೆ.ಎಲ್.ಇ ಶಿಕ್ಷಣ ಸಂಸ್ಥೆಯ ನಿರ್ದೇಶಕಿ ಕ್ರಾಂತಿ ಬಸಪ್ಪಾ ಕಲವಾಡಿಕರ್ ಶಿಕ್ಷಣ ಸಂಸ್ಥೆ ನಡೆದುಬಂದ ದಾರಿಯ ಬಗ್ಗೆ ಮಾತನಾಡಿದರು. ಕೆಎಲ್ಇ ಸಂಸ್ಥೆಯ ಅಧ್ಯಕ್ಷೆ ಮೋಜಾಬಾಯಿ ಕಲವಾಡಿಕರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಖ್ಯಶಿಕ್ಷಕ ಶಿವಕುಮಾರ ವಾಡಿಕರ ಪ್ರಾಸ್ತಾವಿಕ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಮೂಹ ಸಂಪನ್ಮೂಲ ವ್ಯಕ್ತಿ ಸಂತೋಷ ಧಬಾಲೆ, ಭಾಷಾ ಅಲ್ಪಸಂಖ್ಯಾತ ಶಿಕ್ಷಕರ ರಾಜ್ಯ ಉಪಾಧ್ಯಕ್ಷ ಸುಧಾಕರ ಗಾಯಕವಾಡ, ನಿವೃತ್ತ ಮುಖ್ಯಶಿಕ್ಷಕ ಜಯರಾಜ ದಾಬಶೆಟ್ಟಿ, ಯುವಕ್ರಾಂಗ್ರೆಸ್ ಮುಖಂಡ ಭತ್ತಸಿದ್ದಾ, ವಿದ್ಯಾಭಾರತಿ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ಬಸವರಾಜ ತೇಗಂಪೂರೆ, ಪಂಡಿತರಾಯ ಬಿರಾದಾರ ಭಾಗ್ಯನಗರ, ವಿಜಯಕುಮಾರ ಗುತೆ-ದಾರ, ಆನಂದ ಖಂಡಗೊಂಡ, ವಿಜಯಲಕ್ಷ್ಮಿ [illegible]ರಾಠೋಡ, ಪ್ರದೀಪ ಜೊಳದಪಕೆ, ಓಂಝುಡ್ ಬಿರಾದಾರ, ಪ್ರವೀಣ ಸಿಂಧೆ ಉಪಸ್ಥಿತರಿದ್ದರು. ಶಿವಕುಮಾರ ಸ್ವಾಗತಿಸಿದರು. ವಿಜಯಕುಮಾರ ನಿರೂಪಿಸಿದರು. ಪ್ರದೀಪ ವಂದಿಸಿದರು.

# ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಸಹಾಯವಾಣಿ ಸ್ಥಾಪನೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ತಾಲೂಕು ಮಟ್ಟದ ಎಲ್ಲ 40 ಗ್ರಾಮ ಪಂಚಾಯತಿ ವ್ಯಾಪ್ತಿಗಳಲ್ಲಿ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಎಚ್ಚರಿಕೆ ವಹಿಸಲು ಹಾಗೂ ಸಮಸ್ಯೆಯಾದರೆ ಸಂಪರ್ಕಿಸಲು ತಾಲೂಕು ಪಂಚಾಯಿತಿ ಸಹಾಯವಾಣಿ ಆರಂಭಿಸಿದೆ ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸೂರ್ಯಕಾಂತ ಬಿರಾದಾರ್ ತಿಳಿಸಿದ್ದಾರೆ.



ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಯೂ ಸಹಾಯವಾಣಿ ಆರಂಭಿಸಲಾಗಿದ್ದು, ಭಾಲ್ಕಿ ತಾಲೂಕು ಪಂಚಾಯಿತಿ ಕಚೇರಿಯಲ್ಲಿ ಸುನಿಲ ಸನ್ಮುಖಪ್ಪ ಮೊ.ಸಂ.944196202 ಅವರನ್ನು ಸಂಪರ್ಕಿಸಬಹುದಾಗಿದೆ.

40 ಗ್ರಾಪಂ ಸಹಾಯವಾಣಿ ವಿವರ :

ಅಳವಾಯಿ ಮಂತಿವಂತ 8747075825, ಅಂಬೆಸಾಂಗವಿ ಗೀತಾ 9731619098, ಬಾಳೂರು ಜೀತೇಂದ್ರ 9481428961, ಬೀರಿ(ಬಿ) ಸುಭಾಷ 9242462909, ಭಾತಂಬ್ರಾ ಬಲಭೀಮ ಪವಾರ 9538935934, ಬ್ಯಾಲಹಳ್ಳಿ(ಕೆ) ಪ್ರವೀಣಕುಮಾರ 9945552517, ಚಳಕಾಪೂರ ದೇವೀಂದ್ರ 9481535208, ದಾಡಗಿ ಜೀತೇಂದ್ರ 9481428961, ಡಾವರಗಾಂವ ಸಿದ್ಧಾರ್ಥ 886111936, ಧನ್ನೂರಾ(ಎಚ್) ಸಂತೋಷ 9916486040, ಡೋಣಗಾಪೂರ ಅಮೂಲ ಮೇತ್ರ 7795581943, ಗೋರಚಿಂಚೋಳಿ ಪ್ರದೀಪ 9972925722, ಹಲಬರ್ಗಾ ಚಂದ್ರಕಾಂತ ಫುಲೆ 8884224375, ಇಂಚೂರ ಅನಿತಾ 6360030320, ಜ್ಯಾಂತಿ ರಾಹುಲ ದಂಡೆ 9844858635, ಜೋಳದಾಪಕಾ ಸಂಗಮೇಶ ಸಾವಳೆ 9740594626, ಕಣಜಿ ನರೇಂದ್ರ ಬಿರಾದಾರ್ 9535909525, ಖಟಕ್ ಚಿಂಚೋಳಿ ಶ್ವೇತಾ 7411891366, ಕೋನಮೇಳಕುಂದಾ ವಿಶ್ವಶೈಲಾ 6363849573, ಕುರುಬಖೇಳಗಿ ಶ್ರೀಕಾಂತ 9900221407, ಲಖಣಗಾಂವ ಸಂಗಮೇಶ ಸಾವಳೆ 9740594626, ಮದಕಟ್ಟಿ ಅನುರಾಜ ಪೂಜಾರಿ 7259854162, ಮಳಚಾಪೂರ ಮುನೀರ್ 9986940669, ಮೇಹಕರ್ ಧನರಾಜ ಜಡಗೆ 961118750, ಮೇಥಿ ಮೇಳಕುಂದಾ ಚಂದ್ರಶೇಖರ ಬನ್ನಾಳೆ 9880794351, ಮೊರಂಬಿ ಪ್ರಶಾಂತ ಪಾಟೀಲ್ 9972116112, ನಿಟ್ಟೂರ(ಬಿ) ರಾಜಕುಮಾರ ತಂಬಾಕೆ 9535755315, ಸಾಯಿಗಾಂವ ಅನಿಲ ಕಾಳೆ 9901747375, ಶಿವಣಿ ಸಚ್ಚಿದಾನಂದ ಸ್ವಾಮಿ 9880670814, ಸಿದ್ದೇಶ್ವರ ರಾಜಕುಮಾರ ಬಂಗಾರೆ 8722227018, ತಳವಾಡ(ಕೆ) ಪ್ರಭುಶೆಟ್ಟಿ

9036316731, ತೇಲಗಾಂವ ಬಾಲಾಜಿ ಬಿರಾದಾರ್ 9972424625, ತೂಗಾಂವ(ಎಚ್) ಗಣಪತಿ ಪಾಟೀಲ್ 9483441498, ವಾಂಜರಖೇಡ ಅನಿಲ ಕಾಳೆ 9901747375, ವರವಟ್ಟಿ(ಬಿ) ಬಸವರಾಜ ಪನಶೆಟ್ಟಿ 9741614678, ಏಣಕೂರ ಆನಂದ ಬೇಲೂರೆ 9448035296, ಬೀರಿ(ಕೆ) ಗೀತಾ ನಿಡಗುಂದಿ 9741167458, ಲಂಜವಾಡ ವಿಶ್ವದೀಪ 9482167489, ಅಟ್ಟರಗಾ ಧೋಂಡಿಬಾ 7760936077 ಮತ್ತು ಕೋಸಂ ರವಿ ಬೇಲೂರೆ 9480202951 ಅವರನ್ನು ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಸಮಾಜ ಅಭಿವೃದ್ಧಿಗೆ ಮಹಿಳೆ ಪಾತ್ರ ಪ್ರಮುಖ

• ಮಲ್ಲಮ್ಮ ನುಡಿ ವಾರ್ತೆ ಬೀದರ



ಮಹಿಳೆಯರು ಸಮಾಜದ ಅಭಿವೃದ್ಧಿಯಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತಿದ್ದಾರೆಂದು ಬೀದರ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ.ಎಸ್.ವಿ.ಪಾಟೀಲ್ ತಿಳಿಸಿದರು.

ಅವರು ಸೋಮವಾರ ತೆ-ೂಟಗಾರಿಕೆ ಮಹಾವಿದ್ಯಾಲಯದ ಸಭಾಂಗಣದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕುಟುಂಬದ ಬೆಳವಣಿಗೆಗೆ ಮಾತ್ರವಲ್ಲದೆ ಸಾಮಾಹಿಕ, ಶೈಕ್ಷಣಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಇವರ ಕೊಡುಗೆ ಅಪಾರವಾದುದು. ಮಹಿಳೆಯರಿಗೆ ಸಮಾನ ಹಕ್ಕುಗಳು ಮತ್ತು ಅವಕಾಶಗಳನ್ನು ನೀಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಬೀದರ ಅಕ್ಕಾಪಡೆ ರಾಜ್ಯ ಸಂಯೋಜಕರಾದ ಶೈನಿ ಗುಂಟಿ ಅವರು ಮಾತನಾಡಿ, ಮಹಿಳೆಯರು ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸುತ್ತಿದ್ದಾರೆ. ಮಹಿಳೆಯರು ಶಿಕ್ಷಣ, ರಾಜಕೀಯ, ವಿಜ್ಞಾನ ಮತ್ತು ಕ್ರೀಡೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಮಹತ್ತರ ಸಾಧನೆಗಳನ್ನು ಮಾಡಿದ್ದಾರೆ. ಸಮಾಜದ ಸಮಗ್ರ ಅಭಿವೃದ್ಧಿಗೆ ಮಹಿಳೆಯರ ಪಾತ್ರ ಅತ್ಯಂತ ಪ್ರಮುಖವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಮಹಿಳೆಯರಿಗೆ ಸಮಾನ ಅವಕಾಶಗಳು ಮತ್ತು ಸುರಕ್ಷತೆ ದೊರಕಿದಾಗ ಮಾತ್ರ ಸಮಾಜದಲ್ಲಿ ಸಮಾನತೆ ಸಾಧ್ಯವಾಗುತ್ತದೆ ಎಂದು ಹೇಳಿದರು.

ತೋಟಗಾರಿಕೆ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ. ವಿಜಯ ಮಾಹಾಂತೇಶ ಮಾತನಾಡಿ, ವಿದ್ಯಾರ್ಥಿಗಳಿಗಿಂತಲೂ ವಿದ್ಯಾರ್ಥಿನಿಯರಲ್ಲಿ ಧೈರ್ಯ ಇದೆ ಮತ್ತು

ಒಳ್ಳೆಯ ಸಾಧನೆ ಮಾಡಬೇಕೆಂಬ ಛಲವಿರುವುದರಿಂದ ವಿದ್ಯಾಭ್ಯಾಸದ ಜೊತೆಗೆ ಪಠೇತರ ಚಟುವಟಿಕೆಗಳಲ್ಲಿಯೂ ಸಹ ಅತ್ಯುತ್ತಮ ಮೈಲುಗಲ್ಲು ಸಾಧಿಸುತ್ತಿದ್ದಾರೆಂದರು.

ಕಾರ್ಯಕ್ರಮದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಆಯೋಜಿಸಲಾದ ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಡಾ. ಶ್ರೀನಿವಾಸ ಎನ್., ಡಾ. ಅಂಬ್ರೇಶ, ಡಾ. ಕಡ್ಲಿ ವೀರೇಶ ರಾಜಕುಮಾರ ಐ., ಕಾವೇರಿ ಅವಸಂಗರದ, ಕಿರಣ ರಾಠೋಡ, ಸುನಿತಾ ಎಮ್. ಕೆ., ವಿಶಾಲ ಎನ್. ಮತ್ತು ಶಾರದಾ ಮುಲಗಿ ಸೇರಿದಂತೆ ಇತರರು ಉಪಸ್ಥಿತರಿದ್ದರು. ಸ್ವಾಗತ ಡಾ. ಕವಿತಾ ರಾಠೋಡ, ಅತಿಥಿಗಳ ಪರಿಚಯ ಅನುರಾಧಾ ವಡಗಾವೆ, ನಿರೂಪಣೆ, ಮಹೇಶ್ವರಿ ದ್ವಿತೀಯ ವರ್ಷದ ವಿದ್ಯಾರ್ಥಿನಿ, ವಂದನಾರ್ಪಣೆ ಜಾನವಿ ಡಿ.ಆರ್. ಸಹಾಯಕ ಪ್ರಾಧ್ಯಾಪಕರು ಸುವ್ಯವಸ್ಥಿತವಾಗಿ ನಡೆಸಿಕೊಟ್ಟರು.

## ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



# ಮಾವುಗಳಿಗೆ ಸರಕಾರ ಬೆಂಬಲ ಬೆಲೆ ನೀಡಲಿ

ರಾಜ್ಯದಲ್ಲಿ ಬೇಸಿಗೆ ಕಾಲ ಆರಂಭವಾಗುತ್ತಿದ್ದಂತೆಯೇ ಮಾರುಕಟ್ಟೆಯಲ್ಲಿ ಮಾವಿನ ಹಣ್ಣುಗಳ ಆಗಮನ ಹೆಚ್ಚಾಗುತ್ತದೆ. ಮಾವು ಕರ್ನಾಟಕದ ಪ್ರಮುಖ ತೋಟಗಾರಿಕೆ ಬೆಳೆಗಳಲ್ಲಿ ಒಂದಾಗಿದೆ. ಸಾವಿರಾರು ರೈತರು ಮಾವಿನ ತೋಟಗಳನ್ನು ಬೆಳೆಸಿ ಜೀವನ ಸಾಗಿಸುತ್ತಿದ್ದಾರೆ. ಆದರೆ ಪ್ರತೀ ವರ್ಷವೂ ಮಾವು ಉತ್ಪಾದನೆ ಹೆಚ್ಚಾದಾಗ ಮಾರುಕಟ್ಟೆಯಲ್ಲಿ ಬೆಲೆ ಕುಸಿತವಾಗುವುದು ಸಾಮಾನ್ಯವಾಗಿದೆ. ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕುವ ಪರಿಸ್ಥಿತಿ ಉಂಟಾಗುತ್ತಿದೆ.

ರೈತರು ಒಂದು ಮಾವಿನ ತೋಟವನ್ನು ಬೆಳೆಸಲು ಹಲವಾರು ವರ್ಷಗಳ ಪರಿಶ್ರಮ ಮತ್ತು ಹೆಚ್ಚಿನ ವೆಚ್ಚ ಮಾಡಬೇಕಾಗುತ್ತದೆ. ಗೊಬ್ಬರ, ಔಷಧಿ, ಕಾರ್ಮಿಕ ವೆಚ್ಚ, ನೀರಾವರಿ ಸೇರಿದಂತೆ ಹಲವು ಖರ್ಚುಗಳನ್ನು ಭರಿಸಿ ಮಾವು ಬೆಳೆಯುತ್ತಾರೆ. ಆದರೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಸಿಗದ ಕಾರಣ ಅವರ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದಿಲ್ಲ. ಮಧ್ಯವರ್ತಿಗಳ ದಬ್ಬಾಳಿಕೆಯಿಂದ ರೈತರಿಗೆ ಇನ್ನಷ್ಟು ನಷ್ಟವಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಸರ್ಕಾರ ಮಾವು ಬೆಳೆಗಾರರ ಹಿತದೃಷ್ಟಿಯಿಂದ ಬೆಂಬಲ ಬೆಲೆ ಘೋಷಣೆ ಮಾಡುವ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕು. ಅಕ್ಕಿ, ಗೋಧಿ, ಕಬ್ಬು ಮೊದಲಾದ ಬೆಳೆಗಳಿಗೆ ನೀಡುವಂತೆ ಮಾವು ಸೇರಿದಂತೆ ಪ್ರಮುಖ ತೆ-ೂಟಗಾರಿಕೆ ಬೆಳೆಗಳಿಗೆ ಸಹ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಿದರೆ ರೈತರಿಗೆ ಆರ್ಥಿಕ ಭದ್ರತೆ ದೊರೆಯಲಿದೆ.

ಮಾವು ಉತ್ಪಾದನೆ ಹೆಚ್ಚಾಗುವ ಸಮಯದಲ್ಲಿ ಸರ್ಕಾರ ಖರೀದಿ ಕೇಂದ್ರಗಳನ್ನು ಆರಂಭಿಸಿ ರೈತರಿಂದ ನೇರವಾಗಿ ಮಾವು ಖರೀದಿ ಮಾಡುವ ವ್ಯವಸ್ಥೆ ಮಾಡಬೇಕು. ಜೊತೆಗೆ ಸಂಸ್ಕರಣಾ ಘಟಕಗಳು, ತಂಪು ಗೋದಾಮುಗಳು (ಕೋಲ್ಡ್ ಸ್ಟೋರೇಜ್) ಮತ್ತು ರಫ್ತು ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಿದರೆ ರೈತರಿಗೆ ಹೆಚ್ಚಿನ ಲಾಭ ಸಿಗಲಿದೆ.

ರೈತರು ದೇಶದ ಬೆನ್ನೆಲುಬು ಎಂದು ಹೇಳುವ ಸರ್ಕಾರ, ಮಾವು ಬೆಳೆಗಾರರ ಸಂಕಷ್ಟವನ್ನೂ ಅರ್ಥ ಮಾಡಿಕೊಂಡು ಸೂಕ್ತ ಕ್ರಮ ಕೈಗೊಳ್ಳುವುದು ಅವಶ್ಯಕವಾಗಿದೆ. ರೈತರು ಬೆಳೆದ ಬೆಳೆಗಳಿಗೆ ನ್ಯಾಯಯುತ ಬೆಲೆ ದೊರೆಯುವಂತಾದರೆ ಮಾತ್ರ ಕೃಷಿ ಕ್ಷೇತ್ರ ಬಲವಾಗುತ್ತದೆ. ಆದ್ದರಿಂದ ಸರ್ಕಾರ ಮಾವುಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡುವ ಮೂಲಕ ರೈತರ ಹಿತವನ್ನು ಕಾಪಾಡಬೇಕು.

# ಲಿಂಗಾಯತ ಗಣಮೇಳ ಉತ್ಸವ ಬಸವರಾಜ ಬುಳ್ಳಾ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಅಲ್ಲಮಗಿರಿ ಪ್ರದೇಶದಲ್ಲಿ ಮಾರ್ಚ್ 21 ಮತ್ತು 22, 2026 ರಂದು ನಡೆಯಲಿರುವ 21ನೇ ಲಿಂಗಾಯತ ಗಣಮೇಳ ಉತ್ಸವ ಸಮಿತಿಯ ಗೌರವಾಧ್ಯಕ್ಷರಾಗಿ ಜಾಗತಿಕ ಲಿಂಗಾಯತ ಮಹಾಸಭಾ ಕೇಂದ್ರ ಕಚೇರಿ ಬೆಂಗಳೂರು ಉಪಾಧ್ಯಕ್ಷರಾದ ಶ್ರೀ ಬಸವರಾಜ ಬುಳ್ಳಾ ಅವರನ್ನು ಆಯ್ಕೆ ಮಾಡಲಾಗಿದೆ.

ಪೂಜ್ಯ ಶ್ರೀನಿರಂಜನ ಮಹಾಜಗದ್ಗುರು ಡಾ.ಗಂಗಾದೇವಿ ಮಾತಾಜಿ ಅವರ ಆದೇಶದ ಮೇರೆಗೆ ಬಸವ ಧರ್ಮಪೀಠ ಕೂಡಲಸಂಗಮ, ರಾಷ್ಟ್ರೀಯ ಬಸವದಳ, ಲಿಂಗಾಯತ ಧರ್ಮ ಮಹಾಸಭಾ, ಲಿಂಗಾಯತ ಪರ ಸಂಘಟನೆಗಳು ಹಾಗೂ ಲಿಂಗಾಯತ ಗಣಮೇಳ ಉತ್ಸವ ಸಮಿತಿಯ ಸಂಯುಕ್ತ ಆಶ್ರಯದಲ್ಲಿ ಈ ಗಣಮೇಳವನ್ನು ಆಯೋಜಿಸಲಾಗಿದೆ.

12ನೇ ಶತಮಾನದಲ್ಲಿ ಮಹಾಮಾನವತಾವಾದಿ ವಿಶ್ವಗುರು ಬಸವಣ್ಣ ಅವರು ಸ್ಥಾಪಿಸಿದ ಅನುಭವ ಮಂಟಪದ ಶೂನ್ಯಪೀಠದ ಪ್ರಥಮ ಪೀಠಾಧ್ಯಕ್ಷರಾದ ಯೋಗಮಹಾಯೋಗಿ ಅಲ್ಲಮಪ್ರಭು ದೇವರು ಅಲ್ಲಮಗಿರಿಯಲ್ಲಿ ಜ್ಯೋತಿ ಪ್ರಜ್ವಲಿಸಿದ ಪವಿತ್ರ ಕ್ಷೇತ್ರದಲ್ಲಿ ಈ ಗಣಮೇಳ ನಡೆಯುತ್ತಿರುವುದು ವಿಶೇಷವಾಗಿದೆ. ಇಂದಿಗೂ ಆ ಜ್ಯೋತಿ ಪ್ರಜ್ವಲಿಸುತ್ತಿದ್ದು, ಈ ಕ್ಷೇತ್ರ ಲಿಂಗಾಯತ ಧರ್ಮದ ಪ್ರಸಾರ ಹಾಗೂ ವಚನ ಪರಂಪರೆಯ ಸಾಮಾಜಿಕ ಐಕ್ಯತೆಯ ಸಂದೇಶವನ್ನು ಸಾರುವ ಪ್ರಮುಖ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿದೆ.

ಈ ಹಿನ್ನೆಲೆಯಲ್ಲಿ ನಡೆಯಲಿರುವ ಗಣಮೇಳಕ್ಕೆ ಬಸವರಾಜ ಬುಳ್ಳಾ ಅವರನ್ನು ಗೌರವಾಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ. ಅವರ ಅಧ್ಯಕ್ಷತೆಯಿಂದ ಗಣಮೇಳಕ್ಕೆ ಇನ್ನಷ್ಟು ಗೌರವ ಮತ್ತು ಶೋಭೆ ಹೆಚ್ಚಲಿದೆ ಎಂದು ಆಯೋಜಕರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ಅಧಿಕ ಉಷ್ಣಾಂಶ ದಾಖಲಾಗುವ ಸಾಧ್ಯತೆ: ಜಿಲ್ಲಾಧಿಕಾರಿ

ರಾಯಚೂರು: ಭಾರತೀಯ ಹವಾಮಾನ ಇಲಾಖೆಯ ವರದಿಯ ಪ್ರಕಾರ ಮುಂದಿನ ದಿನಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಅಧಿಕ ಉಷ್ಣಾಂಶ ದಾಖಲಾಗುವ ಸಾಧ್ಯತೆಯಿದ್ದು, ಬಿಸಿ ಗಾಳಿ (ಹೀಟ್ ವೇವ್) ಎಚ್ಚರಿ-ಕೆ ನೀಡಲಾಗಿದೆ. ಹೀಟ್ ವೇವ್ ಸ್ಟ್ರೋಕ್ ನಿಂದಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಯಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಸಾರ್ವಜನಿಕರು ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಮನವಿ ಮಾಡುತ್ತಿದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ತಿಳಿಸಿದ್ದಾರೆ.

ಸಾರ್ವಜನಿಕರು ಏನು ಮಾಡಬೇಕು: ಸಾರ್ವಜನಿಕರು ರೇಡಿಯೋ, ಟಿವಿ, ದಿನ ಪತ್ರಿಕೆಗಳಲ್ಲಿ ಬಿಸಿಲಿನ ತಾಪಮಾನದ ಕುರಿತು ಮುನ್ಸೂಚನೆಗಳನ್ನು ಪಡೆದುಕೊಳ್ಳಬೇಕು. ಬಾಯಾರಿಕೆಯಿಲ್ಲದಿದ್ದರೂ ಸಾಧ್ಯವಾದಷ್ಟು ಹೆಚ್ಚಾಗಿ ನೀರನ್ನು ಕುಡಿಯಬೇಕು. ತೆಳುವಾದ ಸಡಿಲವಾದ ಹತ್ತಿಯ ಉಡುಪುಗಳನ್ನು ಧರಿಸಬೇಕು. ಆದಷ್ಟು ಬಿಳಿ ಬಣ್ಣದ ಬಟ್ಟೆಗಳ ಬಳಕೆ ಒಳ್ಳೆಯದು. ಬಿಸಿಲಿನಲ್ಲಿ ಹೊರಗೆ ಹೋಗುವಾಗ ರಕ್ಷಣಾತ್ಮಕ ಕನ್ನಡಕಗಳು, ಟೋಪಿ, ಬೂಟುಗಳು ಅಥವಾ ಚಪ್ಪಲಗಳನ್ನು ಬಳಸಬೇಕು.

# ಕಲಿಕೆ ಉತ್ತೇಜಿಸುವ ಕಾರ್ಯಕ್ರಮ : ತಾಂಡವ ಕೃಷ್ಣ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ / ಕಂಪ್ಲಿ

ತಾಲೂಕಿನ ಎಮ್ಮಿಗನೂರನ ಶ್ರೀ ವೆಂಕಯ್ಯ ಮೆಮೋರಿಯಲ್ ಶಾಲೆಯಲ್ಲಿ ನರ್ಸರಿ ತರಗತಿಯಿಂದ 2 ನೇತರಗತಿ ವಿದ್ಯಾರ್ಥಿಗಳ ವರ್ಷ ವಿಡೀ ಕಲಿಕೆಯ ಫಲಕಗಳ ಜ್ಞಾನದ ಪ್ರದರ್ಶನ ಕಾರ್ಯಕ್ರಮವನ್ನು ಬಹಳ ವಿಜೃಂಭಣೆಯಿಂದ ನಡೆಸಲಾಯಿತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜ್ಯೋತಿ ರವರು ಮಕ್ಕಳಲ್ಲಿ ಹಲವು ಪ್ರತಿಭೆಗಳು ಅಡಗಿಕೊಂಡಿದ್ದು,ಅವುಗಳನ್ನು ಶಿಕ್ಷಕರು ಗುರುತಿಸಿ ಪ್ರೋತ್ಸಾಹಿಸಬೇಕು, ಪ್ರತಿಯೊಂದು ಮಗುವಿನಲ್ಲೂ ಇದೇ ರೀತಿ ಒಂದಲ್ಲ ಒಂದು ಪ್ರತಿಭೆ ಅಡಗಿರುತ್ತದೆ. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬ ಮಾತೇ ಇದೆಯಲ್ಲ. ಅದನ್ನು ಗುರುತಿಸಿ ಬೆಳೆಸುವ ಕೆಲಸವನ್ನು ಪೋಷಕರು ಅಥವಾ ಶಿಕ್ಷಕರು ಮಾಡಬೇಕಾಗುತ್ತದೆ ಎಂದರು.

ನಂತರ ಅಧ್ಯಕ್ಷತೆ ವಹಿಸಿದ ಶಾಲಾ ಸಂಸ್ಥಾಪಕ ಎ. ತಾಂಡವ ಕೃಷ್ಣ ಮಾತನಾಡಿ ಮಕ್ಕಳ ಭೌತಿಕ ಮಾನಸಿಕ ಜ್ಞಾನಾತ್ಮಕ ಮೌಲ್ಯಯುತ ಶಿಕ್ಷಣವನ್ನು ನಾವು ನೀಡುವುದರ ಮೂಲಕ ಮುಂದಿನ ಭವಿಷ್ಯದ ಉತ್ತಮ ಪ್ರಜೆಗಳನ್ನು ರೂಪಿಸಲು ಸಹಕರಿಸುತ್ತೇವೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಕಾರ್ಯಕ್ರಮ ಆಕರ್ಷಣೆಯಾಗಿತ್ತು.



ಕಾರ್ಯದರ್ಶಿಗಳಾದ ಎ ಸುನಿತ, ಮುಖ್ಯಗುರುಗಳಾದ ಕೆ. ಎಚ್. ರಾಮು ಶಿಕ್ಷಕರಾದ ಬರ್ಮಾ, ವಿದ್ಯಾರ್ಥಿಗಳ ಪಾಲಕರಾದ ರಾಜಸಾಬ್. ಬಿ ಜಡಿ ಮೂರ್ತಿ, ವೀರೇಶ್, ಓರ್ವಾಯಿ. ಪಲ್ಲವಿ, ಶಾರದಾ, ನೀಲಮ್ಮ, ಲಕ್ಷ್ಮೀನಾರಾಯಣ, ವಿಜಯಲಕ್ಷ್ಮಿ, ಶಾಂಭವಿ, ಗೀತಾ, ಹಾಗೂ ರಾಯಮಣಿ ಎಲ್ಲಾ ಶಿಕ್ಷಕಿಯರು ಸೇರಿದಂತೆ ಪಾಲಕ– ಪೋಷಕರು ಉಪಸ್ಥಿತರಿದ್ದರು.

# ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಪೊಲೀಸ್ ವಶಕ್ಕೆ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ಗುರುಕುಲ ಶಾಲೆಯಲ್ಲಿ ಸಹಪಾಠಿಗಳು ಹಾಗೂ ಸಿಬ್ಬಂದಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ, ವಿದ್ಯಾರ್ಥಿಯೊಬ್ಬ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿ ಸ್ಥಳದಿಂದ ಪರಾರಿಯಾಗಿದ್ದ ಬಾಲಕನನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ನಗರದ ರೂಪನಗುಡಿ ರಸ್ತೆಯ ಗಂಗಪ್ಪ ಜಿನ್ ಬಳಿ ಸೋಮವಾರ ಸಂಜೆ ಪೊಲೀಸರು ವಶಕ್ಕೆ ಮುಂದಿನ ಕ್ರಮ ಕೈಗೊಂಡಿದ್ದಾರೆ. ನಗರದ ಗುರುಕುಲ ಖಾಸಗಿ ವಿದ್ಯಾ ಸಂಸ್ಥೆಯ ಹಾಸ್ಟೆಲ್ ನಲ್ಲಿ ವಾಸವಾಗಿದ್ದ ಮಕ್ಕಳಲ್ಲಿ 15 ವರ್ಷದ ವಿದ್ಯಾರ್ಥಿಯೊಬ್ಬ 7 ವಿದ್ಯಾರ್ಥಿಗಳು ಸೇರಿದಂತೆ ಸಿಬ್ಬಂದಿಯೊಬ್ಬರ ಮೇಲೆ ಹಲ್ಲೆ ಪರಾರಿಯಾಗಿದ್ದನು. ಘಟನೆಯಲ್ಲಿ 15 ವರ್ಷದ ಬಾಲಕನೊಬ್ಬನು ಮೃತಪಟ್ಟಿದ್ದು, ಈ ಕುರಿತು ಬ್ರೂಸ್ ಪೇಟೆ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದೆ. ಘಟನೆ ಬಳಿಕ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಪರಾರಿಯಾಗಿದ್ದನು. ಈತನ ಪತ್ತೆಗಾಗಿ ವಿಶೇಷ ತಂಡಗಳನ್ನು ರಚಿಸಲಾಗಿತ್ತು. ನಗರದ ರೂಪನಗುಡಿ ರಸ್ತೆಯ ಗಂಗಪ್ಪ ಜಿನ್ ಬಳಿ ಬಾಲಕನನ್ನು ವಶಕ್ಕೆ ಪಡೆಯುವಲ್ಲಿ ನಮ್ಮ ಪೊಲೀಸರು ಯಶಸ್ವಿಯಾಗಿದ್ದಾರೆ ಎಂದು ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್ ಅವರು ತಿಳಿಸಿದ್ದಾರೆ. ಜೆಜೆ ಕಾಯ್ದೆ 2015ರ ಕಲಂ 2(33) ಅನ್ವಯ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಅಪರಾಧ ವ್ಯಸಗಿದ್ದಾನೆ. ಕಾನೂನಿನನ್ವಯ ಪ್ರಕರಣದ ನೈಜತೆಯನ್ನು ಅರಿಯಲು ಸಮಗ್ರವಾಗಿ ಎಲ್ಲ ಆಯಾಮಗಳಿಂದ ತನಿಖೆ ನಡೆಸಲು ತನಿಖಾಧಿಕಾರಿಗಳಿಗೆ ಸೂಚಿಸಲಾಗಿದೆ. ಘಟನೆ ನಡೆದ ಶಾಲೆಯ ಆಡಳಿತ ಮಂಡಳಿಗೆ ಶಾಲೆ ಹಾಗೂ ಹಾಸ್ಟೆಲ್ ನಡೆಸಲು ಕಾನೂನಾತ್ಮಕವಾಗಿ ಪರವಾನಿಗೆ ಪಡೆದಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಬೇಕು ಎಂದು ಈಗಾಗಲೇ ನೋಟಿಸ್ ನೀಡಲಾಗಿದೆ. ಶಾಲೆಯು ಕಾನೂನು ಬದ್ಧವಾಗಿ ಪರವಾನಿಗೆ ಪಡೆದಿದೆಯೇ ಎಂದು ಪರಿಶೀಲನೆ ನಡೆಸಲು ಜಿ.ಪಂ.ಸಿಇಒ ಅವರೊಂದಿಗೆ ಪತ್ರ ವ್ಯವಹಾರ ನಡೆಸಲಾಗಿದೆ ಎಂದು ತಿಳಿಸಿದ್ದಾರೆ.

# ವ್ಯಕ್ತಿತ್ವವನ್ನು ರೂಪಿಸುತ್ತವೆ ಸಾಂಸ್ಕೃತಿಕ ಕಾರ್ಯಕ್ರಮಗಳು



ಮಲ್ಲಮ್ಮ ನುಡಿ ವಾರ್ತೆ ಕುರುಗೋಡು

ಸಾಂಸ್ಕೃತಿಕ ಕಾರ್ಯಕ್ರಮ ಗಳು ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸುತ್ತವೆ. ಹಾಗಾಗಿ ಶಾಲೆಯಲ್ಲಿ ಪ್ರತಿ ವರ್ಷ ವಾರ್ಷಿಕೋತ್ಸವ ಕಾರ್ಯಕ್ರಮ ವನ್ನು ನಡೆಸಿಕೊಂಡು ಬರಬೇಕು ಜೊತೆಗೆ ವಿದ್ಯಾರ್ಥಿಗಳ ಪ್ರತಿಭೆಗೆ ಸೂಕ್ತ ವೇದಿಕೆಯಗುತ್ತದೆ ಎಂದು ಪಾಸ್ ಕರ್ನಾಟಕ ಸಂಘಟನೆ ರಾಜ್ಯಾಧ್ಯಕ್ಷ ನೀಲಪ್ಪ ಮುಕ್ಕಣ್ಣನವರ್ ಹೇಳಿದರು.ಇಲ್ಲಿಗೆ ಸಮೀಪದ ಕಲ್ಲುಕಂಭ ಗ್ರಾಮದ ಮೇಘನಾ ಆಂಗ್ಲ ಮಾಧ್ಯಮ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.ಸರ್ಕಾರಿ ಶಾಲೆಗಳ ಶಿಕ್ಷಣ ಗುಣಮಟ್ಟಕ್ಕಿಂತ ಖಾಸಗಿ ಶಾಲೆಗಳ ಶಿಕ್ಷಣ ಗುಣಮಟ್ಟದ ಗಟ್ಟಿಯಾಗಿ ಇರುತ್ತದೆ ಕಾರಣ ಇಲ್ಲಿ ಸಂಸ್ಥೆ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ನಿಟ್ಟಿನಲ್ಲಿ ಒಗ್ಗಟ್ಟಾಗಿ ಶ್ರಮವಹಿಸುವ ಜೊತೆಗೆ ಪ್ರಾಯೋಗಿಕವಾಗಿ ಕೆಲಸ ಮಾಡುತ್ತಾರೆ ಮಕ್ಕಳಿಗೆ ಶಿಕ್ಷಣವು ಪೌಷ್ಟಿಕವಾಗಿರುತ್ತದೆ ಮಕ್ಕಳ ಮುಂದಿನ ಭವಿಷ್ಯಕ್ಕೆ ಭದ್ರ ಬುನಾದಿಯನ್ನು ಖಾಸಗಿ ಶಾಲೆಗಳು ಹಾಕಿಕೊಡುತ್ತದೆ ಅದರೆ ಸರ್ಕಾರಿ ಶಾಲೆಗಳ ಶಿಕ್ಷಣ ಗುಣಮಟ್ಟ ಹೆಚ್ಚಿಸಲು ಹಲವಾರು ಯೋಜನೆಗಳನ್ನು ಸರ್ಕಾರ ತಂದರು ಶಿಕ್ಷಕರ ಕೊರೆತೆ ಹಾಗೂ ಸುವ್ಯವಸ್ಥೆ ಇಲ್ಲದೆ ಕಾರಣ ಮಕ್ಕಳಿಗೆ ಶಿಕ್ಷಣ ಅಷ್ಟಕಷ್ಟೆ ಇರುವುದು ಕಂಡುಬಂದಿದೆ ಮುಂದಿನ ದಿನಗಳಲ್ಲಿ ಶಾಲೆಯು ಗುಣಮಟ್ಟದ ಶಿಕ್ಷಣ ನೀಡುವ ಜೊತೆಗೆ ಉನ್ನತ ಸ್ಥಾನಕ್ಕೆ ತಲುಪಲಿ ಇಲ್ಲಿನ ವಿದ್ಯಾರ್ಥಿಗಳು ಪೊಷಕಕರ ಹೆಸರು ಉಳಿಸುವ ಕಾರ್ಯವನ್ನು ಮಾಡಬೇಕು ಎಂದು ಹೇಳಿದರು.ನಂತರ ಮಾತನಾಡಿದ ಕಸಾಪ ತಾಲೂಕು ಅಧ್ಯಕ್ಷ ಮಸೂತಿ ನಾಗರಾಜ್ ಮಾತನಾಡಿ ಸರ್ಕಾರಿ ಹಾಗೂ ಖಾಸಗಿ ಶಾಲೆ ಎಂಬ ಭೇದಭಾವ ಮಾಡದೆ ಯಾವುದೇ ಶಾಲೆ ಆಗಲಿ ಶಿಕ್ಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ಒದಗಿಸಬೇಕು ಅದು ವಿದ್ಯಾರ್ಥಿಗಳ ಮುಂದಿನ ಉಜ್ವಲ ಭವಿಷ್ಯಕ್ಕೆ ದಾರಿಯಾಗುತ್ತದೆ ಎಂದು ಹೇಳಿದರು.ಈ ವೇಳೆ ಕಡ್ಲೆ ಈರಣ್ಣ, ರೇವತಿ ಸಿದ್ದಪ್ಪ, ಮಲ್ಲಿಕಾರ್ಜುನ ಕೋಟಗಿ,ಕುಶ್ಮ ಅಧ್ಯಕ್ಷ ರವಿ,ಎಂ ವಾಗೀಶ, ನಾಗರಾಜ್ ಮಸೂತಿ , ಮಲ್ಲಿಕಾರ್ಜುನ ಕೆ ಹಿಂದುಳಿದ ವರ್ಗಗಳ ಅಧ್ಯಕ್ಷ, ಪರುಶುರಾಮ ದೇವೇಂದ್ರಪ್ಪ, ಪಾಂಡುರಂಗ, ಕಂಬಳಿ ಬಸಪ್ಪ, ಹಾಗೂ ಶಾಲಾ ಕಾರ್ಯದರ್ಶಿ ಬಿ ಸಿದ್ದಯ್ಯ,ಮೇಘನಾ ಶಾಲೆಯ ಮುಖ್ಯ ಶಿಕ್ಷಕರಾದ ಶಾರದ ಮತ್ತು ಮಂಜುಳ ,ಸಹ ಶಿಕ್ಷಕರಾದ ನೇತ್ರ,ಚೆನ್ನಮ್ಮ,

ಸಲ್ಮಾಬೇಗಂ,ಗೌತಮಿ,ಶ್ರೇಯಾ,ಜ್ಯೋತಿ,ದ್ಯಾವಣ್ಣ,ಶೇಕ್ಷಾವಲಿ,ಸೇರಿದಂತೆ ಇನ್ನಿತರ ಶಿಕ್ಷಕರು ಮತ್ತು ಮಕ್ಕಳು ಉಪಸ್ಥಿತರಿದ್ದರು.

# ಶ್ರೀ ಶರಣಬಸವೇಶ್ವರ ಜಾತ್ರೆ ಪ್ರಯುಕ್ತ ಜಾತ್ರೆ ಮುಹೂರ್ತ ವ್ಯಾಪಾರ ಪೂಜೆ



ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ನೆಹರು ಗಂಜ್‌ನಲ್ಲಿರುವ ಶ್ರೀ ಹನುಮಾನ್ ದೇವಸ್ಥಾನದಲ್ಲಿ ಶ್ರೀ ಶರಣಬಸವೇಶ್ವರ ಜಾತ್ರೆ ಪ್ರಯುಕ್ತ ಜಾತ್ರಾ ಮುಹೂರ್ತ ವ್ಯಾಪಾರ ಪೂಜೆ ನಡೆಯಿತು.

ಸಾನ್ನಿಧ್ಯವನ್ನು ಚಿರಂಜೀವಿ ದೊಡ್ಡಪ್ಪ ಅಪ್ಪಾಜಿ ವಹಿಸಿದ್ದರು. ಶ್ರೀ ಶರಣಬಸವೇಶ್ವರ ಜಾತ್ರೆ ಪ್ರಯುಕ್ತ ಪ್ರತಿ ವರ್ಷದಂತೆ ಈ ವರ್ಷವೂ ಪೂಜೆ ನಡೆಯಿತು. ಸುಮಾರು ನೂರಾರು ವರ್ಷಗಳಿಂದ ಬಂದ ಈ ಪರಂಪರೆಯನ್ನು ಇಂದಿಗೂ ನಡೆದುಕೊಂಡು ಬರುತ್ತಿದೆ.

ಈ ಸಂದರ್ಭದಲ್ಲಿ ಬಸವರಾಜ್ ದೇಶಮುಖ, ಸಂತೋಷ್ ಲಂಗರ್, ಚಂದ್ರಶೇಖರ ಕೋಬಾಳ, ಬಸವರಾಜ ಹೆಚ್ ತಡಕಲ್, ಮಲ್ಲಿಕಾರ್ಜುನ್ ಮಾನಕರ್, ಶರಣಬಸಪ್ಪ ತಾವರಗೇರಾ, ಶ್ರೀಮಂತ ಉದನೂರ, ರವೀಂದ್ರ ಮಾಧಾಮ್ ಶೆಟ್ಟಿ, ಬಸವರಾಜ್ ಮಂಗಲಗಿ, ಮಹೇಶ ಪಾಟೀಲ್ ಕೂಡಿ, ಸಂಗನಬಸಪ್ಪ ಹಿರೇಗೌಡ, ವಿಜಯಕುಮಾರ್ ಬಿರಾದಾರ್, ಸಂಜುಕುಮಾರ್ ಮುಗಳಿ, ವಿನೋದಕುಮಾರ್ ನಿಂಗದೆ, ಎ ಎಸ್ ಪಾಟೀಲ್ ಅತನೂರ, ಚಂದ್ರಕಾಂತ ನಂದಿಕೂರ್, ಸಿದ್ದಲಿಂಗ ಕೊಪ್ಪಿ, ಮಲ್ಲಿಕಾರ್ಜುನ್ ಹೊಸಗೌಡ, ರವೀಂದ್ರ ಸುಲೇಪೇಟ್, ಭೀಮಶಾ ಜೀವಣಗಿ, ಅರ್ಜುನ್, ಶಿವಲಿಂಗ, ಮಲ್ಲಿಕಾರ್ಜುನ್ ಕಲಬುರ್ಗಿ, ರವೀಂದ್ರ ದೇವರಮನೆ, ಅರವಿಂದ ದೇಸಾಯಿ, ಕಲ್ಯಾಣರಾವ ಮೂಲಗೆ, ಚಂದ್ರಶೇಖರ ಬಿಜಾಪುರ್, ಜಗನ್ನಾಥ ಡಿಗ್ಗಿ, ವಿಷ್ಣು ಡಿ, ಮಧುಸೂದನ್, ಕಿರಣ್ ಚಿಂಚೋಳಿ, ಶಶಿಕಾಂತ್ ಪಾಟೀಲ್ ಚಿತಾಪುರ, ಶರಣಬಸಪ್ಪ ಮಚ್ಚಟಿ, ನಾಗಣ್ಣ ತಿಳುಗೊಳು, ಪಾಂಡುರಂಗ ಅಡಿಕೆ ಸೇರಿದಂತೆ ಹಲವು ಹಿರಿಯ ವ್ಯಾಪಾರಸ್ಥರು, ಗುಮಾಸ್ತರು, ಕಾರ್ಮಿಕ ವರ್ಗದವರು, ರೈತರು ಪಾಲ್ಗೊಂಡಿದ್ದರು.

# ವಿದ್ಯುತ್ ಗುತ್ತಿಗೆದಾರರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಕುರಿತು ಮನವಿ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ:

ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಬಳ್ಳಾರಿ ಜಿಲ್ಲಾ ಸಮಿತಿ ವತಿಯಿಂದ ಗ್ರಾಹಕರು ಹಾಗೂ ವಿದ್ಯುತ್ ಗುತ್ತಿಗೆದಾರರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಕುರಿತು ಮನವಿ.

ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಗೃಹಬಳಕೆ ಹಾಗೂ ವಾಣಿಜ್ಯ ವಿದ್ಯುತ್ ಸಂಪರ್ಕ ಪಡೆಯಲು ಗ್ರಾಹಕರು ಸ್ವಾಧೀನ ಅನುಭವ ಪತ್ರ ಸಲ್ಲಿಸಬೇಕು ಎಂದು ನಿಯಮವಿದ್ದರೂ, ಬಳ್ಳಾರಿ ಜಿಲ್ಲೆಯ ಕೆಲವು ವಿದ್ಯುತ್ ಉಪವಿಭಾಗಗಳಲ್ಲಿ ಒಂದೇ ರೀತಿಯ ನಿಯಮ ಪಾಲನೆ ಆಗುತ್ತಿಲ್ಲ ಎಂದು ಸಂಘ ಆರೋಪಿಸಿದೆ. ಕೆಲವೆಡೆ ಉದ್ದಿಮೆ ಪರವಾನಿಗೆ ಇದ್ದರೂ ಸಹ ಸ್ವಾಧೀನ ಅನುಭವ ಪತ್ರವನ್ನು ಕೇಳಲಾಗುತ್ತಿದೆ ಎಂದು ತಿಳಿಸಿದೆ.

ಸಣ್ಣ ಕೈಗಾರಿಕೆಗಳಿಗೆ (LT-5) ವಿದ್ಯುತ್ ಸಂಪರ್ಕ ನೀಡಲು ಸ್ಥಳೀಯ ಸಂಸ್ಥೆಗಳಿಂದ ಉದ್ದಿಮೆ ಪರವಾನಿಗೆ ಕಡ್ಡಾಯವಾಗಿದ್ದರೂ, ಅಧಿಕಾರಿಗಳು ಹೆಚ್ಚುವರಿ ದಾಖಲೆಗಳನ್ನು ಕೇಳಿ ಗ್ರಾಹಕರಿಗೆ ತೊಂದರೆ ನೀಡುತ್ತಿದ್ದಾರೆ ಎಂದು ಸಂಘದ ಪದಾಧಿಕಾರಿಗಳು ಹೇಳಿದ್ದಾರೆ. ಸರ್ಕಾರದಿಂದ 3040 ನಿವೇಶನಗಳಲ್ಲಿ 1200 ಚದರ ಅಡಿ ವರೆಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕಕ್ಕೆ ಸ್ವಾಧೀನ ಅನುಭವ ಪತ್ರದಿಂದ ವಿನಾಯಿತಿ ನೀಡಿದ್ದರೂ ಸಹ ಸಂಪರ್ಕ ನೀಡಲಾಗುತ್ತಿಲ್ಲ ಎಂದು ಆರೋಪಿಸಿದ್ದಾರೆ.

ಕಲ್ಯಾಣ ಕರ್ನಾಟಕ ಪ್ರದೇಶ ಹಿಂದುಳಿದ ಭಾಗವಾಗಿರುವುದರಿಂದ ಇಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆಗೆ ವಿನಾಯಿತಿ ನೀಡಬೇಕು ಎಂದು ಸಂಘ ಆಗ್ರಹಿಸಿದೆ. ಪಕ್ಕದ ರಾಜ್ಯಗಳಲ್ಲಿ ಮೀಟರ್ ದರ ಕಡಿಮೆ ಇದ್ದು, ಕರ್ನಾಟಕದಲ್ಲಿ ಕಂಪನಿಗಳು ಮೂರು ಪಟ್ಟು ಹೆಚ್ಚು ದರ ವಸೂಲಿಸುತ್ತಿವೆ ಎಂದು ಅವರು ತಿಳಿಸಿದ್ದಾರೆ.

ತಾತ್ಕಾಲಿಕ ವಿದ್ಯುತ್ ಸಂಪರ್ಕಗಳಿಗೆ ಕೆಇಆರ್‌ಸಿ ನಿಯಮದ ಪ್ರಕಾರ ಮೀಟರ್ ಅನ್ನು ವಿದ್ಯುತ್ ಕಂಪನಿಗಳೇ ಒದಗಿಸಬೇಕು. ಆದರೆ ಇಲ್ಲಿನ ಅಧಿಕಾರಿಗಳು ಗ್ರಾಹಕರೇ ಮೀಟರ್ ಖರೀದಿಸಿ ಅಳವಡಿಸಿಕೊಳ್ಳಬೇಕು ಎಂದು ಒತ್ತಾಯಿಸುತ್ತಿದ್ದಾರೆ ಎಂದು ದೂರಲಾಗಿದೆ. ಇದೇ ವೇಳೆ 2023–24ರ ಜಂಗಲ್ ಕಟ್ಟಿಂಗ್ ಕೆಲಸಗಳ ಬಿಲ್ಲುಗಳನ್ನು ಅಧಿಕಾರಿಗಳು ಪಾಸ್ ಮಾಡದೆ ತಡೆಹಿಡಿದಿರುವುದಾಗಿ ಆರೋಪಿಸಲಾಗಿದೆ. ಲೆಕ್ಕಾಧಿಕಾರಿ ಜಗದೀಶ್ ಹಾಗೂ ಸಹಾಯಕ ನಾಗರಾಜ್ ಅವರು ಬಿಲ್ ಪಾಸ್ ಮಾಡಲು ವಿಳಂಬ ಮಾಡುತ್ತಿದ್ದಾರೆ ಎಂದು ಸಂಘ ದೂರಿದೆ.

ಈ ಎಲ್ಲಾ ಸಮಸ್ಯೆಗಳ ಕುರಿತು ಮೇಲಾಧಿಕಾರಿಗಳಿಗೆ ಪತ್ರ ಬರೆದು ಸೂಕ್ತ ಕ್ರಮ ಕೈಗೊಳ್ಳುವಂತೆ ಮನವಿ ಮಾಡಲಾಗಿದೆ. ಸಮಸ್ಯೆಗಳು ಪರಿಹಾರವಾಗದಿದ್ದರೆ ನ್ಯಾಯ ದೊರೆಯುವವರೆಗೆ ಹೋರಾಟ ಮುಂದುವರಿಸಲಾಗುವುದು ಎಂದು ಸಂಘ ಎಚ್ಚರಿಕೆ ನೀಡಿದೆ.



# ಸ್ವಾಸ್ಥ ಕಾಪಾಡುವ ಪೌರಸೇವಾ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ಮನವಿ



ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಸಮಾಜದ ಸ್ವಾಸ್ಥ ಕಾಪಾಡುವ ಪೌರಸೇವಾ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು ಪೌರ ಸೇವಾ ಸಿಬ್ಬಂದಿ ಮುಂಜಾನೆಯಿದ ಸಂಜೆವರೆಗೂ ಕಾರ್ಯನಿರ್ವಹಿಸಿ ನಗರದ ಸ್ವಚ್ಚತೆಗೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಆದರೆ ಇವರಿಗೆ ಅರೆ ಸರ್ಕಾರಿ ನೌಕರರು ಎಂಬ ಹಣೆಪಟ್ಟಿ ಕಟ್ಟಿರುವುದರಿಂದ ಸರ್ಕಾರದ ಎಲ್ಲಾ ಸವಲತ್ತುಗಳನ್ನು ಕೈ ಚೆಲ್ಲಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ರಾಜ್ಯ ಪೌರ ಸೇವಾ ನೌಕರರ ಸಂಘ ಈಗಾಗಲೇ ಸರ್ಕಾರದ ಗಮನಕ್ಕೆ ತಂದಿದೆ. ಪೌರಕಾರ್ಮಿಕರನ್ನು ಸರ್ಕಾರಿ ನೌಕರರು ಎಂದು ಪರಿಗಣಿಸಿ ಎಲ್ಲಾ ರೀತಿಯ ಸವಲತ್ತು ಕಲ್ಪಿಸಬೇಕು ಎಂದು ಒತ್ತಡ ಹಾಕಲಾಗಿದ್ದು, ಎಂದು ಕರ್ನಾಟಕ ರಾಜ್ಯ ಪೌರಸೇವಾ ನೌಕರರ ಸಂಘದ ಅಧ್ಯಕ್ಷೆ ಕೆ.ಡಿ.ಶೈಲಾ ಆಗ್ರಹಿಸಿದರು

ನಗರದ ಅಂಬೇಡ್ಕರ್ ಭವನದಲ್ಲಿ ಸೋಮವಾರ ಪೌರ ಸೇವಾ ನೌಕರರ ಸಂಘದಿದ ಆಯೋಜಿಸಿದ್ದ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಯಶಸ್ವಿಯಾಗುವ ವಿಶ್ವಾಸವಿದೆ. ಎಲ್ಲಾ ತಾಲ್ಲೂಕು, ನಗರದಲ್ಲೂ ಮಹಿಳಾ ಪೌರಸೇವಕರಿಗೆ ಕಡ್ಡಾಯವಾಗಿ ಪ್ರತ್ಯೇಕ ವಿಶ್ರಾಂತಿ ಕೊಠಡಿ ನಿರ್ಮಿಸಿ ಅಗತ್ಯ ಸವಲತ್ತು ಕಲ್ಪಿಸಬೇಕು ಎಂದು ಇದೇ ವೇಳೆ ಮನವಿ ಮಾಡಿದರು.

ಪೌರಕಾರ್ಮಿಕರಲ್ಲಿ ದಿನಗೂಲಿ, ಹೊರಗುತ್ತಿಗೆ ನೌಕರರು ಎಂದು ಪರಿಗಣಿಸಿ ಕೆಲಸಕ್ಕೆ ನಿಯೋಜಿಸಿಕೊಳ್ಳಲಾಗಿದೆ. ಆದರೆ ಕಾಯಂ ನೌಕರರು ಮಾಡುವ ಮಾದರಿಯಲ್ಲೇ ಇವರು ಎಲ್ಲಾ ಕೆಲಸ ನಿರ್ವಹಿಸುತ್ತಿದ್ದರೂ, ವೇತನದಲ್ಲಿ ತಾರತಮ್ಯ ಇದೆ. ಈ ಸಬಂಧ ಪೌರಾಡಳಿತ ಸಚಿವರೊಂದಿಗೆ ಒಂದು ಸುತ್ತಿನ ಮಾತುಕತೆ ನಡೆಸಿದ್ದು, ಮತ್ತೊಂದು ಸುತ್ತಿನ ಮಾತುಕತೆ ನಡೆಸಲಾಗುವುದು ಎಂದರು.ನಗರಸಭೆ ಪೌರಾಯುಕ್ತೆ ಎಂ. ಮಾನಸ ಮಾತನಾಡಿ, ಸರ್ಕಾರ ಪೌರಸೇವಾ ನೌಕರರನ್ನು ಸರ್ಕಾರಿ ನೌಕರರು ಎಂದು ಗುರುತಿಸದೆ ತಾರತಮ್ಯ ಧೋರಣೆ ಅನುಸರಿಸುತ್ತಿದೆ. ಹೀಗಾಗಿ ಸ್ಥಳೀಯವಾಗಿ ಸರ್ಕಾರಿ ಸಂಘದಲ್ಲಿ ಪೌರ ಸೇವಕರು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಧಾನ ಭಾಷಣ ಮಾಡಿದ ಶಿಕ್ಷಕ ಸಾಹಿತಿ ಡಾ

ಮಾಧುಪ್ರಸಾದ್ ಮಾತನಾಡಿ ಮಹಿಳೆಯರನ್ನು ಸಮಾನತೆಯಿಂದ ಕಾಣುವ ಮನೋಭಾವ ಭಾರತದಲ್ಲಿ ಮುಖ್ಯವಾಗಿ ಸಮಾನತೆಯಿಂದ ಕಾಣುವುದು ಶ್ರೇಷ್ಠ ವಾಗಿದೆ. ಆಧುನಿಕ ಮಹಿಳೆಯರು ಅವಕಾಶಗಳನ್ನು ಬಯಸುತ್ತಾರೆ, ಅದರಂತೆ ಅವಕಾಶಗಳನ್ನು ನೀಡಬೇಕು. ಲಿಂಗ ತಾರತಮ್ಯ ತೊಲಗಬೇಕೆಂದು

.ಜಾಗತಿಕ ಮಟ್ಟದಲ್ಲಿ ಮಹಿಳೆಯರ ಅಸ್ತಿತ್ವಕ್ಕೆ ಭಾರತದ ಮಹಿಳೆಯರನ್ನು ಅಣಿಗೊಳಿಸುವಂತ ಶಿಕ್ಷಣ ಇಂದು ನಮ್ಮಲ್ಲಿ ತುರ್ತಾಗಿ ಆಗಬೇಕು. ಮಹಿಳೆಯರು ಬೃಹತ್ ಮಾನವ ಸಂಪನ್ಮೂಲ ವಾಗಿದ್ದು ಭಾರತದ ಪ್ರಧಾನ ಶಕ್ತಿ ಆಗಿದ್ದಾರೆ. ಅವರನ್ನು ಅವಕಾಶಗಳಿಂದ ವಂಚಿಸಬಾರದು ಎಂದು ಕರೆನೀಡಿದರು.

ಪೌರಸೇವಕರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಿದರೆ ಮಾತ್ರ ಉನ್ನತ ಸ್ಥಾನಕ್ಕೇರಲು ಸಾಧ್ಯವಾಗಲಿದೆ. ಕೂಲಿ ಕಾರ್ಮಿಕರ ಕೇರಿ, ಮಾರಮ್ಮನ ಗುಡಿ ಇರುವ ಸುತ್ತಮುತ್ತಲಿನಲ್ಲಿ ಬಾರ್‌ಗಳು ಆರಂಭವಾಗಿದ್ದು, ಇಲ್ಲಿ ದುಡಿದ ಹಣವನ್ನು ಕುಡಿತಕ್ಕೆ ಸುರಿಯುವ ಕುಟುಂಬದ ಯಜಮಾನರನ್ನು ಇಲ್ಲಿ ಸೇರಿರುವ ಮಹಿಳಾ ಪೌರಕಾರ್ಮಿಕರು ನಿಯಂತ್ರಿಸಿದರೇ ಕುಟುಂಬದ ಆರೋಗ್ಯ ಮತ್ತು ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಿದಲ್ಲಿ ಆರ್ಥಿಕ ಮಟ್ಟ ಸಹ ಸುಧಾರಿಸಲಿದೆ ಎಂದರು.

ಕಾರ್ಯಕ್ರದಲ್ಲಿ ಶಿಕ್ಷಕ ಗೋವಿಂದೇಗೌಡ ಪರಿಸರ ಇಂಜಿನಿಯರ್ ಸೌಮ್ಯ ಲೋಕೇಶ್, ಲೆಕ್ಕಾಧಿಕಾರಿ ಶಾರದಮ್ಮ, ಪೌರಸೇವಾ ನೌಕರರ ಸಂಘದ ಅಧ್ಯಕ್ಷೆ ರಾಚಯ್ಯ ಮಧುಸೂಧನ್, ಸೋಮಶೇಖರ್, ಸಿದ್ದಯ್ಯ ಲೀಲಾ ಸುಮಲತಾ ಸಂಗೀತ ಚಂದ್ರು ಕೃಷ್ಣೇಗೌಡ ಮಹೇಶ ಮುರುಗೇಶ್ ಮಾದ ಸುಧೀರ್ ಶ್ರೀ ಹರಿ ಸೇರಿದಂತೆ ಜಿಲ್ಲೆಯ ವಿವಿಧ ತಾಲ್ಲೂಕುಗಳ ಪೌರಸೇವಾ ನೌಕರರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಮಹಿಳೆ ವ್ಯಕ್ತಿಯಲ್ಲ, ಶಕ್ತಿ ನ್ಯಾ.ಪ್ರತಿಭಾ ಕುಲಕರ್ಣಿ.



ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಮಹಿಳೆ ಒಬ್ಬ ವ್ಯಕ್ತಿಯಲ್ಲ ಒಂದು ಶಕ್ತಿ. ಮಹಿಳೆಯರು ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ವಿಜ್ಞಾನ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರದಲ್ಲೂ ಮುಂಚೂಣಿಲ್ಲಿದ್ದಾರೆ ಎಂದು ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಧೀಶರು ಎಫ್.ಎಸ್.ಟಿ.ಸಿ–1 ಪ್ರತಿಭಾ ಬಿ.ಕುಲಕರ್ಣಿ ಹೇಳಿದರು.

ಅವರು ಮಂಗಳವಾರ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರವಾರ ಇವರ ಸಂಯುಕ್ತಾಶ್ರಯದಲ್ಲಿ ಅಯೋಜಿಸಲಾದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು, ಮಹಿಳೆಯರ ಸಾಧನೆಗಳನ್ನು ಸ್ಮರಿಸುವುದಕ್ಕಾಗಿ, ಅವರಿಗೆ ತಮ್ಮ ಹಕ್ಕುಗಳ ಅರಿವು ಹಾಗೂ ಅಭಿವೃದ್ಧಿ ಹೊಂದಲು ಸಮಾನ ಅವಕಾಶ ಕಲ್ಪಿಸುವ ಬಗ್ಗೆ ಜಾಗೃತಿ ಮೂಡಿಸುವುದು ಮಹಿಳಾ ದಿನಾಚರಣೆಯ ಉದ್ದೇಶವಾಗಿದೆ. ಮಹಿಳೆಯರು ಸಾಧನೆಯ ಹಾದಿಯಲ್ಲಿರುವಾಗ, ಲಿಂಗ ಬೇಧಭಾವ, ಬಾಲ್ಯ ವಿವಾಹ, ಉದ್ಯೋಗದಲ್ಲಿ ಅಸಮಾನತೆ ವ್ಯತ್ತಿತರ ಅನೇಕ ತೊಂದರೆಗಳಿದ್ದು, ಮಹಿಳೆಯರಿಗೆ ಉತ್ತಮ ಶಿಕ್ಷಣ ನೀಡಿ, ಸಮಾಜದಲ್ಲಿ ಜಾಗೃತಿ ಮೂಡಿಸುವುದರಿಂದ ಮಹಿಳೆಯ ಪ್ರಗತಿಗೆ ಕಾರಣಿಕರ್ತರಾಗಬೇಕು. ಮಹಿಳೆಯರು ಕರ್ತವ್ಯದ ಜೊತೆಯಲ್ಲಿ ಕೌಟುಂಬಿಕ ಸಮಸ್ಯೆಗಳ ಮಧ್ಯೆಯೂ ಛಲಬಿಡದೇ ಮುನ್ನೆಡೆಯಬೇಕು ಎಂದರು.

ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಮಾತನಾಡಿ, ಸರಕಾರದ ಎಲ್ಲಾ ಇಲಾಖೆಯಲ್ಲೂ ಮಹಿಳಾ ಅಧಿಕಾರಿಗಳು ಇರುವುದನ್ನು ಕಾಣಬಹುದಾಗಿದೆ. ಶಿರೂರು ಗುಡ್ಡ ಕುಸಿತ, ಪ್ರವಾಹ ಸಂದರ್ಭದಲ್ಲಿ ನನ್ನ ಜೊತೆ ಮಹಿಳಾ ಅಧಿಕಾರಿಗಳು ನಿಂತುಕೊಂಡುಉತ್ತಮ ಕಾರ್ಯನಿರ್ವಹಿಸಿದ್ದಾರೆ.

# ತಲೇಖಾನ ಗ್ರಾಪಂಗೆ ನರೇಗಾ ಸಹಾಯ ನಿರ್ದೇಶಕ ಶಿವಾನಂದ ರೆಡ್ಡಿ ಭೇಟಿ: ಪರಿಶೀಲನೆ



ಮಲ್ಲಮ್ಮ ನುಡಿ ವಾರ್ತೆ ಮುದಗಲ್ಲ

ಸಮೀಪದ ತಲೇಖಾನ ಗ್ರಾಪಂ ಪಂಚಾಯತಿಗೆ ಮಸ್ಕಿ ತಾಪಂನ ನರೇಗಾ ಸಹಾಕ ನಿರ್ದೇಶಕ ಶಿವಾನಂದರಡ್ಡಿ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲಿಸಿದರು.

ನೇರೆಗಾ ಬಾಕಿ ಉಳಿದಿರುವ ಬಗ್ಗೆ ಮಾಹಿತಿ ನೀಡಿದ ಅವರು ತಾಜ್ಯವಿಲೇವರಿ ಘಟಕ, ರಸ್ತೆ, ಸಿಡಿ, ಚರಂಡಿ, ಮೆಟಲಿಂಗ್ ರಸ್ತೆ ಸೇರಿದಂತೆ ನೂರಾರು ಜಾನುವಾರು ಶೆಡ್‌ಗಳಿಗೆ ಸಂಬಂದಪಟ್ಟಂತೆ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಇಲಾಖೆಯ ತಂತ್ರಾಂಶದಲ್ಲಿ ಅಳವಡಿಸುವ ಮೂಲಕ ಮಾರ್ಚ ತಿಂಗಳ ಅಂತ್ಯದವರೆಗೆ ಸಾಮಗ್ರಿವೇಚ್ಚ ಪಾವತಿಸುವಂತೆ ಸಭೆಗೆ ತಿಳಿಸಿದರು.

ಇತ್ತ ಗ್ರಾಪಂ ಮಾಜಿ ಸದಸ್ಯರಾದ ಹನುಮಂತಪ್ಪ ಗಂಟಿ, ದುರುಗಪ್ಪ ಕಟ್ಟಿಮನಿ, ಗ್ಯಾರೆಂಟಿ ಸಮಿತಿ ಸದಸ್ಯ ಕನಕಪ್ಪ ಗುಡಿಹಾಳ, ಮಲ್ಲೇಶ ಸೊಂಪೂರ ಸೇರಿದಂತೆ ಅನೇಕರು ಮಾತನಾಡಿ, ಖಾತ್ರಿಯೋಜನೆಯಡಿ ಕಾಮಗಾರಿ ನಿರ್ವಹಿಸಿ ಎರಡು ವರ್ಷ ಗತಿಸಿದರು ಸಾಮಗ್ರಿವೆಚ್ಚದ ಬಗ್ಗೆ ಇಂಜನಿಯರ್, ಪಿಡಿಒ ದಾಖಲೆಗಳನ್ನು ಸಿದ್ದಪಡಿಸುತ್ತಿಲ್ಲ, ರೈತರು ಜಾನುವಾರು ಶೆಡ್ ನಿರ್ಮಿಸಿ ವರ್ಷಗಳು ಕಳೆದರು ಅವರುಗಳ ಖಾತೆಗೆ ಹಣ ಜಮೆಮಾಡುತ್ತಿಲ್ಲ, ಗ್ರಾಪಂಗೆ ಪಿಡಿಒ ವರ್ಗವಾಗಿ ಒಂದು ತಿಂಗಳು ಕಳೆದರು ಇಲ್ಲಿನ ಗ್ರಾಪಂಗೆ ನೂತನ ಪಿಡಿಒ ಬಂದು ಚಾರ್ಜ ತಗೆದುಕೊಂಡು ಕೆಲಸ ಮಾಡಲು ಮುಂದಾಗುತ್ತಿಲ್ಲ, ಈ ಬಗ್ಗೆ ಜಿಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ತಾಪಂ ಇಒ ಅವರಿಗೂ ಮನವಿ ಮಾಡಿದರು ಸಮಸ್ಯೆ ಬಗೆಹರಿದಿಲ್ಲ ಎಂದು ಸಮಸ್ಯೆ ಹೇಳಿಕೊಂಡರು ಇದಕ್ಕೆ ಉತ್ತರಿಸಿದ ಎಡಿ ಶಿವಾನಂದರಡ್ಡಿ ಗ್ರಾಪಂನ ಸಮಸ್ಯೆ ಕುರಿತು ಇಲಾಖೆಯ ಹಿರಿಯ ಅಧಿಕಾರಿಗಳ ಗಮನಕ್ಕೆ ತರುವುದಾಗಿ ಹೇಳಿಹೋಗಿ 5 ದಿನ ಗತಿಸಿದೆ ಎಂದು ಹನುಮಂತಪ್ಪ ಗಂಟಿ, ದುರುಗಪ್ಪ ಕಟ್ಟಿಮನಿ, ಗ್ಯಾ–ರೇಂಟಿ ಸಮಿತಿ ಸದಸ್ಯ ಕನಕಪ್ಪ ಗುಡಿಹಾಳ, ಮಲ್ಲೇಶ ಸೊಂಪೂರ ಪತ್ರಿಕೆಗೆ ತಿಳಿಸಿದರು.

ಮೊದಲಿನ ಪಿಡಿಒ ಜ್ಯೋತಿಬಾಯಿ ಬೆರಡೆ ವರ್ಗವಾಗಿದ್ದು ನಿಜ ಆದರೆ ಇಲ್ಲಿನಗೆ ನಿಯೋಜನೆಗೊಂಡ ಪಿಡಿಒ ನಾಗೇಶ ಕರ್ತವ್ಯಕ್ಕೆ ಬರುತ್ತಿಲ್ಲ. ಪಿಡಿಒ ವಿಚಾರಗಳ ಬಗ್ಗೆ ಜಿಪಂ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಅಮರಪ್ಪ ಯಾದವ್ ಕಾರ್ಯನಿರ್ವಾಹಕ ಅಧಿಕಾರಿ ತಾಪಂ ಮಸ್ಕಿ

# ಆದಿವಾಸಿ ರಕ್ಷಣಾ ಪರಿಷತ್ತಿನ ವತಿಯಿಂದ ಅಭಿನಂದನೆ



ಮಲ್ಲಮ್ಮ ನುಡಿ ವಾರ್ತೆ

ಹುಣಸೂರು

ಮುಖ್ಯಾಮಂತ್ರಿ ಸಿದ್ದರಾಮಯ್ಯ ನವರು ಮಂಡಿಸಿದ 17ನೇ ಬಜೇಟ್ ನಲ್ಲಿ ಆದಿವಾಸಿಗಳ ಬಹುದಿನದ ಬೇಡಿಕೆಯಾದ ಆದಿವಾಸಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲು ಘೋಷಿಸಿರುವುದು ಸ್ವಾಗತಾರ್ಹ ಎಂದು ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಎಂ. ಕೃಷ್ಣಯ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸಿದ್ದಾರೆ.

ದಿನಾಂಕ 23ನೇ ಫೆಬ್ರವರಿಯಂದು ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ತಿನ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿಗಳು ಆದಿವಾಸಿಗಳ ಮನವಿಗೆ ಸ್ಪಂದಿಸಿ ಆದಿವಾಸಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲು ಘೋಷಿಸಿರುವುದು ತುಂಬಾ ಸಂತೋಷದ ಸಂಗತಿ.

ಆದಿವಾಸಿಗಳ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲು ಹಾಯ ವೇಯದಲ್ಲಿ ಘೋಷಿಸಿದ್ದು ಸಮಸ್ತ ಕರ್ನಾಟಕ ಆದಿವಾಸಿಗಳ ಪರವಾಗಿ ಹಾಗೂ ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ ಮುಖ್ಯಮಂತ್ರಿಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ. ಮುಂದಿನ ದಿನಗಳಲ್ಲಿ ನಿಗಮದ ವತಿಯಿಂದ ಅಧಿವಾಸಿಗಳ ಅಭಿವೃದ್ಧಿ ಕೆಲಸಗಳು ಹೆಚ್ಚಾಗಿ ನಡೆಯುವ ಮೂಲಕ ಅಧಿವಾಸಿಗಳನ್ನು ಸಮಾಜದ ಮುಖ್ಯಾವಾಹಿನಿಗೆ ತರಲು ಅನುಕೂಲವಾಗಲಿದೆ ಎಂದು ಅಖಿಲ ಭಾರತ ಆದಿವಾಸಿ ಹಿತ ರಕ್ಷಣಾ ಸಮಿತಿ ಅಧ್ಯಕ್ಷರಾದ ಜಿ ಸ್ವಾಮಿ ತಾಲೂಕು ಅಧಿವಾಸಿಗಳ ಲ್ಯಾಂಪ್ಸ್ ಸಹಕಾರ ಸಂಘದ ಅಧ್ಯಕ್ಷ ಸುಭ್ರಮಣ್ಯ ತಿಳಿಸಿದಾರೆ

# ಕಲ್ಯಾಣ ಕರ್ನಾಟಕದ ಸರ್ಕಾರಿ ಶಾಲೆ ಕೊಲ್ಲಲು ಕೆಕೆಆರ್‌ಡಿಬಿ ನಿಧಿ ಬಳಕೆ: ಶಿಲ್ಪಾ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಕಲ್ಯಾಣ ಕರ್ನಾಟಕ ಭಾಗದ ಜನರಅಭಿವೃದ್ಧಿಗಾಗಿ ಮೀಸಲಿರುವ ಕೆಕೆಆರ್‌ಡಿಬಿ ನಿಧಿಯನ್ನು ನಮ್ಮ ಭಾಗದ ಸರಕಾರಿ ಶಾಲೆಗಳನ್ನು ಮುಚ್ಚಲು ಬಳಸುತ್ತಿರುವುದು ಕರ್ನಾಟಕ ರಾಜ್ಯ ಸರ್ಕಾರ ಈ ಭಾಗದ ಜನರಿಗೆ ಎಸಗುತ್ತಿರುವ ದೊಡ್ಡ ದ್ರೋಹವಾಗಿದೆ. ಕರ್ನಾಟಕದಾದ್ಯಂತ ಜನರ ತೀವ್ರ ವಿರೋಧದ ನಡುವೆಯೂ ಈ ಬಾರಿ ಬಜೆಟ್ ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೆಪಿಎಸ್ ಶಾಲೆಗಳ ಸ್ಥಾಪನೆಯ ಕುರಿತು ಹಾಗೂ ಕಲ್ಯಾಣ ಕರ್ನಾಟಕದಲ್ಲಿ ಈ ಶಾಲೆಗಳನ್ನು ಸ್ಥಾಪಿಸಲು ಕೆಕೆಆರ್‌ಡಿಬಿಯ ಹಣವನ್ನು ಬಳಸುತ್ತೇವೆಂದುಘಂಟಾಘೋಷವಾಗಿ ಹೇಳಿದ್ದಾರೆ.

ಮೇಲ್ನೋಟಕ್ಕೆ ಈ ಹಣವನ್ನು ಹೊಸ ಶಾಲೆಗಳ ಸ್ಥಾಪನೆಗಾಗಿ ಬಳಸಲಾಗುತ್ತದೆ ಎಂದು ಬಿಂಬಿಸಲಾಗುತ್ತಿದೆ.ಆದರೆವಾಸ್ತವದಲ್ಲಿ 15 ಅಕ್ಟೋಬರ್ 2025 ರಂದು ಇದೇ ರಾಜ್ಯ ಕಾಂಗ್ರೆಸ್ ಸರ್ಕಾರವು ಹೊರಡಿಸಿರುವ ಆದೇಶದ ಪ್ರಕಾರ ಗ್ರಾಮ ಪಂಚಾಯಿತಿಗೊಂದು ಕೆಪಿಎಸ್ ಶಾಲೆಯನ್ನು ನಿರ್ಮಿಸಿ ಅದರ ಸುತ್ತ 3 ರಿಂದ 5 ಕಿ.ಮೀ ವ್ಯಾಪ್ತಿಯಲ್ಲಿರುವ ಶಾಲೆಗಳನ್ನು ಮುಚ್ಚಲಾಗುತ್ತದೆ ಎಂಬುದನ್ನು ಉಲ್ಲೇಖಿಸಲಾಗಿದೆ. ಅರ್ಥಾತ್ ಗ್ರಾ.ಪಂ ಗೆ ಒಂದು ಶಾಲೆ ಎಂದರೆ ಕೇವಲ 6000 ಶಾಲೆಗಳನ್ನು ಉಳಿಸಿ 40ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಶಾಶ್ವತವಾಗಿ ಮುಚ್ಚುತ್ತೇವೆ ಎಂದು ಸರಕಾರವೇ ಹೇಳುತ್ತಿದೆ ಎಂದು ಎಐಡಿಎಸ್ಓ ಜಿಲ್ಲಾ ಸಂಚಾಲಕಿ ಶಿಲ್ಪಾ ಬಿ.ಕೆ ಪತ್ರಿಕಾ ಹೇಳಿಕೆ ನೀಡಿದ್ದರು.

ಇದಷ್ಟೇ ಅಲ್ಲದೆ ಕೆಪಿಎಸ್ ಶಾಲೆಗಳ ನಿರ್ವಹಣೆಯನ್ನು ಹೊರಗುತ್ತಿಗೆ ಕೊಡಲಾಗುವುದು ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ಈ ಮೂಲಕ ಕೆಪಿಎಸ್ ಶಾಲೆಗಳನ್ನು ಸರ್ಕಾರವೇ ಸ್ಥಾಪಿಸಿ ಕ್ರಮೇಣವಾಗಿ ಖಾಸಗಿ ಕಂಪನಿಗಳ ಮಡಿಲಿಗೆ ಹಾಕಲಾಗುತ್ತದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಸರಿಯಾಗಿ ಕಟ್ಟಡಗಳಿಲ್ಲದೇ ಸಾವಿರಾರು ಶಾಲೆಗಳು ಕುಸಿಯುವ ಹಂತದಲ್ಲಿವೆ. ರಾಜ್ಯದಲ್ಲಿ 59,000ಕ್ಕೂ ಅಧಿಕ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಅದರಲ್ಲಿ ಬಹುಪಾಲು ಕಲ್ಯಾಣ ಕರ್ನಾಟಕ ಭಾಗದ್ದಾಗಿವೆ. ಅಲ್ಲದೇ ಇಡೀ ರಾಜ್ಯದಲ್ಲಿ ಅತಿ ಹೆಚ್ಚು ಏಕೋಪಾಧ್ಯಾಯ ಶಾಲೆಗಳಿರುವುದು ಈ ಭಾಗದಲ್ಲಿಯೇ. ಶುದ್ಧ ಕುಡಿಯುವ ನೀರಿಲ್ಲದೇ, ವಿದ್ಯುತ್ ಸೌಲಭ್ಯವಿಲ್ಲದೇ, ಕನಿಷ್ಠ ಬಳಕೆಗೆ ಯೋಗ್ಯವಾದ ಶೌಚಾಲಯಗಳು ಸಹ ಇಲ್ಲದೇ ನಲುಗುತ್ತಿರುವ ನಮ್ಮ ಭಾಗದ ಸರ್ಕಾರಿ ಶಾಲೆಗಳನ್ನು ಬಲಪಡಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಬೇಕಿತ್ತು. ಕಿತ್ತು ತಿನ್ನುವ ಬಡತನ, ನಿರುದ್ಯೋಗ, ಅನಕ್ಷರತೆಗಳಂತಹ ಅನೇಕ ಕಾರಣಗಳಿಂದ ಹಿಂದುಳಿದ ಜಿಲ್ಲೆಗಳು ಎಂಬ ಹಣೆಪಟ್ಟಿ ಹೊತ್ತುಕೊಂಡಿರುವ ಈ ಭಾಗಕ್ಕೆ ನೈಜ ಜನಪರ ಕಾಳಜಿಯಿಂದ ಸರ್ಕಾರಗಳು ಅತಿಹೆಚ್ಚುಮುತುವರ್ಜಿ ವಹಿಸಿ ಈ ಭಾಗವನ್ನು ಅಭಿವೃದ್ಧಿ ಪಡಿಸಬೇಕಿತ್ತು. ಬದುಕನ್ನು ಕಟ್ಟಿಕೊಳ್ಳಲು, ಕನಿಷ್ಠ ತಮ್ಮ ಮಕ್ಕಳ ಹೊಟ್ಟೆ ತುಂಬಿಸಲು ಗಂಟು – ಮೂಟೆ ಹೊತ್ತು ಬೆಂಗಳೂರು, ಮುಂಬೈ, ಹೈದ್ರಾಬಾದ್ ನಂತಹ ಮಹಾನಗರಗಳಿಗೆವಲಸೆಹೋಗುವ, ಬೆವರು – ರಕ್ತ ಸುರಿಸಿ ಹೊಲ ಗದ್ದೆಗಳಲ್ಲಿ ದುಡಿದು ಕಟ್ಟಿದ ಬಡವರ ತೆರಿಗೆ ಹಣವನ್ನು ಬಡ ಮಕ್ಕಳು ಓದುವ ಸರ್ಕಾರಿ ಶಾಲೆಗಳನ್ನು ಮುಚ್ಚಲು ಬಳಸುತ್ತಿರುವುದು ಬಡವರ ಕುರಿತು ರಾಜ್ಯ ಸರ್ಕಾರಕ್ಕಿರುವ ನಿರ್ಲಕ್ಷ್ಯ ಧೋರಣೆಗೆ ಹಿಡಿದ ಕನ್ನಡಿಯಾಗಿದೆ. ಪ್ರತಿಯೊಂದು ಮಗುವಿಗೂ ಉಚಿತವಾಗಿ ಶಿಕ್ಷಣ ಸಿಗಬೇಕು ಎಂಬ ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ, ಈಶ್ವರ ಚಂದ್ರ ವಿದ್ಯಾಸಾಗರ್, ಪಂಡಿತ್ ತಾರಾನಾಥ್, ಕುದ್ಮುಲ್ ರಂಗರಾವ್ ರಂತಹ ಮಹಾನ್ ವ್ಯಕ್ತಿಗಳ ಆಶಯಗಳನ್ನು ಗಾಳಿಗೆ ತೂರಿ ತರುತ್ತಿರುವ ಈ ಅನ್ಯಾಯದ ವಿರುದ್ಧ, ಬಡ ಮಕ್ಕಳನ್ನು ಶಾಶ್ವತವಾಗಿ ಶಿಕ್ಷಣದಿಂದ ದೂರ ಇಡುವ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯ ವಿರುದ್ಧ ಇಡೀ ರಾಜ್ಯದಾದ್ಯಂತ ಹೋರಾಟದ ಅಲೆಎದ್ದಿದೆ. ಅಂತೆಯೇ ಕಲ್ಯಾಣ ಕರ್ನಾಟಕ ಜಿಲ್ಲೆಗಳಾದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ವಿಜಯಪುರ, ಬಳ್ಳಾರಿ, ಕೊಪ್ಪಳ ಹಾಗೂ ವಿಜಯನಗರದ ನೂರಾರು ಹಳ್ಳಿಗಳಲ್ಲಿ ಹೋರಾಟಗಳು ನಡೆಯುತ್ತಿವೆ.

ಈಗ ಈ ಹೋರಾಟದ ಮುಂದುವರಿಕೆಯ ಭಾಗವಾಗಿ ಎಐಡಿಎಸ್ಓ ವಿದ್ಯಾರ್ಥಿ ಸಂಘಟನೆ ಹಾಗೂ ಪ್ರತಿ ಜಿಲ್ಲೆ, ಗ್ರಾಮಗಳ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಗಳ ನೇತೃತ್ವದಲ್ಲಿ ಇದೇ ಮಾರ್ಚ್ 14 ರಂದು ಕಲ್ಯಾಣ ಕರ್ನಾಟಕ ವಲಯ ಮಟ್ಟದ ಸಮಾವೇಶವನ್ನುಹಮ್ಮಿಕೊಳ್ಳಲಾಗಿದೆ. ಈ ಸಮಾವೇಶಕ್ಕೆ ನಾಡಿನ ಅನೇಕ ಶಿಕ್ಷಣ ತಜ್ಞರು, ಸಾಮಾಜಿಕ ಹೋರಾಟಗಾರರು, ಜನಪರ ಸಂಘಟನೆಗಳ ಮುಖಂಡರು ಹಾಗೂ ಕಲ್ಯಾಣ ಕರ್ನಾಟಕದ ಮೂಲೆ ಮೂಲೆಯಿಂದ ಪೋಷಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ಹೀಗಾಗಿ ಎಲ್ಲಾ ಶಿಕ್ಷಣಪ್ರೇಮಿ ಜನತೆ ಈ ಸಾರ್ವಜನಿಕ ಶಿಕ್ಷಣ ಉಳಿಸಿ, ನಮ್ಮೂರ ಸರ್ಕಾರಿ ಶಾಲೆಗಳನ್ನು ಉಳಿಸುವ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಇಡೀ ಕಲ್ಯಾಣ ಕರ್ನಾಟಕದ ಜನತೆಯಲ್ಲಿ ಎಐಡಿಎಸ್ಓ ಕರೆ ನೀಡುತ್ತದೆ.

## ಒಳಮೀಸಲಾತಿ ಜಾರಿ ವಿಳಂಬಕ್ಕೆ ಆಕ್ರೋಶ: ಮಾ.12ರಂದು ಪ್ರತಿಭಟನೆ

# ಇಡೀ ರಾಜ್ಯದಲ್ಲಿ ರಕ್ತಕ್ರಾಂತಿಯ ಎಚ್ಚರಿಕೆ: ವಾಸು

• ಮಲ್ಲಮ್ಮ ನುಡಿ ವಾರ್ತೆ: ಗುರುಮಠಕಲ್




ಮಾದಿಗ ಸಮಾಜಕ್ಕೆ ಒಳಮೀಸಲಾತಿ ಜಾರಿಗೆ ಆಗುತ್ತಿರುವ ವಿಳಂಬದ ವಿರುದ್ಧ ಸಮಾಜದ ಮುಖಂಡರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಮಾರ್ಚ್ 12ರಂದು ಬೆಂಗಳೂರಿನಲ್ಲಿ ಭಾರಿ ಪ್ರತಿಭಟನೆ ನಡೆಸುವುದಾಗಿ, ಒಳಮೀಸಲಾತಿ ಜಾರಿ ವಿಳಂಬವಾದರೆ ಇಡೀ ರಾಜ್ಯದಲ್ಲಿ ರಕ್ತಕ್ರಾಂತಿಯ ಎಚ್ಚರಿಕೆಯನ್ನು ಬಿ ಕೆ ವಾಸು ನೀಡಿದರು.

ಈ ಕುರಿತು ಪಟ್ಟಣದ ಮಹಾತ್ಮ ಬಸವೇಶ್ವರ ವೃತ್ತದ ಮುಂಭಾಗದ ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ ಮಾಡಲಾಯಿತು, ಒಳ ಮೀಸಲಾತಿ ವಿಳಂಬ ಕುರಿತು ಮಾತನಾಡಿದ ಸಮಾಜದ ಮುಖಂಡ ಬಿಕೆ ವಾಸು ಕಳೆದ ಸುಮಾರು 35 ವರ್ಷಗಳಿಂದ ಮಾದಿಗ ಸಮಾಜ ಒಳಮೀಸಲಾತಿಗಾಗಿ ಹೋರಾಟ ನಡೆಸುತ್ತಿದ್ದು, ಈ ಹೋರಾಟದಲ್ಲಿ ಸುಮಾರು 20 ಜನ ಹೋರಾಟಗಾರರು ಜೀವ ತ್ಯಾಗ ಮಾಡಿದ್ದಾರೆ ಎಂದು ಹೇಳಿದರು. ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರಗಳು ಒಳಮೀಸಲಾತಿ ಜಾರಿಗೆ ಕ್ರಮ ಕೈಗೊಳ್ಳಬಹುದು ಎಂದು ಸೂಚನೆ ನೀಡಿದ್ದರೂ ಸಹ ರಾಜ್ಯ ಸರ್ಕಾರ ಸಮಗ್ರ ವರದಿ ತರಿಸಿಕೊಂಡು ಜಾರಿಗೆ ತರಲು ವಿಳಂಬ ಮಾಡುತ್ತಿದೆ ಎಂದು ಅವರು ಆರೋಪಿಸಿದರು.

ಹಿಂದಿನ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಸರ್ಕಾರ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಕ್ರಮ ಕೈಗೊಂಡಿತ್ತು. ಆದರೆ ಪ್ರಸ್ತುತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರದಿ ಕುರಿತಾದ ಆಕ್ಷೇಪಣೆ ನ್ಯಾಯಾಲಯದಲ್ಲಿ ಇರುವುದರಿಂದ ಜಾರಿಗೆ ತರಲು ಸಾಧ್ಯವಿಲ್ಲ ಎಂದು ಹೇಳುತ್ತಿರುವುದು ನ್ಯಾಯಸಮ್ಮತವಲ್ಲ ಎಂದು ಅಭಿಪ್ರಾಯಪಟ್ಟರು.

ಇತ್ತೀಚೆಗೆ ಸರ್ಕಾರ ಸುಮಾರು 56,437 ಸರ್ಕಾರಿ ಹುದ್ದೆಗಳ ನೇಮಕಾತಿಗೆ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ, ಜನಸಂಖ್ಯೆ ಪ್ರಮಾಣದ ಆಧಾರದ ಮೇಲೆ ಮಾದಿಗ ಸಮಾಜದ ಒಳಗಿನ 101 ಜಾತಿಗಳಿಗೆ ಕನಿಷ್ಠ 8,465 ಹುದ್ದೆಗಳು ಸಿಗಬೇಕು ಎಂದು ಅವರು ಒತ್ತಾಯಿಸಿದರು.

ಆದರೆ ಸಚಿವ ಎಚ್.ಸಿ.ಮಹಾದೇವಪ್ಪ ಅವರ ನಡೆಗಳಿಂದ ಮಾದಿಗ ಸಮಾಜಕ್ಕೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿದರು. ಈ ಹಿನ್ನೆಲೆಯಲ್ಲಿ ಮಾರ್ಚ್ 12ರಂದು ಬೆಂಗಳೂರಿನಲ್ಲಿ ದೊಡ್ಡ ಮಟ್ಟದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು, ಸರ್ಕಾರ ತಕ್ಷಣ ಒಳಮೀಸಲಾತಿ ಜಾರಿಗೆ ಕ್ರಮ ಕೈಗೊಳ್ಳಬೇಕು, ಸಮಸ್ಯೆಗೆ ಶೀಘ್ರ ಪರಿಹಾರ ಕಂಡುಕೊಳ್ಳದಿದ್ದರೆ ರಾಜ್ಯಾದ್ಯಂತ ರಕ್ತಕ್ರಾಂತಿಯಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿ ರಾಜ್ಯ ಸರಕಾರಕ್ಕೆ ಗುರುಮಠಕಲ್ ತಹಸೀಲ್ದಾರ್ ಚನ್ನ ಮಲ್ಲಪ್ಪ ಘಂಟಿಯವರ ಮೂಲಕ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಕಾರ್ಯಕಾರಿಣಿ ಸಮಿತಿ ಸದಸ್ಯರಾದ ಕ.ದೇವದಾಸ್, ಬಹುಜನ ಸಮಾಜ ಪಾರ್ಟಿ ಉಪಾಧ್ಯಕ್ಷ ಕೆ.ಬಿ. ವಾಸು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ಚಪೆಟ್ಲಿ, ಮಾಜಿ ಪುರಸಭೆ ಅಧ್ಯಕ್ಷ ಭೀಮಶೆಪ್ಪ ಗುಡಸೆ, ಮಾಜಿ ಪುರಸಭೆ ಸದಸ್ಯ ಆಶನ್ನು ಬುದ್ಧ, ಡಾ.ಬಿ.ಆರ್. ಅಂಬೇಡ್ಕರ್ ಯುವಕ ಸಂಘದ ಅಧ್ಯಕ್ಷ ಹನುಮಂತು ಶನಿವಾರಂ, ಡಾ. ಬಾಬು ಜಗಜೀವನರಾವ್ ಯುವಕ ಸಂಘದ ಅಧ್ಯಕ್ಷ ಭೀಮಶೆಪ್ಪ ಶನಿವಾರಂ, ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲೂಕು ಅಧ್ಯಕ್ಷ ಅಶೋಕ್ ಶನಿವಾರಂ, ತಾಲೂಕು ಅಧ್ಯಕ್ಷ ರವಿ ಬುರನೋಳ, ಸಮಾಜದ ಮುಖಂಡ ಕಾಶಪ್ಪ ಚಿನ್ನಕಾರ, ಯುವ ಮುಖಂಡ ಮಾಣಿಕ್ ಮುಕಿಡಿ ಹಾಗೂ ಡಾ. ಕೃಷ್ಣ ಚಪೆಟ್ಲಾ ಇನ್ನಿತರರು ಇದ್ದರು.

# ಸಾಧಕರಿಂದ ಸ್ಪೂರ್ತಿ ಪಡೆಯುವ ದಿನ



ಮಲ್ಲಮ್ಮನುಡಿ ವಾರ್ತೆ ಯಾದಗಿರಿ

ಸಮಾಜದಲ್ಲಿ ಉನ್ನತ ಸ್ಥಾನ ಪಡೆಯಲು ಸಾಧನೆ ಮಾಡಿದ ಮಹಿಳೆಯರಿಗೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಸ್ಪೂರ್ತಿದಾಯಕ ದಿನವಾಗಿದೆ ಎಂದು ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ಹೇಳಿದರು. ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಇಂದು ಜಿಲ್ಲಾಡಳಿತ, ಜಿ.ಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘ, ಮಿಷನ್ ಶಕ್ತಿ ಯೋಜನೆ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳಾ ಸಬಲೀಕರಣ ಹಾಗೂ ಮಹಿಳಾ ಸಾಧಕರನ್ನು ಸ್ಮರಿಸುವ ಹಾಗೂ ಸಾಧಕರಿಂದ ಸ್ಪೂರ್ತಿ ಪಡೆಯುವ ದಿನ ಇದಾಗಿದೆ ಎಂದು ಹೇಳಿದರು. ಮಹಿಳಾ ಕ್ಷೇತ್ರದಲ್ಲಿ ಸಾಧನೆ, ಕರ್ತವ್ಯ ಹಾಗೂ ಮಹಿಳೆಯರಿಗಾಗಿ ಇರುವ ಸರ್ಕಾರದ ಯೋಜನೆಗಳ ಚಿಂತನೆ ಮಾಡುವ ದಿನ ಇದಾಗಿದೆ. ಮಹಿಳಾ ಅಧಿಕಾರಿಗಳು, ಸಿಬ್ಬಂದಿಗಳು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಮಹಿಳಾ ಸಬಲೀಕರಣದ ಪ್ರತೀಕವಾಗಿದ್ದಾರೆ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ ಅವರು ಯಾದಗಿರಿ ಜಿಲ್ಲೆ ಎಸ್. ಎಸ್. ಎಲ್. ಸಿ ಫಲಿತಾಂಶದಲ್ಲಿ ಹಿಂದುಳಿದಿದೆ ಎಂಬ ಮನೋಭಾವನೆ ಮಧ್ಯ, ಈಗ ನಾಗರಿಕ ಸೇವಾ ಪರೀಕ್ಷೆಯಲ್ಲಿ ಈ ಜಿಲ್ಲೆಯಿಂದಲೇ ನಾಲ್ವರು ಸಾಧನೆ ಮಾಡಿ ಕೀರ್ತಿ ಹೆಚ್ಚಿಸಿದ್ದಾರೆ. ವಿಶೇಷವಾಗಿ ಈ ಜಿಲ್ಲೆಯವರಾದ ನಿವೇದಿತಾ ಭಾವಿಮನಿ ಅವರು, ಓರ್ವ ಪಿಡಿಓ ಮಗಳಾಗಿ, ಯುಪಿಎಸ್ಸಿ ಯಲ್ಲಿ ಸಾಧನೆ ಮಾಡಿದ್ದು, ಜಿಲ್ಲೆಯ ಎಲ್ಲ ವಿದ್ಯಾರ್ಥಿಗಳಿಗೆ ಸ್ಪೂರ್ತಿಯಾಗಿದ್ದಾರೆ ಎಂದು ಹೇಳಿದರು. ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ಪೃಥ್ವಿಕ್ ಶಂಕರ್ ಅವರು ಮಾತನಾಡಿ, ಕುಟುಂಬ ಹಾಗೂ ದೇಶದ ಪ್ರಗತಿಯಲ್ಲಿ ಮಹಿಳೆಯರ ಕೊಡುಗೆ ಅಪಾರವಾಗಿದೆ. ಮಹಿಳೆಯರನ್ನು ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಸಶಕ್ತಗೊಳಿಸಿದಲ್ಲಿ ಕುಟುಂಬದ ಹಾಗೂ ಎಲ್ಲ ರಂಗದಲ್ಲಿ ಪ್ರಗತಿ ಹೊಂದಲು ಸಾಧ್ಯ. ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟಗಳಲ್ಲಿಯೂ ಮಹಿಳೆಯರಿಗೂ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು.

ನಾಗರಿಕ ಸೇವಾ ಪರೀಕ್ಷೆಯಲ್ಲಿ ಸಾಧನೆಗೈದ ಜಿಲ್ಲೆಯ ಡಾ.ನಿವೇದಿತಾ ಭಾವಿಮನಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಮಹಿಳೆಯರು ಅಡುಗೆ ಮನೆಗೆ ಸೀಮಿತವಾಗದೆ, ವಿಶ್ವವನ್ನೇ ಬದಲಿಸುವ ಶಕ್ತಿ ಹೊಂದಿದ್ದಾರೆ. ಹೆಣ್ಣು ಮಕ್ಕಳು ವಿದ್ಯಾವಂತರಾಗಿ ಯಶಸ್ವಿಯಾಗಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಶಹಾಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಧ್ಯಾಪಕ ಡಾ.ಶಂಕ್ರಮ್ಮ ಪಾಟೀಲ್ ಉಪನ್ಯಾಸ ನೀಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಶ್ರೀ ತಿಪ್ಪಣ್ಣ ಶಿರಸಗಿ, ಯುವಜನ ಸೇವಾ ಹಾಗೂ ಕ್ರೀಡಾಧಿಕಾರಿ ರಾಜು ಬಾವಿಹಳ್ಳಿ ಉಪಸ್ಥಿತರಿದ್ದರು. ಕವಿತಾ ಪತ್ತಾರ ಪ್ರಾರ್ಥಿಸಿದರು.

ಸರ್ಕಾರಿ ಮಹಿಳಾ ನೌಕರರ ಸಂಘ ಜಿಲ್ಲಾ ಅಧ್ಯಕ್ಷ ಚಂದ್ರಕಲಾ ಗೂಗಲ್ ಉಪಸ್ಥಿತರಿದ್ದರು. ನೂತನವಾಗಿ ಆಯ್ಕೆಯಾದ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ನೇಮಕಾತಿ ಆದೇಶ ಪತ್ರ ವಿತರಿಸಲಾಯಿತು. ವಿವಿಧ ಕ್ರೀಡಾ ಸ್ಪರ್ಧೆ ಹಾಗೂ ಸಾಂಸ್ಕೃತಿಕ ಕಲಾಪ್ರಕಾರಗಳಲ್ಲಿ ವಿಜೇತರಾದವರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

# ವಿಶ್ವ ಮಹಿಳಾ ದಿನಾಚರಣೆ



• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ನಗರದ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ವಿಶ್ವ ಮಹಿಳಾ ದಿನಾಚರಣೆಯಲ್ಲಿ ಕಾರ್ಯಕ್ರಮ ಸಸಿ ಹಾಕುವ ಮೂಲಕ ಸಾಹಿತಿ ರೇವತಿ ಶೆಟ್ಟಿ ಉದ್ಘಾಟಿಸಿ

ನಂತರ ಮಾತನಾಡಿಅವರು, ಲಿಂಗ ತಾರತಮ್ಯ, ಸಮಾನತೆ, ಸಮಾನಹಕ್ಕುಗಳು ಇವೆಲ್ಲವುಗಳನ್ನು ಗಳಿಸಲು ಚಳವಳಿಯ ರೂಪದಲ್ಲಿ ಆರಂಭಗೊಂಡ ಮಹಿಳೆಯರ ಹೋರಾಟ ವಿಶ್ವದ ಗಮನಸೆಳೆಯುವಲ್ಲಿ ಯಶಸ್ವಿಯಾಯಿತು. ತಾನೊಬ್ಬ ಮಹಿಳೆ ಎನ್ನುವುದನ್ನು ಆತ್ಮಗೌರವದೊಂದಿಗೆ ತಲೆ ಎತ್ತಿ ನಿಂತಲ್ಲಿ ಮಾತ್ರ ಮಹಿಳಾ ಸಬಲೀಕರಣ ಆಗಲು ಸಾಧ್ಯ ಎಂದರು.

ತಾನು ಹೆಣ್ಣಾಗಿರುವುದರಿಂದ ತನ್ನ ಮೇಲೆ ಗೌರವವಿಟ್ಟುಕೊಳ್ಳುವುದೇ ಮಹಿಳಾ ದಿನಾಚರಣೆಯ ಮೂಲ ಆಶಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಇಂದಿರಾ ಗಾಂಧಿ ಮುಕ್ತ ವಿವಿ ಉಪನಿರ್ದೇಶಕಿ ಎಚ್.ಸಿ. ಹೇಮಾಮಾಲಿನಿ, ಪ್ರಾಂಶುಪಾಲ ಡಾ. ಬಿ.ಸಿ. ಸುರೇಶ್ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ, ಪತ್ರಕರ್ತ ಧರ್ಮಾಪುರ ನಾರಾಯಣ್, ಡಾ. ಎಚ್.ಎಲ್. ಶೋಭ, ಕವಿತ, ಬಸವರಾಜು, ಡಾ. ಎಚ್. ಎಲ್. ದಿವ್ಯಾ, ಡಾ. ಎಂ. ಆರ್. ರಾಶಿ, ಪ್ರೊ. ವಸಂತ್‌ಕುಮಾರ್ ಹಾಜರಿದ್ದರು.

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಜೆ.ವಿ. ಪುರುಷೋತ್ತಮ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಸುಧಾ ಪಾಟೀಲ್ ಅವರು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ–ಯ ಮಹತ್ವದ ಕುರಿತು ಮಾತನಾಡಿ, ಮಹಿಳೆಯರು ಕುಟುಂಬ ಹಾಗೂ ಸಮಾಜ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ ಎಂದು ಹೇಳಿದರು. ಮಹಿಳೆಯರ ಶಿಕ್ಷಣ, ಸ್ವಾವಲಂಬನೆ ಹಾಗೂ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಅವರ ಸಾಧನೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಅಗತ್ಯವೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# 16ನೇ ಸಂಸ್ಕೃತಿಕ ಸಮ್ಮೇಳನ ಸಮಾನತೆ, ಏಕತೆ ಭಾಷಣ: ಸಂಗನಬಸಪ್ಪ ಬಿರಾದರ್

• ಮಲ್ಲಮ್ಮ ನುಡಿ ವಾರ್ತೆ ಪೀಣ್ಯ



ಕನ್ನಡವು ಭಾರತದ 4 ಪ್ರಮುಖ ಶಾಸ್ತ್ರೀಯಭಾಷೆಗಳಲ್ಲಿ ಒಂದಾಗಿದ್ದು, ದೀರ್ಘ ಇತಿಹಾಸ ಮತ್ತು ಸ್ವತಂತ್ರ ಸಾಹಿತ್ಯಿಕ ಸಂಪ್ರದಾಯವನ್ನು ಹೊಂದಿದೆ ಎಂದು ಚಿಂತಕರು ವಾಗ್ಮಿಗಳು ಬುದ್ದಿಜೀವಿಗಳು ಜನ ಪ್ರಿಯ ಸೇವಕರು ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದ ಪ್ರಶಸ್ತಿ ಪುರಸ್ಕೃತರಾದ ಡಾ. ಸಂಗನ ಬಸಪ್ಪ ಬಿರಾದಾರ್ ಸಮ್ಮೇಳನದಲ್ಲಿ ಸಮ್ಮೇಳನ ಅಧ್ಯಕ್ಷರ ಮೆರವಣಿಗೆಯಲ್ಲಿ ಡಾ . ಸಂಗನ ಬಸಪ್ಪ ಬಿರಾದಾರ್ ಅದ್ಭುತ ಸಮಾನತೆ ಮತ್ತು ಶ್ರೇಷ್ಠ ಸಂಘಟನೆಯಿಂದ ಸ್ಥಳೀಯರಿಂದ ಅಪಾರ ಗೌರವ ನನಗೆ ದೊರಕಿದೆ ಇದೊಂದು ಕನ್ನಡಕ್ಕೆ ತಂದ ದೊಡ್ಡ ಜಯ ಎಂದು ಡಾ. ಸಂಗನ ಬಸಪ್ಪ ಬಿರಾದಾರ್ ಭಾವುಕರಾಗಿ ಹೇಳಿದರು.

ಈ ಕರ್ಮಭೂಮಿಯಲ್ಲಿ ನಮ್ಮ ಸಹನೆ ಸಹಕಾರ ಇಲ್ಲಿನ ಜನತೆಯೊಂದಿಗೆ ಅವರ ಸಂಸ್ಕಾರದೊಂದಿಗೆ ಬೆರೆತು ತಾವು ಬೆಳೆದು ತಮ್ಮ ಉದ್ಯೋಗ ಅಭಿವೃದ್ಧಿ ಮಾಡಿಕೊಂಡು ಕನ್ನಡ ಜನತೆಯ ದೊಡ್ಡ ಕೊಡುಗೆಯಾಗಿ ಸಮಾಜವನ್ನು ಮುನ್ನಡೆಸುವ ಕಾರ್ಯ ಆಗಬೇಕು ಎಂದರು.

ಅವರು ಗೋವಾ ರಾಜ್ಯದಲ್ಲಿ ಕರ್ಮ ಭೂಮಿ ಕನ್ನಡ ಸಂಘ ಬಿಚ್ಚೋಲಿ ಗೋವಾದಲ್ಲಿ 16ನೇ ಕನ್ನಡಿಗರ ಸಾಂಸ್ಕೃತಿಕ ಸಮ್ಮೇಳನವನ್ನು ಪದ್ಮಶ್ರೀ ವಿಭೂಶಿತ ಸದ್ಗುರು ಬ್ರಮ್ಹೇಶಾನಂಧ ಆಚಾರ್ಯ ಸ್ವಾಮಿಜಿ ಗೋವಾ, ಶ್ರೀಶ್ರೀಷಬ್ರ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಹಿರೇಮಠ ಹುಕ್ಕೇರಿ, ಶ್ರೀ ಕರಿಸಿದ್ದೇಶ್ವರ ಪಟ್ಟದ ಪೂಜ್ಯರು ಹಳೆತೋರಗಲ್ಲ ಇವರು ದಿವ್ಯ ಸಾನಿಧ್ಯದಲ್ಲಿ ಹಾಗೂ ಗೋವಾ ರಾಜ್ಯದ ಮುಖ್ಯಮಂತ್ರಿ ಡಾ ಪ್ರಮೋದ್ ಸಾವಂತ್ ಅವರ ಉಪಸ್ಥಿತಿಯಲ್ಲಿ ಮತ್ತು ಮಹೇಶ್ ಬಾಬು ಸುರ್ವೆ ಮತ್ತು ನಂದೀಶ್ ಜಿ ಅವರ ಮುಂದಾಳತ್ವದಲ್ಲಿ ಸಮ್ಮೇಳನಕ್ಕೆ ಜ್ಯೋತಿ ಬೆಳಗಿಸಿ ಉದ್ಘಾಟಿಸಿ

ಮಾತನಾಡಿದ ಸಮ್ಮೇಳನದ ಅಧ್ಯಕ್ಷ ಡಾ. ಸಂಗನ ಬಸಪ್ಪ ಬಿರಾದಾರ್ ಪಂಪ, ರನ್ನ, ಪೊನ್ನರಿಂದ ಹಿಡಿದು ಆಧುನಿಕ ಕವಿಗಳ ಭವ್ಯ ಪರಂಪರೆ ಹೊಂದಿದೆ. ಅದರಂತೆ ಗೋವಾದಲ್ಲಿ ನೆಲೆಸಿದ ನಮ್ಮ ಕನ್ನಡಿಗರು ಈ ಅದ್ಭುತ ಕಾರ್ಯಕ್ರಮಕ್ಕೆ ಗೋವಾ ರಾಜ್ಯದ ಮುಖ್ಯಮಂತ್ರಿ ಡಾ ಪ್ರಮೋದ್ ಸಾವಂತ್ ಅವರು ಸಾವಿರಕ್ಕೂ ಹೆಚ್ಚು ಕುಂಬ ಮೇಳಕ್ಕೆ ಚಾಲನೆ ನೀಡಿದ್ದು ನಮ್ಮೆಲರಿಗೂ ಖುಷಿ ತಂದಿದೆ. ಅದಲ್ಲದೆ ನಮ್ಮ ಕನ್ನಡ ಸಾಹಿತ್ಯಕ್ಕೆ 8 ಜ್ಞಾನಪೀಠ ಪ್ರಶಸ್ತಿಗಳನ್ನು ಗಳಿಸಿದ್ದು ನಮ್ಮ ಆರುವರೆ ಕೋಟಿ ಕನ್ನಡಿಗರಿಗೆ ಹೆಮ್ಮೆಯ ಸಂಗತಿ ಗೋವಾ ಕನ್ನಡಿಗರ ಸಾಂಸ್ಕೃತಿಕ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಮಾಡಿದ್ದು ನಮ್ಮ ಗೋವಾದ ಜನತೆಗೆ ವಿಶೇಷವಾಗಿ ಮಹೇಶ್ ಬಾಬು ಸುರ್ವೆ, ನಂದೀಶ್ ಇವರಿಗೆ ಅಭಿನಂದನೆಗಳು ಡಾ ಸಂಗನ ಬಸಪ್ಪ ಬಿರಾದಾರ್ ಕನ್ನಡಿಗರನ್ನು ಉದ್ದೇಶಿಸಿ ಮಾತನಾಡಿದರು.

ವಿವಿಧ ಕಲಾತಂಡಗಳಿಂದ ಸಾಂಸ್ಕೃತಿಕ ಮನೋರಂಜನೆ ಕಾರ್ಯಕ್ರಮ ಜರುಗಿದ

ಈ ಸಂದರ್ಭದಲ್ಲಿ ಶಾಸಕ ಪ್ರೇಮೆಂದ್ರ ವಿ ಶೇಠ್ , ಮಾಜಿ ಸಂಸದ ಅಣ್ಣಾ ಸಾಹೇಬ್ ಜೊಲ್ಲೆ, ಮಾಜಿ ವಿಧಾನ ಪರಿಷತ್ ಸದಸ್ಯ ಸೋಮಣ್ಣ ಬೇವಿನಮರ, ಹನುಮಂತ ಶಿರೂರ, ಡಾ. ಸಂಗನ ಬಸಪ್ಪ ಬಿರಾದಾರ್ ಅವರ ಸಹೋಧರ ರಾಜ್ ಕುಮಾರ್ ಮತ್ತು ಕುಟುಂಬ ಸದಸ್ಯರು, ಬಾಗಲಗುಂಟೆ ವಾರ್ಡ ಬಿಜೆಪಿ ಅಧ್ಯಕ್ಷ ಮಧುಸೂದನ್, ಖ್ಯಾತ ವೈದ್ಯ ಡಾ ಬಿ ಎಂ ಬಳ್ಳಾರಿ, ಸುರೇಶ್ ದೊಡ್ಡಮನಿ, ಶರಣಬಸವೇಶ ಆಲೂರ್, ನಿವೃತ್ತ ವೀರ ಯೋಧರ ಚನ್ನಾರೆಡ್ಡಿ, ನಾಗರಾಜ್ ಹುಬ್ಬಳ್ಳಿ, ಮುತ್ತುರಾಜ್ ಹಾಳಕಿ ಸೇರಿದಂತೆ ಮುಂತಾದವರು ಭಾಗವಹಿಸಿದ್ದರು.

# ಸಮಾಜದಲ್ಲಿ ಮಹಿಳೆಯರ ಪಾತ್ರ ಬಹು ಮುಖ್ಯ



• ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ:

ಮಹಿಳೆಯರು ಸಮಾಜ ಹಾಗೂ ಕುಟುಂಬ, ಆರ್ಥಿಕತೆ ಮತ್ತು ರಾಷ್ಟದ ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರವಹಿಸುವುದಲ್ಲದೆ ಸಮಾಜದಲ್ಲಿ ಮಹಿಳೆಯರ ಪಾತ್ರ ಬಹು ಮುಖ್ಯವಾಗಿದೆ ಎಂದು ಕಲಘಟಗಿ ಹನ್ನೇರಡು ಮಠದ ರೇವಣಸಿದ್ಧೇಶ್ವರ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ಅವರು ತಾಲೂಕಿನ ಬಮ್ಮಿಗಟ್ಟಿ ಗ್ರಾಮದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಅಂಗವಾಗಿ ಮುಕ್ಕಣ್ಣವರ ನಿವಾಸದ ಎದುರು ನಡೆದ ಮಹಿಳಾ ಸೇವಕರ ಸನ್ಮಾನ ಕಾರ್ಯಕ್ರಮಲ್ಲಿ ಆಶೀರ್ವಚನ ನೀಡಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಹಿಳೆಯರು ಸಕ್ರಿಯರಾಗಿದ್ದು, ನಾಯಕತ್ವ ವಹಿಸುತ್ತಿದ್ದಾರೆ. ಮಹಿಳೆಯರ ಕೊಡುಗೆ ಅಪಾರ ಎಂದರು.

ಸಾನ್ನಿಧ್ಯ ವಹಿಸಿದ್ದ ಶಿರಸಂಗಿ ಮಠದ ಬಸವ ಮಹಾಂತ ಸ್ವಾಮೀಜಿ ಮಾತನಾಡಿ, ಮಹಿಳೆಯರ ಸೇವೆ ಹಾಗೂ ತ್ಯಾಗ ದೊಡ್ಡದು. ಎಂದರು.

ಮುಂಡಗೋಡ ರುದ್ರಮುನಿಸ್ವಾಮೀಜಿ, ಕುಂದಗೋಳ ಕಲ್ಯಾಣಪುರ ಮಠದ ಬಸವಣ್ಣಜ್ಜನವರು, ಮಂಟೂರು ಹಾಗೂ ಬಮ್ಮಿಗಟ್ಟಿ ಶ್ರೀ ಅಡವಿ ಸಿದ್ಧೇಶ್ವರ ಮಠದ ಉತ್ತರಾಧಿಕಾರಿ ಇಂದುಧರದೇವರು ಮಾತನಾಡಿದರು

ಇದೇ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಬಿಸಿಯೂಟದ ಸಹಾಯಕರನ್ನು ಸನ್ಮಾನಿಸಲಾಯಿತು.


ರುದ್ರಯ್ಯ ಚಿಕ್ಕಮಠ, ಬಸಯ್ಯ ಹಿರೇಮಠ, ಈರಯ್ಯ ಕಲಕಟ್ಟಿ, ಬಸಯ್ಯ ಸುರಗಿಮಠ,

ಅಣ್ಣಿಗೇರಿ ಹಾಗೂ ಬಮ್ಮಿಗಟ್ಟಿ ಗ್ರಾಮದ ಹಿರಿಯರು ಇದ್ದರು. ಡಾ.ಎಸ್.ಬಿ.ಹುಲಿಕಟ್ಟಿ ಕಾರ್ಯಕ್ರಮ ನಿರುಪಿಸಿದರು ಶಿಕ್ಷಕ ಪರುಶುರಾಮ ಪಾಣಿಗಟ್ಟಿ ನಿರೂಪಿಸಿದರು. ಶಿಕ್ಷಕ ಸುರೇಶ ಯಲ್ಲಾರಿ ವಂದಿಸಿದರು.

ಚಿತ್ರ ಇದೆ 9 ಕೆ.ಎಲ್.ಜಿ.1 ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಬಿಸಿಯೂಟದ ಸಹಾಯಕರನ್ನು ಸನ್ಮಾನಿಸಲಾಯಿತು.

# ಒಳ ಮೀಸಲಾತಿ: ಮಾದಿಗರ ಬೃಹತ್ ಪ್ರತಿಭಟನಾ ರ್‍ಯಾಲಿ

• ಮಲ್ಲಮ್ಮ ನುಡಿ ವಾರ್ತೆ
ಲಿಂಗಸುಗೂರು



ರಾಜ್ಯದಲ್ಲಿ ಒಳ ಮೀಸಲಾತಿ ಜಾರಿಗೆ ತರಬೇಕು ಹಾಗೂ ಅದರ ಅನ್ವಯ ಖಾಲಿ ಇರುವ 56,432 ಸರ್ಕಾರಿ ಹುದ್ದೆಗಳನ್ನು ತಕ್ಷಣವೇ ನೇಮಕಾತಿ ಮಾಡಿಕೊಳ್ಳಬೇಕು ಎಂದು ಮಾರ್ಚ್ 12ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನಾ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ಮಾದಿಗ ಸಮಾಜ ಮುಖಂಡ ಉಮೇಶ ಹುನಕುಂಟಿ ತಿಳಿಸಿದ್ದಾರೆ.

ಈ ಕುರಿತು ಮಾತನಾಡಿದ ಅವರು, ಅನೇಕ ವರ್ಷಗಳಿಂದ ಮಾದಿಗ ಸಮುದಾಯವು ಒಳ ಮೀಸಲಾತಿ ಹಕ್ಕಿಗಾಗಿ ಹೋರಾಟ ನಡೆಸುತ್ತಿದ್ದು, ಈಗಾಗಲೇ ಈ ಸಂಬಂಧ ಹಲವು ಬಾರಿ ರಾಜ್ಯ ಸರ್ಕಾರದ ಗಮನಕ್ಕೆ ತರಲಾಗಿದೆಯಾದರೂ, ಸಮರ್ಪಕ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಆಕ್ಷೇಪಿಸಿದರು. ಸರ್ಕಾರವು ತಕ್ಷಣವೇ ಒಳ ಮೀಸಲಾತಿ ಜಾರಿಗೊಳಿಸಿ, ಅದರ ಅನ್ವಯ ಖಾಲಿ ಇರುವ 56,432 ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಅವರು ಆಗ್ರಹಿಸಿದರು.

ರಾಜ್ಯದ ವಿವಿಧ ಇಲಾಖೆಗಳಲ್ಲಿಯೂ ದೀರ್ಘಕಾಲದಿಂದ ಸಾವಿರಾರು ಹುದ್ದೆಗಳು ಖಾಲಿ ಉಳಿದಿವೆ. ಇವುಗಳನ್ನು ಒಳ ಮೀಸಲಾತಿ ನಿಯಮದ ಪ್ರಕಾರ ಭರ್ತಿ ಮಾಡಿದರೆ, ಹಿಂದುಳಿದ ಸಮುದಾಯಗಳಿಗೆ ಉದ್ಯೋಗಾವಕಾಶ ದೊರೆಯುವ ಜೊತೆಗೆ ಸಾಮಾಜಿಕ ನ್ಯಾಯ ಸಾಧನೆ ಸಾಧ್ಯವಾಗುತ್ತದೆ ಎಂದು ಹೇಳಿದರು.

ಮಾದಿಗ ಸಮುದಾಯವು ಹಲವು ದಶಕಗಳಿಂದ ಸಮಾನ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿದ್ದು, ಒಳ ಮೀಸಲಾತಿ ಜಾರಿಗೆ ತರಬೇಕೆಂಬ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಜನರು ಬೆಂಗಳೂರಿಗೆ ಆಗಮಿಸಿ ಪ್ರತಿಭಟನಾ ರ್‍ಯಾಲಿಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ ಎಂದು ಉಮೇಶ ಹುನಕುಂಟಿ ತಿಳಿಸಿದರು.

ಈ ರ್‍ಯಾಲಿಯಲ್ಲಿ ಸಮುದಾಯದ ಮುಖಂಡರು, ಸಂಘಟನೆಗಳ ಪ್ರತಿನಿಧಿಗಳು, ಯುವಕರು ಹಾಗೂ ಮಹಿಳೆಯರು ಸೇರಿದಂತೆ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ. ರಾಜ್ಯ ಸರ್ಕಾರವು ಈ ಪ್ರತಿಭಟನೆಯನ್ನು ಗಂಭೀರವಾಗಿ ಪರಿಗಣಿಸಿ, ಒಳ ಮೀಸಲಾತಿ ಜಾರಿಗೆ ಸಂಬಂಧಿಸಿದಂತೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಮಾ.12ರಂದು ನಡೆಯುವ ಈ ಬೃಹತ್ ಪ್ರತಿಭಟನೆ ರಾಜ್ಯ ಸರ್ಕಾರದ ಗಮನ ಸೆಳೆಯುವ ಪ್ರಮುಖ ಹೋರಾಟವಾಗಲಿದೆ. ಒಳ ಮೀಸಲಾತಿ ಜಾರಿಗೆ ಸಂಬಂಧಿಸಿದಂತೆ ಸ್ಪಷ್ಟವಾದ ನಿರ್ಧಾರ ಪ್ರಕಟಿಸಬೇಕು ಎಂಬುದು ಸಮಿತಿಯ ಮುಖ್ಯ ಬೇಡಿಕೆಯಾಗಿದೆ. ಪ್ರತಿಭಟನೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಮಾದಿಗ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟವನ್ನು ಯಶಸ್ವಿಗೊಳಿಸಬೇಕು ಎಂದು ಉಮೇಶ ಹುನಕುಂಟಿ ಮನವಿ ಮಾಡಿದ್ದಾರೆ.

# 865 ವಿದ್ಯಾರ್ಥಿ ಗೈರು ಹಾಜರು

• ಮಲ್ಲಮ್ಮ ನುಡಿ ವಾರ್ತೆ
ರಾಯಚೂರು

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯಿಂದ ಜಿಲ್ಲೆಯ 43 ಪರೀಕ್ಷೆ ಕೇಂದ್ರಗಳಲ್ಲಿ ಮಾರ್ಚ 10ರಂದು ಅರ್ಥಶಾಸ್ತ್ರ ವಿಷಯದ ಪರೀಕ್ಷೆ ನಡೆಯಿತು.

ಒಟ್ಟು 12,692 ವಿದ್ಯಾರ್ಥಿಗಳು ನೋಂದಣಿಯಾಗಿದ್ದು, 11,827 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 865 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಭಾರಿ ಉಪನಿರ್ದೇಶಕರಾದ ಸೋಮಶೇಖರಪ್ಪ ಹೋಕ್ರಾಣಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕುಕನೂರು ತಾಲೂಕ ಮಟ್ಟದ ರೇಣುಕಾಚಾರ್ಯರ ಜಯಂತೋತ್ಸವ



• ಮಲ್ಲಮ್ಮ ನುಡಿ ವಾರ್ತೆ
ಕುಕನೂರ

ವೀರಶೈವಧರ್ಮ ಸಂಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಕುಕನೂರು ತಾಲೂಕ ಮಟ್ಟದ ಜಯಂತೋತ್ಸವ ಹಾಗೂ ಮೂರ್ತಿ ಪ್ರತಿಷ್ಠಾಪನೆಯನ್ನು ನಾಳೆ ಮಾರ್ಚ್ 12ರಂದು ಮಂಡಲಗಿರಿ ಗ್ರಾಮದಲ್ಲಿ ಆಯೋಜಿಸಲಾಗಿದೆ ಎಂದು ವೀರಶೈವ ಜಂಗಮ ಸಂಘ ತಾಲೂಕ ಘಟಕದ ಅಧ್ಯಕ್ಷ ಮಹೇಶ ಕಲ್ಮಠ ಹೇಳಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಹೇಶ ಕಲ್ಮಠ ಮಾತನಾಡುತ್ತಾ ವೀರಶೈವ ಸಂಸ್ಥಾಪಕ ಶ್ರೀ ಜಗದ್ಗುರು ರೇಣುಕಾಚಾರ್ಯರ ತಾಲೂಕ ಮಟ್ಟದ ಜಯಂತೋತ್ಸವ ಹಾಗೂ ರೇಣುಕಾಚಾರ್ಯರ ಮೂರ್ತಿ ಪ್ರತಿಷ್ಠಾಪನ ಕಾರ್ಯಕ್ರಮವನ್ನು ತಾಲೂಕಿನ ಮಂಡಲಗಿರಿ ಗ್ರಾಮದಲ್ಲಿ ಆಯೋಜಿಸಿದ್ದು ಆ ದಿನ ಬೆಳಗ್ಗೆ 4:30 ರಿಂದ 7 ಗಂಟೆಯವರೆಗೆ ಮೂರ್ತಿ ಪ್ರತಿಷ್ಠಾಪನ ಹಾಗೂ ಜಯಂತೋತ್ಸವ ಕಾರ್ಯಕ್ರಮವನ್ನು ಆಯೋಜಿಸಿದ್ದು ಕಾರ್ಯಕ್ರಮದಲ್ಲಿ ತಾಲೂಕಿನ ಕುದುರೆಮೋತಿ ಗ್ರಾಮದಲ್ಲಿರುವ ಮೈಸೂರು ಸಂಸ್ಥಾನ ಮಠದ ಶ್ರೀ ವಿಜಯ ಮಹಾಂತೇಶ್ವರ ಮಹಾಸ್ವಾಮಿಗಳು, ಮಂಗಳೂರಿನ ಅರಳಲೇ ಹಿರೇಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಸಂಸ್ಥಾನ ನಗರಗಡ್ಡಿ ಮಠದ ಶ್ರೀ ಶಾಂತಲಿಂಗೇಶ್ವರ ಮಹಾಸ್ವಾಮಿಗಳು ಹಾಗೂ ಅಡ್ನೂರು, ರಾಜೂರು ಹಾಗೂ ಗದಗ ಶ್ರೀಗಳಾದ ಅಭಿನವ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಗುದ್ನೇಶ್ವರ ಮಠದ ಪ್ರಭುಲಿಂಗ ದೇವರು ದಿವ್ಯಸಾನಿಧ್ಯ ವಹಿಸಲಿದ್ದು ಕುಕನೂರು ಪಟ್ಟಣದ ಮುಂಡರಗಿ ಅನ್ನದಾನೇಶ್ವರ ಶಾಖ ಮಠದ ಡಾ. ಮಹದೇವ ಮಹಾಸ್ವಾಮಿಗಳು ನೇತೃತ್ವವನ್ನು ವಹಿಸಲಿದ್ದಾರೆ, ಮೂರ್ತಿ ಪ್ರತಿಷ್ಠಾಪನೆಯ ಲಬುರ್ಗಾ ಪಟ್ಟಣದ ಶ್ರೀಧರ ಮುರುಡಿ ಹಿರೇಮಠದ ಶ್ರೀ ಬಸವಲಿಂಗೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ನೆರವೇರಿಸಲಿದ್ದು ಕಾರ್ಯಕ್ರಮದಲ್ಲಿ ಅನೇಕ ರಾಜಕೀಯ ಮುಖಂಡರು, ಉನ್ನತ ಮಟ್ಟದ ಅಧಿಕಾರಿಗಳು, ಹಾಗೂ ಸಾವಿರಾರು ಸಂಖ್ಯೆಯಲ್ಲಿ ವೀರಶೈವ– ಲಿಂಗಾಯತ ಜಂಗಮ ಸಮುದಾಯದ ಬಾಂಧವರು ಪಾಲ್ಗೊಳ್ಳಲಿದ್ದು ಎಲ್ಲರೂ ಸೇರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿರುತ್ತಾರೆ.

ಈ ವೇಳೆಯಲ್ಲಿ ವೀರಶೈವ ಜಂಗಮ ಸಂಘದ ತಾಲೂಕ ಉಪಾಧ್ಯಕ್ಷ ವೀರಯ್ಯ ವಸ್ತ್ರದ, ತಾಲೂಕ ಪ್ರಧಾನ ಕಾರ್ಯದರ್ಶಿ ವೀರಯ್ಯ ವಿ ಹಿರೇಮಠ, ಕರಬಸಯ್ಯ ಬಿನ್ನಾಳ, ಸಿದ್ದಲಿಂಗಯ್ಯ ಉಳ್ಳಾಗಡ್ಡಿ,, ಸಿದ್ದಲಿಂಗಯ್ಯ ಬಂಡಿ, ಅಂದನಯ್ಯ ಗೊರಲೆಕೊಪ್ಪ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು

# ಅಂಕೋಲಾದ ಸ್ವಾತಂತ್ರ್ಯ ಚಳುವಳಿ ಮಹತ್ವವಾದದ್ದು : ಹರ್ಷಿಕಾ ಪೂಣಚ್ಚ



• ಮಲ್ಲಮ್ಮ ನುಡಿ ವಾರ್ತೆ
ಅಂಕೋಲಾ

ಕರ್ನಾಟಕದ ಬಾರ್ಡೋಲಿ ಎನಿಸಿಕೊಂಡಿರುವ ಅಂಕೋಲಾಕ್ಕೆ ತನ್ನದೇ ಆದ ಸ್ಥಾನಮಾನವಿದೆ. ಸ್ವಾಂತ್ರ್ಯ ಹೋರಾಟದಲ್ಲಿ ಅಂಕೋಲಿಗರ ಪಾತ್ರ ಮಹತ್ವವಾದದ್ದು. ಇಲ್ಲಿ ಹಲವು ರೀತಿಯ ಚಳುವಳಿಗಳು ನಡೆದಿದ್ದು ಬೊಮ್ಮಯ್ಯ ಗಾಂವಕರ ಅವರ ಪಾತ್ರವು ಮೌಲ್ಯಯುತವಾದದ್ದು. ಇಂತವುಗಳನ್ನು ಮತ್ತೆ ಮತ್ತೆ ಮೆಲಕು ಹಾಕುವ ಉದ್ದೇಶದಿಂದ ಗಾಂವಕರ ಮೆಮೊರಿಯಲ್ ಫೌಂಡೇಶನ್‌ನವರು ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯವಾದದ್ದು ಎಂದು ಚಿತ್ರನಟಿ ಹರ್ಷಿಕಾ ಪೂಣಚ್ಚ ಹೇಳಿದರು.

ಪಟ್ಟಣದ ಸತ್ಯಾಗ್ರಹ ಸ್ಮಾರಕ ಸಭಾಭವನದ ಸಾಧನಾ ವೇದಿಕೆಯಲ್ಲಿ ಗಾಂವಕರ ಮೆಮೊರಿಯಲ್ ಫೌಂಡೇಶನ್ ಬಾಸಗೋಡ ಇವರು ಹಮ್ಮಿಕೊಂಡಿದ್ದ ಉಪನ್ಯಾಸ, ಯುವ ಪ್ರತಿಭಾ ಪುರಸ್ಕಾರ ಮತ್ತು ಸಾಂಸ್ಕೃತಿಕ ವೈಭವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಬಹುಮುಖಿ ವ್ಯಕ್ತಿತ್ವದ ಬೊಮ್ಮಯ್ಯ ನಾಯಕ ಅವರ ಪರಿಷ್ಕೃತ ಕೃತಿ ಲೋಕಾರ್ಪಣೆಗೊಂಡಿರುವುದು ಕೂಡ ಹೆಮ್ಮೆಯ ಸಂಗತಿ ಎಂದರು.

ಹಿರಿಯ ಪತ್ರಕರ್ತ ಗಂಗಾಧರ ಹಿರೇಗುತ್ತಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಗಾಂವಕರ ಮೆಮೊರಿಯಲ್ ಫೌಂಡೇಶನ್ ಅಧ್ಯಕ್ಷ ದೇವಾನಂದ ಗಾಂವಕರ ಪ್ರಾಸ್ತಾವಿಕವಾಗಿ ಮಾತನಾಡಿದರು. ಚಂದ್ರಶೇಖರ ಪಿ. ನಾಯಕ ಚರಿತ್ರೆಯಲ್ಲಿ ಅಮರಳಾದ ವಾಸರೆಯ ಮಾನುದೇವಿ ನಾಯಕ ಕುರಿತು ವಿವರಿಸಿದರು. ಕವಯಿತ್ರಿ ಅಕ್ಷತಾ ಕೃಷ್ಣಮೂರ್ತಿ ಕೃತಿ ಪರಿಚರಿಸಿದರು. ಮೀನಾಕ್ಷಿ ಪಾಟೀಲ, ದೀಪ್ತಿ ಅರ್ಗೇಕರ ಗಾಯನ ಪ್ರಸ್ತುತ ಪಡಿಸಿದರು. ರಾಜಶ್ರೀ ನಾಯಕ ಪರಿಚಯಿಸಿದರು. ಶಿಲ್ಪಾ ನಾಯ್ಕ ನಿರೂಪಿಸಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಲವರನ್ನು ಸನ್ಮಾನಿಸಿ ಗೌರವಿಸಿದರು.



ಅಂಕೋಲಾ : ಕಾರ್ಯಕ್ರಮದ ನಿಮಿತ್ತ ಅಂಕೋಲಾಕ್ಕೆ ಆಗಮಿಸಿದ ಚಿತ್ರನಟಿ ಹರ್ಷಿಕಾ ಪೂಣಚ್ಚ ಇವರು ಬಾಸಗೋಡದಲ್ಲಿ ಸ್ವಾತಂತ್ರ್ಯ ಹೋರಾಟದ ನೆನಪಿಗಾಗಿ ನಿರ್ಮಿಸಲಾಗಿದ್ದ ಗಾಂಧಿ ಮಂದಿರಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸ್ವಾತಂತ್ರ್ಯ ಯೋಧರ ಮಗ ದೇವಾನಂದ ಬೊಮ್ಮಯ್ಯ ಗಾಂವಕರ, ಇವರ ಪತ್ನಿ ವನಿತಾ ದೇವಾನಂದ ಗಾಂವಕರ ಇದ್ದರು.

# ಜಾನಪದ ಹಾಡುಗಾರ್ತಿ ಲಕ್ಷ್ಮೀ ಗೌಡರಿಗೆ ಸನ್ಮಾನ




• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ತಾಲೂಕಿನ ಶಿವು ಬೊಮ್ಮು ಗೌಡ ಅವರ ಆರೋಗ್ಯಧಾಮದಲ್ಲಿ ಮಹಿಳಾ ದಿನಾಚರಣೆ ನಿಮಿತ್ತ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ನಾಟಿವೈದ್ಯ ಹನುಮಂತ ಬೊಮ್ಮು ಗೌಡ ಅವರು ಜಾನಪದ ಹಾಡುಗಾರ್ತಿ ಲಕ್ಷ್ಮೀ ಗೌಡ ಸೇರಿದಂತೆ ಹಲವರಿಗೆ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಸಣ್ಣಮ್ಮ ಗೌಡ, ಗೋಪಾಲಕೃಷ್ಣ ನಾಯಕ, ಉಮೇಶ ನಾಯ್ಕ ಇತರರಿದ್ದರು.

# ಅಲ್ಲಮಪ್ರಭು ಬಿ.ಇಡಿ. ಕಾಲೇಜಿಗೆ ಶೇಕಡಾ 100ರಷ್ಟು ಫಲಿತಾಂಶ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ




ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಅಡಿಯಲ್ಲಿ ನಡೆಯುತ್ತಿರುವ ತಾಲ್ಲೂಕಿನ ತಳವಾಡ (ಕೆ) ಗ್ರಾಮದ ಅಲ್ಲಮಪ್ರಭು ಬಿ.ಇಡಿ. ಕಾಲೇಜಿಗೆ

ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಪ್ರತಿಶತ ಫಲಿತಾಂಶ ಬಂದಿದೆ ಎಂದು ಪ್ರಾಚಾರ್ಯ ಪಾಂಡುರಂಗ ಕುಂಬಾರ ತಿಳಿಸಿದ್ದಾರೆ.

ದ್ವಿತೀಯ ಸೆಮಿಸ್ಟರ್ ನಲ್ಲಿ ಮಹೇಶ ಜಮಾದಾರ ಶೇಕಡಾ 88, ತಿಪ್ಪಮ್ಮ 88.7, ಮೋನಮ್ಮ 87, ಹನುಮಂತಿ 86.5 ಪ್ರತಿಶತ ಅಂಕ ಪಡೆದಿದ್ದಾರೆ.

ಇನ್ನು ನಾಲ್ಕನೇ ಸೆಮಿಸ್ಟರ್‌ನಲ್ಲಿ ಪರಶುರಾಮ 90.8, ದೀಪಾಲಿ 90.5, ಆನಂದ ಮಲ್ಲಯ್ಯಸ್ವಾಮಿ 90.4 ಪ್ರತಿಶತ ಅಂಕ ಪಡೆದು ಕಾಲೇಜಿಗೆ ಕ್ರಮವಾಗಿ ಒಂದರಿಂದ ಮೂರನೇ ಸ್ಥಾನ ಪಡೆದಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಹಿರೇಮಠ ಸಂಸ್ಥಾನ ವಿದ್ಯಾಪೀಠದ ಸಂಸ್ಥಾಪಕ ಅಧ್ಯಕ್ಷ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಕಾರ್ಯದರ್ಶಿ ಮಹಾಲಿಂಗ ದೇವರು, ಆಡಳಿತಾಧಿಕಾರಿ ಮೋಹನರೆಡ್ಡಿ, ಪಿಯು ಕಾಲೇಜಿನ ಪ್ರಾಚಾರ್ಯ ಬಸವರಾಜ ಮೊಳಕೇರಿ, ಸಂಯೋಜಕ ಬಾಲಾಜಿ ವಲ್ಲೂರೆ, ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಮಾಲೀಕರ ಕಣ್ಣೀರ ಕೋಡಿ ಕಣ್ಣೊರೆಸಲು ಬಂದ ದಿನಕರ ಶೆಟ್ಟಿ



• ಮಲ್ಲಮ್ಮ ನುಡಿ ವಾರ್ತೆ
ಗೋಕರ್ಣ

ಇಲ್ಲಿಯ ಸಮೀಪದ ದುಬ್ಬನಶಶಿ ಕಡಲತೀರದ ಹರಿದುಬಂದ ಜಾಗದಲ್ಲಿ ರೆಸಾರ್ಟ್, ಹೋಮ್‌ಸ್ಟೇ ನಿರ್ಮಿಸಿಕೊಳ್ಳುವ ಸಂದರ್ಭದಲ್ಲಿ ಯಾರೂ ಕೂಡ ತಕರಾರು ಮಾಡಲಿಲ್ಲ. ಆದರೆ ನಾವು ಎಲ್ಲ ಕಟ್ಟಡಗಳನ್ನು ನಿರ್ಮಿಸಿಕೊಂಡು ಉದ್ಯಮ ನಡೆಸುತ್ತಿರುವ ಸಂದರ್ಭದಲ್ಲಿ ಸ್ಥಳೀಯ ಗ್ರಾ.ಪಂ.ನವರು, ತಾಲೂಕು ಆಡಳಿತದವರು ಪೊಲೀಸರ ಜೊತೆ–ಗೂಡಿ ಬಂದು ನಮ್ಮ ಅನಧಿಕೃತ ರೆಸಾರ್ಟ್‌ಗಳನ್ನು ಈಗ ತೆರವು ಮಾಡಲು ಮುಂದಾಗಿರುವುದು ನಮಗೆ ಅರಗಿಸಿಕೊಳ್ಳಲಾಗದ ಸಂಗತಿಯಾಗಿದೆ ಎಂದು ಹಲವರು ಮರುಗಿದ ಸನ್ನಿವೇಶಗಳು ಕಂಡುಬಂದವು.

> “ತೆರವು ಕಾರ್ಯಾಚರಣೆ ನಡೆಯುತ್ತಿದ್ದಂತೆಯೇ ಸ್ಥಳೀಯರು ಜಮಾಯಿಸಿ ಪ್ರತಿಭಟನೆ ಎಂಬಂತೆ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.
> ಈ ಸಮಯಕ್ಕೆ ಸ್ಥಳಕ್ಕೆ ಆಗಮಿಸಿದ ಶಾಸಕ ದಿನಕರ ಶೆಟ್ಟಿ ಒಂದಿಷ್ಟು ಜನರ ಪರವಾಗಿ ಮಾತನಾಡಿ, ನಂತರ ತೆರಳಿದ್ದಾರೆ. ಪಂಚಾಯಿತಿಯವರು ಕಳೆದ ಒಂದು ವರ್ಷಗಳಿಂದಲೂ ಇದನ್ನು ತಿಳಿಯಬೇಕು ಎಂದು ಹೋರಾಟ ನಡೆಸುತ್ತಲೇ ಬಂದಿದ್ದರು. ಆ ಸಮಯದಲ್ಲಿ ಶಾಸಕರು ಸಭೆ ಕರೆದು ಸಮಸ್ಯೆ ಬಗೆಹರಿಸಬಹುದಿತ್ತು. ಆದರೆ ಕೊನೆಯ ಕ್ಷಣದಲ್ಲಿ ಆಗಮಿಸಿರುವುದು ಯಾವ ಪ್ರಯೋಜನ ಬಾರದಂತಾಗಿದೆ.

> “ಸಿಆರ್‌ಝಡ್ ಉಲ್ಲಂಘಿಸಿ ಸರಕಾರಿ ಜಾಗದಲ್ಲಿ ರೆಸಾರ್ಟ್, ಹೋಮ್‌ಸ್ಟೇ ನಿರ್ಮಾಣವಾಗುವಾಗ ಗ್ರಾಮ ಪಂಚಾಯತ ಅಧ್ಯಕ್ಷರಾಗಿದ್ದ ಈಶ್ವರ ಗೌಡ ಇತರರು ಎಲ್ಲಿದ್ದರು. ಆ ಸಮಯದಲ್ಲಿಯೇ ನಮಗೆ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ತಕರಾರು ಮಾಡಿದ್ದರೆ ನಾವು ರೆಸಾರ್ಟ್, ಹೋಮ್‌ಸ್ಟೇ ನಿರ್ಮಾಣ ಮಾಡುತ್ತಿರಲಿಲ್ಲ. ಆದರೆ ಈಗ ಏಕಾಏಕಿ ಬಂದು ನಮ್ಮ ಉದ್ಯಮಕ್ಕೆ ಹೊಡೆತ ನೀಡಿದರೆ ನಾವು ಎಲ್ಲಿಗೆ ತೆರಳಬೇಕು ಎಂದು ಸ್ವಯಂಪ್ರೇರಿತರಾಗಿ ಕಟ್ಟಡವನ್ನು ತೆರವುಗೊಳಿಸುತ್ತಿರುವ ಮಾಲಿಕರ ಕಣ್ಣಲ್ಲಿ ನೀರುಬರುತ್ತಿದ್ದವು. ಇಡೀ ಗೋಕರ್ಣ ಹಾಗು ಜಿಲ್ಲೆಯಾದ್ಯಂತ ನಮಗೆ ಕ್ರಮ ಕೈಗೊಂಡಂತೆ ಉಳಿದವರಿಗೂ ಕ್ರಮ ಕೈಗೊಳ್ಳಿ ಎಂದು ಎಚ್ಚರಿಕೆ ಮತ್ತು ಅಳಲನ್ನು ತೋಡಿಕೊಂಡರು.

ಈ ಭಾಗದಲ್ಲಿ ಒಟ್ಟು 44 ಅನಧಿಕೃತ ರೆಸಾರ್ಟ್ ತೆರವಿಗೆ ತಾಲೂಕು ಆಡಳಿತ ಕ್ರಮ ಕೈಗೊಂಡಿದೆ. ಇದರಿಂದಾಗಿ ಸೋಮವಾರ, ಮಂಗಳವಾರ ಸ್ಥಳದಲ್ಲಿ ಆತಂಕದ ವಾತಾವರಣ ಕಂಡುಬಂದಿದ್ದು, ಪೊಲೀಸರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದಾರೆ.

ದುಬ್ಬನಶಶಿ ಇದು ನಾಡುಮಾಸ್ಕೇರಿ ಗ್ರಾಮಪಂಚಾಯತ ವ್ಯಾಪ್ತಿಗೆ ಒಳಪಟ್ಟಿದ್ದು, ಈ ಹಿಂದೆ ಗ್ರಾ.ಪಂ. ಅಧ್ಯಕ್ಷ ಈಶ್ವರ ಗೌಡ ತಮ್ಮ ಸದಸ್ಯರೊಂದಿಗೆ ಕುಮಟಾ ತಾಲೂಕು ಕಚೇರಿ, ಜಿಲ್ಲಾಧಿಕಾರಿಗಳಿಗೆ ನಿಯೋಗವನ್ನು ಕರೆದುಕೊಂಡು ಹೋಗಿ ಅನಧಿಕೃತ ರೆಸಾರ್ಟ್‌ಗಳನ್ನು ತೆರವುಗೊಳಿಸುವಂತೆ ಹಲವು ಬಾರಿ ಮನವಿ ಸಲ್ಲಿಸಿದರು. ಹಾಗೇ ಮಾಧ್ಯಮಗಳಿಗೂ ಹೇಳಿಕೆಯನ್ನು ನೀಡಿ ಅಧಿಕಾರಿಗಳಿಗೆ ಒತ್ತಡ ಹಾಕಿದ್ದರು.

ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತದ ಸೂಚನೆಯ ಮೇರೆಗೆ ತಾಲೂಕು ಆಡಳಿತ ಸ್ಥಳಕ್ಕೆ ತೆರಳಿ ರೆಸಾರ್ಟ್ ಮಾಲೀಕರಿಗೆ ಜಾಗದ ಕುರಿತಾಗಿ ನೋಟಿಸ್ ನೀಡಿದ್ದರು. ಆದರೆ ಇದಕ್ಕೆ ಉತ್ತರ ನೀಡದಿದ್ದರಿಂದಾಗಿ ಪೊಲೀಸರ ಭದ್ರತೆಯೊಂದಿಗೆ ತಾಲೂಕು ಆಡಳಿತದ ಅಧಿಕಾರಿಗಳು ಭೂಮಾಪನ ಸಿಬ್ಬಂದಿಗಳ ಜತೆಗೆ ಸ್ಥಳಕ್ಕೆ ಇತ್ತೀಚಿಗೆ ದೌಡಾಯಿಸಿದ್ದರು. ಅವರ ಪ್ರಕಾರ ದುಬ್ಬನಶಶಿ ಭಾಗದಲ್ಲಿ 44 ಅನಧಿಕೃತ ರೆಸಾರ್ಟ್‌ಗಳು ಇರುವುದು ಪತ್ತೆಯಾಗಿತ್ತು.

ಇದರಿಂದಾಗಿ ತಾಲೂಕು ಆಡಳಿತ ಅನಧಿಕೃತ ರೆಸಾರ್ಟ್‌ಗಳನ್ನು ತೆರವುಗೊಳಿಸುವಂತೆ ಅದರ ಮಾಲಿಕರಿಗೆ ನೊಟಿಸ್ ನೀಡಿತ್ತು. ನೋಟಿಸ್ ಅವಧಿ ಮುಗಿದರೂ ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಸೋಮವಾರ ತಾಲೂಕು ಆಡಳಿತ, ಪೊಲೀಸ್ ಬಂಧೋಬಸ್ತ್‌ನೊಂದಿಗೆ ಸ್ಥಳಕ್ಕೆ ದೌಡಾಯಿಸಿದ್ದರು. ಇದರಿಂದಾಗಿ ತಮ್ಮ ನೆಲೆಯನ್ನು ಕಳೆದುಕೊಳ್ಳುವ ಆತಂಕದಲ್ಲಿ ರೆಸಾರ್ಟ್ ಮಾಲಿಕರು ತಮ್ಮ ಅಸಮಧಾನವನ್ನು ಹೊರಹಾಕಿದರು.

# ಜಮೀನು ಒದಗಿಸಿದರೆ ಸಿಂಧನೂರಲ್ಲಿ ಜವಳಿ ಪಾರ್ಕ್

ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಕೇಂದ್ರ ಸರ್ಕಾರದ ಅಧೀನದಲ್ಲಿ ಸುಮಾರು 7,500 ಎಕರೆ ಭೂಮಿ ಇದ್ದು, ಇದರಲ್ಲಿ 15 ಎಕರೆಯನ್ನು ಜವಳಿ ಇಲಾಖೆಗೆ ಮಂಜೂರು ಮಾಡಿದರೆ ಸಿಂಧನೂರಲ್ಲಿ ಜವಳಿ ಪಾರ್ಕ್ ಸ್ಥಾಪನೆ ಬೇಡಿಕೆಯನ್ನು ಪರಿಶೀಲಿಸಲಾಗುವುದು ಎಂದು ಕಬ್ಬು ಅಭಿವೃದ್ಧಿ, ಸಕ್ಕರೆ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರು ತಿಳಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಬಸನಗೌಡ ಬಾದರ್ಲಿ ಅವರ ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, ಜವಳಿ ಪಾರ್ಕ್ ಸ್ಥಾಪನೆಗೆ 15 ಎಕರೆ ಭೂಮಿ ಗುರುತಿಸಿ ಇಲಾಖೆಗೆ ಹಸ್ತಾಂತರಿಸಲು ಕಂದಾಯ ಇಲಾಖೆಗೆ ಪತ್ರ ಬರೆಯಲಾಗಿದೆ. ಆದರೆ, ಒಂದೇ ಕಡೆ 15 ಎಕರೆ ಸರ್ಕಾರದ ಭೂಮಿ ಲಭ್ಯ ಇಲ್ಲ ಎಂದು ತಿಳಿಸಿದ್ದಾರೆ. ಉದ್ಯೋಗ ಅರಸಿ ಸಿಂಧನೂರು ತಾಲೂಕಿನ ಯುವಕ ಯುವತಿಯರು ರಾಜ್ಯದ ವಿವಿಧ ಸ್ಥಳಗಳಿಗೆ ವಲಸೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಜವಳಿ ಪಾರ್ಕ್ ಸ್ಥಾಪನೆ ಮಾಡಿದರೆ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಯಾಗಲಿದೆ. ಆದರೆ, ಜವಳಿ ಪಾರ್ಕ್ ನಿರ್ಮಿಸಲು ಅಗತ್ಯ ಪ್ರಮಾಣದ ಸರ್ಕಾರದ ಭೂಮಿ ಸಿಂಧನೂರು ತಾಲೂಕಿನಲ್ಲಿ ಇಲ್ಲ. ಕೇಂದ್ರ ಸರ್ಕಾರದ ಭೂಮಿ ಲಭ್ಯವಿದ್ದು, ಈ ಭೂಮಿಯನ್ನು ಜವಳಿ ಪಾರ್ಕ್ ಸ್ಥಾಪನೆಗೆ ಒದಗಿಸುವಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಪತ್ರ ಬರೆಯಲಿದೆ. ಕೇಂದ್ರ ಸರ್ಕಾರ ಭೂಮಿ ಒದಗಿಸಿದರೆ ಪಿಪಿಪಿ ಮಾದರಿಯಲ್ಲಿ ಜವಳಿ ಪಾರ್ಕ್ ಸ್ಥಾಪನೆ ಬೇಡಿಕೆಯನ್ನು ಪರಿಶೀಲಿಸಲಾಗುವುದು ಎಂದು ಸಚಿವರಾದ ಶಿವಾನಂದ ಪಾಟೀಲ ಅವರು ತಿಳಿಸಿದರು.



ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ದೈಹಿಕ ಶಿಕ್ಷಣ ಪಠ್ಯ ಪುಸ್ತಕ ದ ಬದಲಾಗಿ ಮೌಲ್ಯಶಿಕ್ಷಣ ಎಂದು ಬದಲಿಸಿದ್ದ ಹಿನ್ನಲೆಯಲ್ಲಿ ಮೂದಲಿನಂತೆ ಮುಂದುವರೆಸುವಂತೆ ಅಪರ ಕಾರ್ಯದರ್ಶಿಯವರಿಗೆ ಡಿ.ಡಿ.ಪಿ.ಐ.ರವರ ಮುಕಾಂತತರ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ದೈಹಿಕ ಶಿಕ್ಷಣ ಸಂಘದ ಅಧ್ಯಕ್ಷ ಹಣಮಂತ ಹೊಸಮನಿ, ಖಜಾಂಚಿ ಬಸವರಾಜ್ ಪಾಟೀಲ್, ತಾಲೂಕ ಅಧ್ಯಕ್ಷ ಭೀಮರಾಯ ಬೊಮ್ಮನ್, ರಾಜ್ಯ ಕಾರ್ಯದರ್ಶಿ ಬಸವರಾಜ್ ಗೋಗಿ, ಚಂದ್ರಶೇಖರ ವೈದ್ಯ ಹಾಗೂ ಮಹಿಳಾ ಪದಾಧಿಕಾರಿಗಳು ಹಾಜರಿದ್ದರು.

# ಮಹಿಳೆ ಮಾನಸಿಕ ಒತ್ತಡದಿಂದ ಹೊರಬರಲು ಕ್ರೀಡೆಯಲ್ಲಿ ಭಾಗವಹಿಸಿ: ಪರಶುರಾಮ್



• ಮಲ್ಲಮ್ಮ ನುಡಿವಾರ್ತೆ
ಕೊಪ್ಪಳ

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಮಹಿಳಾ ದಿನಾಚರಣೆಯ ನಿಮಿತ್ತವಾಗಿ ಮಹಿಳಾ ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿಠ್ಠಲ್ ಜಾಬ್ ಗೌಡರ್ ಮಾತನಾಡಿ ಮಹಿಳೆಯರು ಕುಟುಂಬವನ್ನು ನಿಭಾಯಿಸುವುದರ ಜೊತೆಗೆ ಎಲ್ಲಾ ಕ್ಷೇತ್ರದಲ್ಲೂ ಸಕ್ರೀಯರಾಗಿದ್ದಾರೆ. ಬಿಡುವಿನ ಸಮಯದಲ್ಲಿ ಆಟೋಟಗಳಲ್ಲಿ ಭಾಗವಹಿಸುವುದರಿಂದ ಅವರಲ್ಲಿನ ಪ್ರತಿಭೆಗೆ ಸೂಕ್ತ ವೇದಿಕೆ ಸಿಗುತ್ತದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಪರಶುರಾಮ್ ಶೆಟ್ಟೆಪ್ಪನವರ ಮಾತನಾಡಿ ಇಲಾಖೆಯು ಸದಾ ಮಹಿಳಾಪರ ಯೋಜನೆಗಳಿಗೆ ಉತ್ತೇಜನ ನೀಡುತ್ತದೆ, ಮಹಿಳೆಯರಿಗಾಗಿ ಕ್ರೀಡಾಕೂಟ ಆಯೋಜಿಸಲಾಗಿದ್ದು ಎಲ್ಲರೂ ಭಾಗವಹಿಸಿ ಇದರಿಂದ ಮಾನಸಿಕ ಒತ್ತಡಗಳು ಕಡಿಮೆಯಾಗುತ್ತವೆ ಎಂದರು. ಆಟೋಟಗಳಲ್ಲಿ ವಿಜೇತರಿಗೆ ಇಲಾಖೆಯು ಆಯೋಜಿಸುವ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಬಹುಮಾನ ನೀಡಿ ಗೌರವಿಸಲಾಗುವುದು ಎಂದರು. ಮುಖ್ಯ ಅತಿಥಿಗಳಾಗಿದ್ದ ಡಾ. ಗೀತಾ ಗವಿಸಿದ್ದಪ್ಪ ಮುತ್ತಾಳ ಮಾತನಾಡಿ ಮಹಿಳೆಯರು ಕಡ್ಡಾಯವಾಗಿ ಶಿಕ್ಷಣ ಪಡೆಯಬೇಕು ಹಾಗೂ ಸರ್ಕಾರದ ಎಲ್ಲ ಯೋಜನೆಗಳನ್ನು ಸದುಪಯೋಗ ಪಡೆದುಕೊಳ್ಳಬೇಕು, ಅವಕಾಶಗಳನ್ನು ಬಳಸಿಕೊಂಡು ಬೆಳೆಯಬೇಕೆಂದರು.

ಅಕ್ಕಮಹಾದೇವಿ ಮಹಿಳಾ ಮಂಡಳದ ಕೋಮಲಾ ಕುದರಿಮೋತಿ ಮಾತನಾಡಿ ಮಹಿಳೆಯರನ್ನು ಪ್ರೇರೆಪಿಸಿದರು. ಕಾರ್ಯಕ್ರಮದಲ್ಲಿ ಎಲ್ಲಾ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಹಾಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕ್ಷಕರು, ಎಲ್ಲಾ ಹಿರಿಯ ಮೇಲ್ವಿಚಾರಕಿಯರು, ಕಿರಿಯವಲಯದ ಮೇಲ್ವಿಚಾರಕಿಯರು, ಅಂಗನವಾಡಿ ಕಾರ್ಯಕರ್ತರು /ಸಹಾಯಕಿಯರು ಸಖಿ ಒನ್ ಸ್ಟಾಪ್ ಸೆಂಟರ್ ಸಿಬ್ಬಂದಿಗಳು, ಸಾಂತ್ವನ ಕೇಂದ್ರದ ಸಿಬ್ಬಂದಿಗಳು, ಭಾಗವಹಿಸಿರು. ಮೇಲ್ವಿಚಾರಕಿ ಚಂದ್ರಮ್ಮ ಕಾರ್ಯಕ್ರಮ ನಿರೂಪಸಿದರು ಹಾಗೂ ಫಾತಿಮಾ ಕಾರ್ಯಕ್ರಮವನ್ನು ವಂದಿಸಿದರು.

# ಹತ್ಯೆ ಆರೋಪಿ ವಿಧ್ಯಾರ್ಥಿ ನಗರದಲ್ಲೇ ಪತ್ತೆ ಗಾಯಗೊಂಡಿದ್ದ ವಿದ್ಯಾರ್ಥಿ ಹೈದ್ರಾಬಾದಿಗೆ ಶಿಫ್ಟ್

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ಗುರುಕುಲ ಇಂಟರ್ ನ್ಯಾಶನಲ್ ಸ್ಕೂಲ್ ನ ಹಾಸ್ಟಲ್ ನಲ್ಲಿ ಮಾ.7ರಂದು ಓರ್ವ ವಿದ್ಯಾರ್ಥಿಯಿಂದ ನಡೆದ ಹಲ್ಲೆ ಪ್ರಕರಣದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ರಾಯಚೂರು ಜಿಲ್ಲೆಯ 6 ನೇ ತರಗತಿಯ ವಿದ್ಯಾರ್ಥಿ ವಿಷ್ಣುನನ್ನು ಹೆಚ್ಚಿನ ಚಿಕಿತ್ಸೆಗೆಂದು ಹೈದ್ರಾಬಾದ್ ಗೆ ಕರೆದುಕೊಂಡು ಹೋಗಿದೆಯಂತೆ.



ಆತನ ಕರಳುಗೆ ತೀವ್ರಗಾಯವಾಗಿತ್ತು. ಬಳ್ಳಾರಿಯ ಬಿಎಂಆರ್ ಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪರಿಣಾಮಕಾರಿಯಾಗದ ವಿದ್ಯಾರ್ಥಿ ಪೋಷಕರು ಆತನನ್ನು ಹೈದ್ರಾಬಾದ್ಗೆ ಕರೆದುಕೊಂಡು ಹೋಗಿದ್ದಾರೆಂದು ತಿಳಿದುಬಂದಿದೆ.

**ನಗರದಲ್ಲಿ ಪತ್ತೆ:**

ಹಾಸ್ಟಲ್ ವಿದ್ಯಾರ್ಥಿ ಗಳು ಮತ್ತು ವಾರ್ಡ್ ನ್ ಗೆ ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿ ಓರ್ವ ವಿದ್ಯಾರ್ಥಿಗಳು ಸಾವಿಗೆ ಕಾರಣನಾದ ಆರೋಪಿ ವಿದ್ಯಾರ್ಥಿ ನಿನ್ನೆ ನಗರದ ಅಂಜಿನಪ್ಪ ಜಿನ್ನದ ಬಳಿ ಪೊಲೀಸರಿಗೆ ಸಿಕ್ಕಿದ್ದಾನೆಂದು ಎಸ್ಪಿಡಾ.ಸುಮನ್ ಡಿಪಿ ಹೇಳಿದ್ದಾರೆ.

ಘಟನೆಗೆ ಕಾರಣ ಏನೆಂಬುದನ್ನು ತಿಳಿದುಕೊಳ್ಳಲು ಪೊಲೀಸರು, ವೈದ್ಯರು ಮಕ್ಕಳ ಸಮಿತಿಯ ಅನುಮತಿ ಪಡೆದು ವಿಚಾರಣೆ ನಡೆಸಲಿದ್ದಾರಂತೆ. ಇಂದು ಸಂಜೆಗೆ ಏನೆಂಬುದನ್ನು ಆರೋಪಿ ವಿದ್ಯಾರ್ಥಿ ಹೇಳಬಹುದು.

ವಿಚಾರಣೆಗೆಂದು ನಾಲ್ಕು ದಿನ ತಮ್ಮ ವಶಕ್ಕೆ ನೀಡಲು ಪೊಲೀಸರು ಕೋರಿದ್ದಾರೆಂದು ತಿಳಿದು ಬಂದಿದೆ.

# ಕೊಲ್ಲಿ ಯುದ್ದ: ಸಿಲಿಂಡರ್ ಕೊರತೆ ಹೋಟೇಲ್‌ಗಳಿಗೆ ಹೊಡೆತ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕೊಲ್ಲಿ ರಾಷ್ಟಗಳ ಯುದ್ಧ ಪರಿಣಾಮ ಹೋಟೇಲ್ ಉದ್ಯಮದ ಮೇಲೆ ಬಿದ್ದಿದೆ. ಹೊಟೇಲ್ ಗಳಲ್ಲಿ ಆಹಾರ ತಯಾರಿಕೆಗೆ ಬಳಸುತ್ತಿದ್ದ ವಾಣಿಜ್ಯ ಅಡುಗೆ ಅನಿಲ(ಗ್ಯಾಸ್) ಪೂರೈಕೆ ಸಮಸ್ಯೆಯಾಗಿದ್ದು ಇನ್ನೆರೆಡು ಮೂರು ದಿನದಲ್ಲಿ ಗ್ಯಾಸ್ ನ್ನೇ ಅವಲಂಬಿಸಿರುವ ಹೊಟೇಲ್ ಗಳು ಬಂದ್ ಆಗುವ ಸಾಧ್ಯತೆ ಇದೆ.

ಇರಾನ್ ಇರಾಕ್ ನಡುವಿನ ಯುದ್ದ ಮಧ್ಯಪ್ರಾಚ್ಯದ ಬಹುತೇಖ ರಾಷ್ಟಗಳಿಗೆ ವ್ಯಾಪಿಸಿದ್ದು. ಭಾರತಕ್ಕೆ ಸರಬರಾಜು ಆಗುತ್ತಿದ್ದ ಕ್ರೂಡ್ ಆಯಿಲ್ ನ ಪೂರೈಕೆ ಕುಸಿತ ಕಂಡಿರುವುದರಿಂದ ಗ್ಯಾಸ್ ಉತ್ಪಾದನೆಯೂ ಕಡಿಮೆಯಾಗತೊಡಗಿದೆ.

ಇದರಿಂದ ಭಾರತದಲ್ಲಿ ಗೃಹ ಬಳಕೆ ಸಿಲಿಂಡರ್ ಗಳ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಮಾಡಲು. ವಾಣಿಜ್ಯ ಬಳಕೆ-ಯ ಸಿಲಿಂಡರ್ ಗಳ ಪೂರೈಕೆ ಕಡಿತಗೊಳಿಸಲಾಗುತ್ತಿದೆ.

ಗ್ಯಾಸ್ ಸರಬರು ಕಂಪನಿಯವರು ಎನ್ನೆರೆಡು ದಿನಕ್ಕೆ ಮಾತ್ರ ಸಿಲಿಂಡರ್ ಸಪ್ಲೈ ಮಾಡಲಿದೆಂದು ಹೊಟೇಲ್ ಮಾಲೀಕರಿಗೆ ಹೇಳಿದ್ದಾರಂತೆ.

ಕೆಲ ಹೊಟೇಲ್ ಗಳು ರೇಣುಕಾ ಕಿಚನ್ ಹೊಯ್ಸಳ ರ್ಮದಲಾದವು ಎಲೆಕ್ಟ್ರಿಕಲ್ ಗೀಜರ್ ಸ್ಟೀಮ್ ಮೂಲಕ ಅಥವಾ ಹಳೇ ಸಂಪ್ರದಾಯದ ನೆಲ್ಲು ಹೊಟ್ಟು, ಕಟ್ಟಿಗೆ ಮೂಲಕ ಅಡುಗೆ ಮಾಡುವವರಿಗೆ ಒಂದಿಷ್ಟು ಸಮಸ್ಯೆ ಕಡಿಮೆ ಇದ್ದರೂ ಇಲ್ಲಿಯೂ ಒಂದೆರೆಡು ಸಿಲಿಂಡರ್ ಬೇಕು.





### ಗ್ಯಾಸ್ ಇಲ್ಲದಿದ್ದರೆ ಹೇಗೆ?

“ನಮ್ಮ ಬೇಕರಿ ಉತ್ಪನ್ನಗಳ ಉತ್ಪಾದನೆ ವಿದ್ಯುತ್ ಅವಲಂಬಿಸಿದ್ದರೂ, ಮಸಾಲೆ ತಯಾರಿ ಮೊದಲಾದವುಗಳಿಗೆ ದಿನಕ್ಕೆ ಒಂದು ಸಿಲಿಂಡರ್ ಬೇಕು. ಅವನ್ನು ಕೊಡದಿದ್ದರೆ ಹೇಗೆ. ಗ್ಯಾಸ್ ಸಮಸ್ಯೆಯಾದರೆ ಹೇಗೆ ಆಹಾರ ಉತ್ಪಾದನೆ ಸಾಧ್ಯ

ಹರೀಶ್ ಶೆಟ್ಟಿ. ಬೇಕರಿ, ಹೊಟೇಲ್ ಉದ್ಯಮಿ, ಬಳ್ಳಾರಿ.

ಇನ್ನು ಗ್ಯಾಸ್ ಸಿಲಿಂಡರನ್ನೇ ನಂಬಿಕೊಂಡಿರುವ ಹೊಟೇಲ್ ಗಳು ಸಿಲಿಂಡರ್ ದೊರೆಯದೆ ಇದ್ದರೆ ಬಂದ್ ಮಾಡುವ ಪರಿಸ್ಥಿತಿ ಎದುರಾಗುತ್ತಿದೆ. ಬೇಕರಿಗಳಿಗೂ ಈ ಸಮಸ್ಯೆ ಎದುರಾಗಲಿದೆ.

ಇನ್ನು ಬೇಕರಿ ಮೊದಲಾದ ಉತ್ಪನ್ನಗಳನ್ನು ನೀಡಲು ಬಳಸುತ್ತಿದ್ದ ಪೆಟ್ರೋಲಿಯಂ ಆಧಾರಿತ ಉತ್ಪಾದನೆಯ ಪ್ಯಾಕಿಂಗ್ ಸಾಮಾಗ್ರಿ, ಪ್ಲಾಸ್ಟಿಕ್ ಚೀಲಗಳು ಸಹ ದುಬಾರಿಯಾಗಿವೆ ಪ್ಲಾಸ್ಟಿಕ್ ಕವರ್ ಕಿಲೋಗೆ 50 ರೂ ಹೆಚ್ಚಾಗಿದೆ.

# ನಾಡಿನ ರೈತರ ಒಳಿತಿಗಾಗಿ ಶ್ರೀ ದೊಡ್ಡ ಬಸವೇಶ್ವರ ಸ್ವಾಮಿಗೆ ಅಭಿಷೇಕ: ಬಸವನಗೌಡ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಾಡಿನ ಸಮಸ್ತ ರೈತರ ಉತ್ತಮ ಮಳೆ, ಬೆಳೆಗಾಗಿ ಮತ್ತು ಅವರ ಒಳಿತಿಗಾಗಿ ಕುರುಗೋಡು ಶ್ರೀದೊಡ್ಡಬಸವೇಶ್ವರಸ್ವಾಮಿಗೆ ವಿಶೇಶ ಅಭಿಷೇಕ ಕಾರ್ಯಕ್ರಮವನ್ನು ನೆರವೇರಿಸಲಾಗಿದೆ ಎಂದು ಮಸಿದೀಪುರ ಗ್ರಾಮದ ಹಿರಿಯ ರೈತ ಮುಖಂಡ ಎಂ.ಬಸವನಗೌಡ ಹೇಳಿದರು.

ಅವರು ಪಟ್ಟಣದ ಆರಾಧ್ಯದೈವ ಶ್ರೀದೊಡ್ಡಬಸವೇಶ್ವರಸ್ವಾಮಿ ದೇವಸ್ಥಾನದಲ್ಲಿ ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ಸಹ ಮಸೀದಿಪುರ ಗ್ರಾಮದ ದೊಡ್ಡಬಸಮ್ಮನಾಗನಗೌಡ ಹಾಗು ಪಾರ್ವತಮ್ಮಮಲ್ಲಿಕಾರ್ಜುನಗೌಡ ಮತ್ತು ಅವರ ಕುಟುಂಬವರ್ಗದವರಿಂದ ಶ್ರೀದೊಡ್ಡಬಸವೇಶ್ವರ ಸ್ವಾಮಿಗೆ ನೆರವೇರಿಸಲಾದ ಅಭಿಷೇಕ ಪೂಜಾಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರಸಕ್ತಸಾಲಿನಲ್ಲಿ ರೈತರು ತುಪಾನ್‌ಗಳಿಗೆ ತತ್ತರಿಸಿ ಬೇಸತ್ತುಹೋಗಿದ್ದರು. ಅದರ ಪರಿಣಾಮದಿಂದ ಬೆಳೆ ಇಳುವರಿ ಇಲ್ಲದಂತಾಗಿದೆ. ಆದರೆ ಬೆಲೆ ಮಾತ್ರ ಚೆನ್ನಾಗಿಇದೆ ಎಂದು ನುಡಿದರು. ಪ್ರಕೃತಿವಿಕೋಪದಿಂದ 'ಬೆಳೆಚೆನ್ನಾಗಿದ್ದರೆ ಬೆಂಬಲಬೆಲೆಇಲ್ಲ. ಬೆಂಬಲಬಲೆ ಇದ್ದರೆ ಬೆಳೆ ಇಲ್ಲ' ಇದು ನನ್ನ ರೈತರ ಗೋಳು ಎಂದು ವಿಷಾದ ವ್ಯಕ್ತಪಡಿಸಿದರು. ಈ ನಿಟ್ಟಿನಲ್ಲಿ ಅನ್ನದಾತನ ಬದುಕು ಕಷ್ಟಕರವಾಗಿದೆ.

ಆದ್ದರಿಂದ ರೈತರು ಮಾತ್ರ ಯಾವುದೇ ಕಾರಣಕ್ಕೂ ಹಿಗ್ಗದೇ, ಮತ್ತು ಕುಗ್ಗದೇ ಜೀವನದಲ್ಲಿ ಮುನ್ನಡೆಯಬೇಕು, ಅಂದಾಗ ಮಾತ್ರ ಜೀವನದಲ್ಲಿ ಮುನ್ನಡೆಯಲು ಸಾಧ್ಯ ಎಂದು ನುಡಿದರು. ಆದ್ದರಿಂದ ಇನ್ನುಮುಂದೆ ಆದರೂ ಶ್ರೀದೊಡ್ಡಬಸವೇಶ್ವರಸ್ವಾಮಿಯು ರೈತರಿಗೆ ಉತ್ತಮ ಮಳೆ ಬರಿಸಿ, ರೈತರ ಮೊಗದಲ್ಲಿ ಸಂತೋಷವನ್ನು ಕರುಣಿಸು, ರೈತರ ಕಷ್ಟಗಳನ್ನು ದೂರಮಾಡಿ, ಅವರ ಜೀವನದಲ್ಲಿ ಸುಖ, ಶಾಂತಿಯಿಂದ ಬಾಳಲು ಅನುಗ್ರಹಿಸು ತಂದೆ ಎಂದು ಎಂದು ದೇವರಲ್ಲಿ ಭಕ್ತಿಯಿಂದ ಪ್ರಾರ್ಥಿಸಿದರು.

ಪ್ರಾರಂಭದಲ್ಲಿ ದೇವಸ್ಥಾನದಲ್ಲಿ ಶ್ರೀದೊಡ್ಡಬಸವೇಶ್ವರಸ್ವಾಮಿಗೆ ಅಭಿಷೇಕಪೂಜಾ ಕಾರ್ಯಕ್ರಮವು ಧಾರ್ಮಿಕ ವಿಧಿ-ವಿಧಾನಗಳಿಂದ ಸಾಂಗೋಪವಾಗಿ ಜರುಗಿಸಲಾಯಿತು. ನಂತರ ಎಲ್ಲರೂ ಶ್ರದ್ಧಾ-ಭಕ್ತಿಯಿಂದ ಶ್ರೀದೊಡ್ಡಬಸವೇಶ್ವರಸ್ವಾಮಿಗೆ ನಮಸ್ಕರಿಸಿ ಪೂಜಿಸಿದರು. ಕೊನೆಯಲ್ಲಿ ನೆರೆದ ನೂರಾರು ಮಂದಿ ಭಕ್ತರಿಗೆ ಅನ್ನಸಂತರ್ಪಣೆ ವ್ಯವಸ್ಥೆಯನ್ನು ಕೈಗೊಂಡು ಭಕ್ತಿಮೆರೆದರು. ಈ ಸಂದರ್ಭದಲ್ಲಿ ಮಸಿದೀಪುರ ಗ್ರಾಮದ ಹಿರಿಯರಾ ದೊಡ್ಡಬಸಮ್ಮನಾಗನಗೌಡ, ಮತ್ತೋರ್ವ ಹಿರಿಯರಾದ ಪಾರ್ವತಮ್ಮಮಲ್ಲಿಕಾರ್ಜುನಗೌಡ ಸೇರಿದಂತೆ ಅವರ ಕುಟುಂಬವರ್ಗದ ಮಕ್ಕಳು, ಮೊಮ್ಮಕ್ಕಳು ಇದ್ದರು.

# ಕೋಟೆ ಪ್ರವೇಶದ್ವಾರ ಬೊಂಬುಗಳಿಗೆ ಬೆಂಕಿ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ಕೋಟೆ ಪ್ರವೇಶದ್ವಾರದ ಬಳಿಯ ಬೊಂಬು ಬಜಾರ್ ಪ್ರದೇಶದಲ್ಲಿ ಅಕಸ್ಮಾತ್ತಾಗಿ ಬೆಂಕಿ ಕಾಣಿಸಿಕೊಂಡು ಅಪಾರ ಪ್ರಮಾಣದ ಬೊಂಬುಗಳು ಸುಟ್ಟ ಘಟನೆ ನಿನ್ನೆ ರಾತ್ರಿ ಸಂಭವಿಸಿದೆ.

ಗೋವಿಂದಸ್ವಾಮಿ ಅವರಿಗೆ ಸೇರಿದ ಅಂಗಡಿಗೆ ಬೆಂಕಿ ತಗುಲಿದ್ದು, ಬೆಂಕಿಯ ಶಾಖದಿಂದ ಸುತ್ತಮುತ್ತಲಿನ ನಾಲ್ಕು ಮನೆಗಳಿಗೆ ಸಹ ಹಾನಿಯಾಗಿದೆ. ಬೆಂಕಿ ಹತ್ತಿರೋದಕ್ಕೆ ನಿಖರ ಕಾರಣ ಗೊತ್ತಾಗಿಲ್ಲ. ಕೆಲವೇ ಕ್ಷಣಗಳಲ್ಲಿ ಜ್ವಾಲೆಗಳು ಮುಗಿಲೆತ್ತರಕ್ಕೆ ಏರಿದ ಪರಿಣಾಮ ಅಂಗಡಿಯಲ್ಲಿ ಸಂಗ್ರಹಿಸಿದ್ದ ಅಪಾರ ಪ್ರಮಾಣದ ಬೊಂಬುಗಳು ಬೆಂಕಿಗೆ ಆಹುತಿಯಾಗಿವೆ.

ವಿಷಯ ತಿಳಿದು ತಕ್ಷಣ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು. ಬೆಂಕಿ ಅವಘಡಕ್ಕೆ ನಿಖರ ಕಾರಣ ತಿಳಿದು ಬಂದಿಲ್ಲ

# ವಿದ್ಯುತ್ ಮಸೂದೆ ಮಂಡನೆ ವಿರೋಧಿಸಿ ಪ್ರತಿಭಟನೆ





• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಈಗ ನಡೆಯುತ್ತಿರುವ ಸಂಸತ್ತಿನ ಅಧಿವೇಶನದಲ್ಲಿ ವಿದ್ಯುತ್ ಖಾಸಗೀಕರಣ ಮಾಡುವ ಹುನ್ನಾರವಿರುವ ವಿದ್ಯುತ್ ಮಸೂದೆ 2025ರ ಮಂಡನೆಯನ್ನು ವಿರೋಧಿಸಿ ಇಂದು ನಗರದಲ್ಲಿ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ವಿದ್ಯುತ್ ಕ್ಷೇತ್ರ ಸಾರ್ವಜನಿಕವಾಗಿ ಇದ್ದಲ್ಲಿ ಮಾತ್ರ ಅದು ಜನೋಪಯೋಗಿ ಇರಲು ಸಾಧ್ಯ. ಇಲ್ಲದಿದ್ದರೆ ಖಾಸಗೀಕರಣವಾದರೆ ಅದು ಲಾಭದಾಯಕ ಉದ್ದಿಮೆಯಾಗಿ ಜನರ ಹಿತವನ್ನು ಕಡೆಗಣಿಸಲಿದೆ. ಅದಕ್ಕಾಗಿ ಈ ಮಸೂದೆ ಜಾರಿಯಾಗಬಾರದೆಂದರು.

ಈ ಸಂದರ್ಭದಲ್ಲಿ ಎಐಇಸಿಎ ಮುಖಂಡ ಆರ್.ಸೋಮಶೇಖರ್ ಗೌಡ, ಎಐಟಿಯುಸಿನ ಮುಖಂಡರಾದ ಎ.ದೇವದಾಸ್, ಡಾ.:ಪ್ರಮೋದ್, ಶಾಂತ, ಎಐಕೆಕೆಎಂಎಸ್ ನ ಗೋವಿಂದ್, ಗುರಳ್ಳಿ ರಾಜ ಮತ್ತು ಸುರೇಶ್, ಕಿರಣ್, ಹನುಮಂತಪ್ಪ, ಆಂಟೋನಿ, ಚೇತನ್, ಪುಷ್ಪ ಸೇರಿದಂತೆ ಹಲವಾರು ಗ್ರಾಹಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಗುಳಬಾಳದಲ್ಲಿ ಉಚ್ಚಾಯ ರಥೋತ್ಸವೆ

• ಮಲ್ಲಮ್ಮನುಡಿ ವಾರ್ತೆ ಹುಣಸಗಿ

ತಾಲೂಕಿನ ಗುಳಬಾಳ ಗ್ರಾಮದಲ್ಲಿ ಶ್ರೀ ಕಾಳಿಕಾದೇವಿ ಹಾಗೂ ಗುರು ರಾಮಲಿಂಗೇಶ್ವರರ 26ನೇ ಜಾತ್ರಾ ಮಹೋತ್ಸವ, ಗುರು ಹುಚ್ಚೇಶ್ವರ ಮಹಾಸ್ವಾಮಿಗಳವರ 16ನೇ ಪುಣ್ಯಾರಾಧನೆ ಹಾಗೂ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಭಕ್ತಿಭಾವದಿಂದ ಆಚರಿಸಲಾಗುತ್ತದೆ ಎಂದು ಪೂಜ್ಯ ಮರಿಹುಚ್ಚೇಶ್ವರ ಸ್ವಾಮೀಜಿ ತಿಳಿಸಿದ್ದಾರೆ.



ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಇಂದು ಬೆಳಿಗ್ಗೆ 7 ಗಂಟೆಗೆ ಕರ್ತೃ ಗದ್ದುಗೆಗೆ ಮಹಾರುದ್ರಾಭಿಷೇಕ ಹಾಗೂ ಸಹಸ್ರ ಬಿಲ್ವಾರ್ಚನೆ ನಡೆಯಲಿದೆ. ನಂತರ ಮಂಗಳಾರತಿ ನೆರವೇರಿಸಲಿದ್ದು, ಬೆಳಿಗ್ಗೆ 11 ಗಂ-ಟೆಗೆ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಹಾಗೂ ಧರ್ಮ ಸಭೆ ಭಕ್ತರ ಸಮ್ಮುಖದಲ್ಲಿ ನಡೆಯಲಿದೆ ಎಂದು ಹೇಳಿದರು.

ಸಂಜೆ 5 ಗಂಟೆಗೆ ಭಕ್ತಿಪೂರ್ಣ ರಥೋತ್ಸವ ಹಾಗೂ ಭಜನೆ ಕಾರ್ಯಕ್ರಮ ನಡೆಯಲಿದ್ದು, ಶ್ರೀ ಕಾಳಿಕಾದೇವಿ ಮತ್ತು ಗುರು ರಾಮಲಿಂಗೇಶ್ವರರ ರಥೋತ್ಸವವು ಗ್ರಾಮದಲ್ಲಿ ಭಕ್ತರ ಜಯಘೋಷಗಳ ನಡುವೆ ವೈಭವದಿಂದ ಜರುಗಲಿದೆ. ಈ ಸಂದರ್ಭದಲ್ಲಿ ಭಕ್ತರು ಭಜನೆ, ಮೂಲಕ ಭಕ್ತಿಯನ್ನು ಸಮರ್ಪಣೆ.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ನಾವದಗಿ ಶ್ರೀಗಳು, ದೇವಾಪುರ ಶ್ರೀಗಳು ಹಾಗೂ ಅಡವಿಲಿಂಗ ಮಹಾರಾಜರು ಸೇರಿದಂತೆ ವಿವಿಧ ಮಠಾಧೀಶರು ವಹಿಸಲಿದ್ದಾರೆ.

ಈ ಮಹೋತ್ಸವಕ್ಕೆ ಸಂಸದ ಜಿ. ಕುಮಾರನಾಯಕ್, ಶಾಸಕ ರಾಜಾ ವೇಣುಗೋಪಾಲನಾಯಕ್, ಮಾಜಿ ಸಚಿವ ಹಾಗೂ ಬಿಜೆಪಿ ರಾಜ್ಯ ಉಪಾಧ್ಯಕ್ಷ ನರಸಿಂಹನಾಯಕ (ರಾಜುಗೌಡ), ಮಸ್ಕಿ ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಸೇರಿದಂತೆ ಇತರ ಗಣ್ಯರು ಮತ್ತು ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಈ ಜಾತ್ರಾ ಮಹೋತ್ಸವ ರಥೋತ್ಸವ ಕಾರ್ಯಕ್ರಮಕ್ಕೆ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ಕೃಪೆಗೆ ಪಾತ್ರರಾಗಬೇಕು ಎಂದು ಮರಿಹುಚ್ಚೇಶ್ವರ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿಜಿಟಲ್ ಯುಗದಲ್ಲಿ ಮಹಿಳಾ ಉದ್ಯಮಶೀಲತೆ ಕುರಿತು ಉಪನ್ಯಾಸ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಮಹಿಳಾ ಸಪ್ತಾಹದಲ್ಲಿ ಇಂದು ಭಾರತಿ ಮಲ್ಲಿಕಾರ್ಜುನ, ಉದಯೋನ್ಮುಖ ಮಹಿಳಾ ಉದ್ಯಮಿ, ಬಳ್ಳಾರಿ. ಇವರು " ಡಿಜಿಟಲ್ ಯುಗದಲ್ಲಿ ಮಹಿಳಾ ಉದ್ಯಮಶೀಲತೆ "ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಡಿಜಿಟಲ್ ಯುಗದಲ್ಲಿ ಮಹಿಳೆಯರು ಬಹಳ ಉಪಯುಕ್ತವಾದ ಮಾಹಿತಿಯನ್ನು ನಮ್ಮ ಉಪಯೋಗಕ್ಕೆ ಬೇಕಾದ್ದನ್ನು ಮಾತ್ರ ಬಳಸಿಕೊಳ್ಳಬೇಕು ನಾನು ಏನು ಮಾಡುತ್ತೇನೆ ಎಂಬುದನ್ನು ನಿರ್ಧಾರ ಮಾಡಿ ಡಿಜಿಟಲ್ ಬಳಕೆ ಮಾಡುವುದನ್ನು ಕಳೆಯಬೇಕು. ನಾನು ಹೋಟೆಲ್ ಉದ್ಯಮ ಸ್ಥಾಪನೆ ಮಾಡಿ ಇವತ್ತು ಡಿಜಿಟಲ್ ಮೂಲಕ ಮನೆ ಊಟ ಎಂಬ ಆಪ್ ಮೂಲಕ ಝೊಮ್ಯಾಟೋ ಸ್ವಿಗಿ ಮೂಲಕ ಮಾರ್ಕೆಟಿಂಗ್ ಮಾಡುತ್ತಿದ್ದೇನೆ. ಆದ್ದರಿಂದ ನೀವು ಎದೆಗುಂದದೆ ಉದ್ಯಮದಲ್ಲಿ ತೊಡಗಿಸಿಕೊಂಡು ಯಶಸ್ವಿಯಾಗಬೇಕು ಎಂಬುದೇ ನನ್ನ ಆಸೆ. ಅದೇ ಕಾರಣದಿಂದ ನೀವು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಸಾಮಾಜಿಕ ಭದ್ರತೆಯನ್ನು ಕಾಪಾಡಿಕೊಳ್ಳಲು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆಂಗ್ಲ ವಿಭಾಗದ ಮುಖ್ಯಸ್ಥರಾಗಿ ಶ್ರೀಮರಿಗಾದಿ ಲಿಂಗಪ ಟಿ ಅವರು ಮಾತನಾಡಿ ಒಬ್ಬ ಮಹಿಳೆ ಮುಗಿಲೆತ್ತರಕ್ಕೆ ಬೆಳೆಯಬೇಕಾದರೆ ನಿಮ್ಮ ಮನೆಯಿಂದಲೇ ಆರಂಭವಾಗಬೇಕು ಸ್ವಾತಂತ್ರಭಾರತದಲ್ಲಿ ಆಧುನಿಕತೆಯನ್ನು ಮೈಗೂಡಿಸಿಕೊಂಡು ವಾಸ್ತವವನ್ನು ಅರ್ಥಮಾಡಿಕೊಂಡು ಬೆಳೆಯಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಭಾಗವಹಿಸಿದ್ದರು.

ವಿದ್ಯಾರ್ಥಿನಿಯರಿಂದ ಚಿತ್ರಕಲಾ ಸ್ಪರ್ಧೆ ಹಾಗೂ ಫ್ಯಾಷನ್ ಶೋ, ಮಹಿಳಾ ಹೋರಾಟಗಾರ್ತಿಯರ ಕುರಿತ ಏಕ ಪಾತ್ರಾಭಿನಯವನ್ನು ಆಯೋಜಿಸಲಾಗಿತ್ತು.

# ಹಣಕಾಸು ಸಚಿವರಾಗಿ ಸಿದ್ದರಾಮಯ್ಯ ವಿಫಲ: ದತ್ತಾತ್ರಿ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ. ಅದಕ್ಕಾಗಿ ಈ ಬಾರಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಹಣಕಾಸು ಸಚಿವರಾಗಿ ಉತ್ತಮ ಬಜೆಟ್ ನೀಡಲು ವಿಫಲರಾಗಿದ್ದಾರೆಂದು ರಾಜ್ಯ ಬಿಜೆಪಿ ಪ್ರಕೋಷ್ಠಗಳ ಸಂಯೋಜಕ ಎಸ್. ದತ್ತಾತ್ರಿ ಹೇಳಿದ್ದಾರೆ.

ಅವರು ಇಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಟಿ ನಡೆಸಿ. ರಾಜ್ಯ ಸರ್ಕಾರ ಸಾಕಷ್ಟು ಸಾಲ ಮಾಡಿದೆ. ಆದರೆ ಗುತ್ತಿಗೆದಾರರ ಬಾಕಿ ಮಾತ್ರ ನೀಡುತ್ತಿಲ್ಲ. ಸಾಲದಿಂದ ಏನು ಮಾಡಿದ್ದಾರೆ ಎಂಬುದೇ ಅರ್ಥವಾಗುತ್ತಿಲ್ಲ ಎಂದರು.

ಬಿಜೆಪಿಯ ಕಾರ್ಮಿಕ ಪ್ರಕೋಷ್ಠದ ರಾಜ್ಯ ಕಾರ್ಯಕಾರಿಣಿ ಸಭೆ ಇಂದು ನಗರದಲ್ಲಿ ಮಾಡಲಾಗುತ್ತಿದೆ. ಪಕ್ಷದಲ್ಲಿ 24 ಪ್ರಕೋಷ್ಠಗಳಿವೆ. ಇವುಗಳ ಮೂಲಕ ಜನರ ಬಳಿ ಹೋಗಿ ಪಕ್ಷದ ಸರ್ಕಾರಗಳ ಯೋಜನೆಗಳ ಬಗ್ಗೆ ತಿಳಿಸುತ್ತಿದೆ.

ಕಾನೂನು ಪ್ರಕೋಷ್ಠದ ಮೂಲಕ ಕಾನೂನುಗಳ ಬಗ್ಗೆ ಜನರಿಗೆ ತಿಳಿಸುವ ಕೆಲಸ ಮಾಡುತ್ತಿದೆ. ಹೀಗೆ ಹಲವಾರು ಸಹಕಾರ, ಮೀನುಗಾರಿಕೆ, ವೈದ್ಯಕೀಯ ಪ್ರಕೋಷ್ಠಗಳಿವೆ. ಅಸಂಘಟಿತ ಕಾರ್ಮಿಕರನ್ನು ಒಗ್ಗೂಡಿಸಲು ಅಸಂಘಟಿತ ಕಾರ್ಮಿಕ ಪ್ರಕೋಷ್ಠ ಕೆಲಸ ಮಾಡುತ್ತಿದೆಂದರು.

# ಆಶೀರ್ವಾದ ಗ್ಲೋಬಲ್ ಶಾಲೆ, ಟ್ಯಾಲೆಂಟ್ ಅವಾರ್ಡ್





• ಮಲ್ಲಮ್ಮನುಡಿ ವಾರ್ತೆ ಹುಣಸಗಿ

ಪಟ್ಟಣದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಆಶೀರ್ವಾದ ಗ್ಲೋಬಲ್ ಶಾಲೆಯ ವತಿಯಿಂದ ಮಾರ್ಚ್ 8, 2026 ರಂದು ಐದನೇ ತರಗತಿ ವಿದ್ಯಾರ್ಥಿಗಳಿಗಾಗಿ “ಆಶೀರ್ವಾದ ಟ್ಯಾಲೆಂಟ್ ಅವಾರ್ಡ್ 2026”ಪ್ರವೇಶ ಪರೀಕ್ಷೆಯನ್ನು ನಡೆಸಲಾಯಿತು.

ಈ ಪರೀಕ್ಷೆಯಲ್ಲಿ ಬಾಗಲಕೋಟೆ, ಯಾದಗಿರಿ, ರಾಯಚೂರು ಹಾಗೂ ವಿಜಯಪುರ ಜಿಲ್ಲೆಗಳ ವಿವಿಧ ಶಾಲೆಗಳ ಸುಮಾರು ನಾಲ್ಕನೂರು ವಿದ್ಯಾರ್ಥಿಗಳು ಭಾಗವಹಿಸಿ ಪರೀಕ್ಷೆ ಬರೆದಿದ್ದರು.

ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಿದ ಐದು ವಿದ್ಯಾರ್ಥಿಗಳಿಗೆ ಸಂಸ್ಥೆಯ ವತಿಯಿಂದ 6ನೇ ತರಗತಿಯಿಂದ ಹತ್ತನೇ ತರಗತಿವರೆಗೆ ಐದು ವರ್ಷಗಳ ಉಚಿತ ಶಿಕ್ಷಣ ನೀಡಲಾಗುತ್ತದೆ ಎಂದು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ವೀರಭದ್ರಗೌಡ ಹೊಸಮನಿ ಅವರು ತಿಳಿಸಿದರು.

ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ಬಸವರಾಜ ಐತಾಪೂರ ಮಾತನಾಡಿ, ಪ್ರಸ್ತುತ ಶೈಕ್ಷಣಿಕ ವರ್ಷದಿಂದ 4ನೇ ತರಗತಿಯಿಂದ ಹತ್ತನೇಯ ತರಗತಿಯವರೆಗೆ ವಿದ್ಯಾರ್ಥಿಗಳ ಮುಂದಿನ ಉನ್ನತ ಶಿಕ್ಷಣದ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ಆಯ ಆಯ ಟಿ,ಜೆ ಇಇ ಹಾಗೂ ನಿಟ್ ಫೌಂಡೇಶನ್ ಕೋರ್ಸ್‌ಗಳನ್ನು ಕೂಡ ಶಾಲೆಯಲ್ಲಿ ಆರಂಭಿಸಲಾಗುತ್ತಿದೆ ಎಂದು ಹೇಳಿದರು.

ಆಶೀರ್ವಾದ ಟ್ಯಾಲೆಂಟ್ ಅವಾರ್ಡ್ ಎರಡು ಸಾವಿರದ ಇಪ್ಪತ್ತಾರ ರ ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಹೀಗಿದ್ದಾರೆ:

ಪ್ರಥಮ ರ್‍ಯಾಂಕ್: ರಚನಾ (ತಂದೆ: ನಾಗೇಶ್ ರಾವ್ ಕುಲಕರ್ಣಿ, ಅಗ್ನಿ)

ದ್ವಿತೀಯ ರ್‍ಯಾಂಕ್: ಶ್ರೇಯ (ತಂದೆ: ಶಾಂತಪ್ಪ ದೊಡ್ಡಮನಿ, ಕೊಡೆಕಲ್)

ತೃತೀಯ ರ್‍ಯಾಂಕ್: ಸಿದ್ಧಾರ್ಥ (ತಂದೆ: ಶಿವಾನಂದ ಆಸಂಗಿಹಾಳ)

ನಾಲ್ಕನೇ ರ್‍ಯಾಂಕ್: ಧರಣಿ (ತಂದೆ: ವಿಜಯಕುಮಾರ್ ಗುಡಗುಂಟಿ, ಕಲ್ಲದೇವನಹಳ್ಳಿ)

ಐದನೇ ರ್‍ಯಾಂಕ್: ವಿಶ್ವನಾಥ (ತಂದೆ: ಹನುಮಂತ್ರಾಯ ಕಾಮನಟಗಿ)

ಈ ಸಂದರ್ಭದಲ್ಲಿ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಚನ್ನಬಸವಗೌಡ ಉಪಸ್ಥಿತರಿದ್ದು, ಆಯ್ಕೆಯಾದ ಎಲ್ಲಾ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

# ಜಾತ್ರಾ ಮಹೋತ್ಸವ: ಪೋಲಿಸ್ ಬಿಗಿ ಬಂದೊಬಸ್ತ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಬನ್ನಿಕುಪ್ಪೆ ಗ್ರಾಮದ ಗ್ರಾಮದೇವತೆ ಶ್ರೀ ಬನ್ನಮ್ಮ ಹಾಗೂ ವೀರಭದ್ರೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ಸಂಜೆ ಮಾರಿಗುಡಿ ಆವರಣದಲ್ಲಿ ಪೊಲೀಸ್ ಇಲಾಖೆ ಹಾಗೂ ಎಂಟು ಹಳ್ಳಿಯ ಮುಖಂಡರು ಗ್ರಾಮಸ್ಥರು ಸೇರಿ ಜಾತ್ರೆಯ ಕೆಲವು ವಿಷಯಗಳ ಬಗ್ಗೆ ಗಂಭೀರವಾಗಿ ಚರ್ಚಿಸಿ 13 ಕೋಮುಗಳ ಗ್ರಾಮಸ್ಥರ ವರದಿ ಮರೆಗೆ ಹುಣಸೂರು ಉಪ ವಿಭಾಗದ ಡಿ.ವೈ.ಎಸ್.ಪಿ ರವಿ ರವರು ಹಾಗೂ ಸರ್ಕಲ್ ಇನ್ಸೆಕ್ಟರ್ ಪುನೀತ್, ಇನ್ಸೆಕ್ಟರ್ ಲಕ್ಷ್ಮಿ ಹಾಗೂ ಸಿಬ್ಬಂದಿ ಹಾಜರಿದ್ದು ಬುಧವಾರ ಬೆಳಿಗ್ಗೆ 5:30ಯಿಂದ ಭಾನುವಾರ ಸಂಜೆ 7:00ವರೆಗೆ ಐದು ದಿನಗಳ ಜಾತ್ರಾ ಮಹೋತ್ಸವದ ಅಂಗವಾಗಿ ಬಿಗಿ ಬಂದೊಬಸ್ತು ಹಾಗೂ ಜಾತ್ರೆಗೆ ಆಗಮಿಸುವ ಭಕ್ತರ ಮೇಲೆ ಸೂಕ್ತ ರಕ್ಷಣೆ ಹಾಗೂ ಬಿಗಿ ಭದ್ರತೆಯನ್ನು ಕಾಪಾಡುವ ಭರವಸೆಯನ್ನು ಹಾಗೂ ಯಾವುದೇ ಅಹಿತಕರ ಘಟನೆ ನಡೆದಂತೆ ಸಾರ್ವಜನಿಕರು ಪೋಲೀಸ್ ಇಲಾಖೆಯ ಜೊತೆ ಸಹಕರಿಸಬೇಕೆಂದು ತಿಳಿಸಿದರು



ಬನ್ನಿಕುಪ್ಪೆ ಗ್ರಾಮದ ಗ್ರಾಮದೇವತೆ ಶ್ರೀ ಬನ್ನಮ್ಮ ಹಾಗೂ ವೀರಭದ್ರೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವದ ಅಂಗವಾಗಿ ಪೂರ್ವಭಾವಿ ಸಭೆಯನ್ನು ಮಾರಿಗುಡಿ ಆವರಣದಲ್ಲಿ ಆಯೋಜಿಸಲಾಗಿತ್ತು.

ಹಾಗೂ ಜಾತ್ರೆಗೆ ಬರುವ ಭಕ್ತರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿಯ ಅಧಿಕಾರಿಗಳು ಸಲಹೆ ನೀಡಿದರು ಸಭೆಯಲ್ಲಿ ಪಿಡಿಒ ರಾಘವೇಂದ್ರ ಪ್ರಸನ್ನ, ಕಾರ್ಯದರ್ಶಿ ವೇದಮೂರ್ತಿ, ಗ್ರಾಮದ ಮುಖಂಡರು, ಜನಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

# ಪರಿಶಿಷ್ಟ ಅಭ್ಯರ್ಥಿಗಳ ನೇಮಕ ನಡೆಯಬೇಕು: ಸುರೇಶ ಬಳೂಟಗಿ ಆಗ್ರಹ

• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ



ಶೇಕಡಾ 50ರಷ್ಟು ಮೀರಿ ಮೀಸಲಾತಿ ನೀಡಲು ಬರುವದಿಲ್ಲ ಎಂದು ಹೈಕೋರ್ಟ್ ತಡೆಯಾಜ್ಞೆ ನೀಡಿದ್ದರಿಂದ ಒಳಮೀಸಲಾತಿ ಅನ್ವಯ ಹೊಸ ನೇಮಕಾತಿಗೆ ವಿಳಂಬ ಮಾಡಿದ್ದ ಸರಕಾರ ಇತ್ತೀಚೆಗೆ ನಿರುದ್ಯೋಗಿಗಳ ಹೋರಾಟದಿಂದ ಎಚ್ಚೆತ್ತುಕೊಂಡು ನೇಮಕಾತಿ ಪ್ರಕ್ರಿಯೆ ಆರಂಭಿಸಿದ್ದು ಮೊದಲಿದ್ದಂತೆ ಶೇಕಡಾ 15 ಮೀಸಲಾತಿ ಅನ್ವಯ ನೇಮಕಾತಿ ಮಾಡುವುದಾಗಿ ಹೇಳಿದ್ದು, ಅದನ್ನು ಯಾವ ಮಾನದಂಡ ಅನುಸರಿಸುತ್ತೀರಿ ಎಂಬುದನ್ನು ಬಹಿರಂಗ ಪಡಿಸಬೇಕೆಂದು ಗೋರ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ ಬಳೂಟಗಿ ಕಾಂಗ್ರೆಸ್ ಸರಕಾರಕ್ಕೆ ಒತ್ತಾಯಿಸಿದ್ದಾರೆ.

ಪಟ್ಟಣದಲ್ಲಿ ಪತ್ರಿಕಾ ಹೇಳಿಕೆ ನೀಡಿದ ಅವರು ಮೊದಲಿನ ಮಾನದಂಡಂತೆ ನೇಮಕ ನಡೆದರೆ ನಮ್ಮದೇನೂ ಅಭ್ಯಂತರವಿಲ್ಲ,ಆದರೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಮಾತು ಕೇಳಿ ಮತ್ತೇ ಈ ಸರ್ಕಾರ ಬಂಜಾರ, ಭೋವಿ,ಕೊರಚ,ಕೊರಮ, ಹಾಗೂ ಬಡ ಅಲೆಮಾರಿ ಜನಾಂಗಳಿಗೆ ಒಳ ಮೀಸಲಾತಿ ಅನ್ವಯ ನೇಮಕಾತಿ ಮಾಡಿ ಅನ್ಯಾಯ ಮಾಡಿದರೆ ಅದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಹಳೆ ಮೀಸಲಾತಿ ಅನ್ವಯ ನೇಮಕ ಮಾಡಲು ಹೊರಟ ಸರ್ಕಾರದ ನಡೆಯನ್ನು ಕೆಲವರು ವಿರೋಧಿಸುತ್ತಿದ್ದು ಅವರ ಒತ್ತಡಕ್ಕೆ ಮಣಿಯದೆ ಮೊದಲಿನಂತೆ ನೇಮಕಾತಿ ಪ್ರಕ್ರಿಯೆ ನಡೆಸಿ ವಿದ್ಯಾವಂತ ನಿರುದ್ಯೋಗಿಗಳ ಮತ್ತು ಪರಿಶಿಷ್ಟ ಜಾತಿಯ ಶೋಷಿತ ಜನರ ಹಿತಾಸಕ್ತಿ ಕಾಪಾಡಬೇಕು. ಈ ನೇಮಕ ಪದ್ಧತಿಯನ್ನು ವಿರೋಧಿಸಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ಪತ್ರಿಕಾ ಹೇಳಿಕೆ ನೀಡಿದ್ದು ಅವರು ಕೂಡ ನಮ್ಮ ಜನರ ಭಾವನೆ ಮತ್ತು ನೋವನ್ನು ಅರ್ಥ ಮಾಡಿಕೊಂಡು ಪರಿಶಿಷ್ಟ ಜಾತಿಯ ಎಲ್ಲಾ ಸಮುದಾಯಗಳ ಹಿತ ಕಾಯುವ ಕೆಲಸ ಮಾಡಬೇಕು, ಕೆಲವು ಸಮುದಾಯಗಳಿಗೆ ಓಲೈಕೆ ಮಾಡಲು ಒಳ ಮೀಸಲಾತಿ ಜಾರಿಗೊಳಿಸಲು ಸರ್ಕಾರವನ್ನು ಆಗ್ರಹಿಸುತ್ತಿರುವುದು ದುರಂತದ ವಿಷಯ.ಹೀಗಾಗಿ ಬಿಜೆಪಿ ಪಕ್ಷ ಮತ್ತು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರು ಸರ್ವ ಸಮುದಾಯಗಳ ಶ್ರೇಯಸ್ಸು ಬಯಸುವ ಮನಸ್ಥಿತಿಯವರಿದ್ದಾರೆ. ಆದರೆ 2023ರಲ್ಲಿ ಕೆಲವು ಕುತಂತ್ರಿಗಳ ಮಾತು ಕೇಳಿ ಒಳಮೀಸಲಾತಿ ಜಾರಿ ಮಾಡಲು ಹೋಗಿ ನಿಮ್ಮ ಬಿಜೆಪಿ ಪಕ್ಷ ಹೀನಾಯ ಸೋಲು ಅನುಭವಿಸಿದ್ದನ್ನು ಮರೆತಿರುವಿರಿ ಅಂತ ಕಾಣುತ್ತಿದೆ. ಇದರ ಲಾಭವನ್ನು ಪಡೆದು ಕಾಂಗ್ರೆಸ್ ಪಕ್ಷ ನಮ್ಮಿಂದ ಮತ ಹಾಕಿಸಿಕೊಂಡು ಅವರು ಕೂಡ ನಮ್ಮ ಸಮಾಜಗಳಿಗೆ ದ್ರೋಹ ಮಾಡಲು ಹೊರಟಿರುವದು ನಾಚಿಗೇಡಿನ ಸಂಗತಿ.ಹೀಗಾಗಿ ಇಲ್ಲಿನ ಸರಕಾರ ಯಾರ ಒತ್ತಡಕ್ಕೂ,ಪ್ರಭಾವಕ್ಕೂ ಒಳಗಾಗದೆ ಸರ್ವ ಜನಾಂಗಗಳ ಹಿತ ಕಾಪಾಡಲು ಮೊದಲಿನಂತೆ ನೇಮಕಾತಿ ನಡೆಸಬೇಕು.ಇಲ್ಲದಿದ್ದರೆ ಜನರ ಕೆಂಗಣ್ಣಿಗೆ ಗುರಿಯಾಗಿ ನಿಮ್ಮ ಸರಕಾರ ಪತನವಾಗುತ್ತದೆ. ಇಂಥ ನಿಮ್ಮ ನಡವಳಿಕೆಯಿಂದ ರಾಜ್ಯದ ಜನರು ರೋಸಿ ಹೋಗಿದ್ದು, ಮುಂದಿನ ದಿನಗಳಲ್ಲಿ ರೊಚ್ಚಿಗೆದ್ದು ನಿಮ್ಮನ್ನು ಅಧಿಕಾರದಿಂದ ಕೆಳಗಿಳಿಸಲು ತುದಿಗಾಲಿನಲ್ಲಿ ನಿಂತಿದ್ದಾರೆ.

ಹೀಗಾಗಿ ಶೋಷಿತ ವರ್ಗಗಳ ನಾಯಕ ಎಂದು ಕರೆಸಿಕೊಳ್ಳುತ್ತಿರುವ ಅಹಿಂದ ನಾಯಕ ಸಿದ್ದರಾಮಯ್ಯನವರು ಇದರ ಬಗ್ಗೆ ಸರಿಯಾದ ನಿರ್ಧಾರ ತೆಗೆದುಕೊಳ್ಳಬೇಕೆಂದು ಈ ಮೂಲಕ ನಾವು ಆಗ್ರಹಿಸುತ್ತೇವೆ ಎಂದರು.

ಈ ಸಂಧರ್ಭದಲ್ಲಿ ಗೋರ ಸೇನಾ ಪ್ರಮುಖರಾದ ವಿಶ್ವನಾಥ ಬಳಗೇರಿ, ಯಮನೂರಪ್ಪ ಭಾನಾಪುರ, ಪ್ರಕಾಶ ಬಳಗೇರಿ, ದುರಗಪ್ಪ ಕಟ್ಟಿಮನಿ,ರಾಘವೇಂದ್ರ ಬಳಗೇರಿ, ನಾಗರಾಜ ಭಾನಾಪುರ, ಹನಮಂತ ಚವ್ಹಾಣ,ಮಹೇಶ್ ಕಾರಭಾರಿ,ಚೇತನ್ ಬಳಗೇರಿ ಶಶಿಕುಮಾರ ಕಾರಭಾರಿ, ಕಿರಣ ಕಾರಭಾರಿ,ವಿಜಯ ಚವ್ಹಾಣ ಸೇರಿದಂತೆ ಇನ್ನಿತರರು ಹಾಜರಿದ್ದರು.

# ಸೌಹಾರ್ದತೆಯ ಪ್ರತೀಕ ಇಫ್ತಾರ್ ಕೂಟ: ಕಳಕಪ್ಪ



• ಮಲ್ಲಮ್ಮ ನುಡಿ ವಾರ್ತೆ ಕುಕನೂರು

ರಂಜಾನ್ ತಿಂಗಳಲ್ಲಿ ಮುಸ್ಲಿಂ ಸಮಾಜದವರು 30ದಿನಗಳ ಕಾಲ ಉಪವಾಸ ಮಾಡುತ್ತಾರೆ. ಅವರ ಈ ಕಠಿಣ ಉಪವಾಸಕ್ಕೆ ಅನ್ನದಾನ ಮಾಡುವದು ಶ್ರೇಷ್ಠ ಕಾಯಕವಾಗಿದೆ. ಇದರಿಂದ ಸಮಾಜದಲ್ಲಿ ಸೌಹಾರ್ದತೆಯನ್ನು ಹೆಚ್ಚಿಸುತ್ತವೆ ಎಂದು ತಾ.ಪಂ ಮಾಜಿ ಉಪಾಧ್ಯಕ್ಷ ಹಾಗೂ ಕರ್ನಾಟಕ ಸಾಧಕ ಶ್ರೇಷ್ಠ ಪ್ರಶಸ್ತಿ ವಿಜೇತರಾದ ಕಳಕಪ್ಪ ಕಂಬಳಿ ಹೇಳಿದರು.

ಪಟ್ಟಣದ ಜಾಮೀಯ ಮಸೀದಿಯಲ್ಲಿ ಸೋಮವಾರ ಸಂಜೆ ವೇಳೆ ಆಯೋಜಿಸಿದ್ದ ಇಫ್ತಾರ್ ಕೂಟವನ್ನು ಉದ್ದೇಶಿಸಿ ಮಾತನಾಡಿದ ಅವರು, ಈ ಸಮಯದಲ್ಲಿ ಕೇವಲ ಹಸಿವು ಮತ್ತು ನೀರಡಿಕೆಯನ್ನು ತಡೆಯುವುದಲ್ಲ. ಕೆಟ್ಟ ಆಲೋಚನೆಗಳು, ಸುಳ್ಳು ಮತ್ತು ಕೋಪವನ್ನು ನಿಯಂತ್ರಿಸುವುದು. ಹಸಿವಿನ ನೋವು ಹೇಗಿರುತ್ತದೆ ಎಂದು ಅನುಭವಿಸುವ ಮೂಲಕ, ಬಡವರು ಮತ್ತು ಹಸಿದವರ ಬಗ್ಗೆ ಕಾಳಜಿ ವಹಿಸುವುದು. ತಮ್ಮ ಸಂಪತ್ತಿನ ಒಂದು ಭಾಗವನ್ನು ಬಡವರಿಗೆ ಹಂಚುವುದು ಈ ತಿಂಗಳ ವಿಶೇಷವಾಗಿದೆ. ಈ ಪವಿತ್ರ ಕೆಲಸಗಳನ್ನು ಮಾಡಿ ಅವರು ಅಲ್ಲಾನ ಕೃಪೆಗೆ ಪಾತ್ರರಾಗುತ್ತಾರೆ.

ಇಫ್ತಾರಕೂಟ ಆಯೋಜಿಸಿದ್ದ ಕಳಕಪ್ಪ ಕಂಬಳಿ ಅವರನ್ನು ಸಮಾಜದಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಜಾಮಿಯಾ ಮಾಸ್ಜಿದ್ ಧರ್ಮ ಗುರುಗಳು ಉದ್ಯಮಿ ಹಾಗೂ ಹಿರಿಯ ಮುಖಂಡ ಸತ್ಯನಾರಾಯಣಪ್ಪ ಹರಪನಹಳ್ಳಿ, ಜಾಮೀಯ ಪುರಸಭೆ ಅಧ್ಯಕ್ಷ ರಶೀದ್ ಸಾಬ ಹಣಜಗಿರಿ, ಜಿ.ಪಂ. ಮಾಜಿ ಸದಸ್ಯ ಈರಪ್ಪ ಕುಡಗುಂಟಿ, ಪ.ಪಂ ಮಾಜಿ ಸದಸ್ಯ ಹನುಮಯ್ಯ ಹಂಪನಾಳ, ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷ ರೇಹಮಾನಸಾಬ ಮಕ್ಕಪ್ಪನವರ್, ರಶೀದ್‌ಸಾಬ ಉಮಚಗಿ, ಅಲ್ಲಾವುದ್ದೀನ್ ಎಮ್ಮಿ, ಶಫೀಸಾಬ ಗುಡಿಹಿಂದಲ್, ನೂರುದ್ದೀನ್ ಸಾಬ್ ಗುಡಿಹಿಂದಲ್ ಸೇರಿದಂತೆ ಅನೇಕರು ಇದ್ದರು.

ಸಂ:ಪುಸಹು/ತೈ.ಬ/01/2025-26 ದಿನಾಂಕ: 09-03-2025

## ವಾರದ ಸಂತೆ ವಸೂಲಿ ಗುತ್ತಿಗೆ ಲಿಲಾವು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೆನೆಂದರೆ, 2026-27ನೇ ಸಾಲಿನ ವಾರದ ಸಂತೆ ವಸೂಲಿ ಗುತ್ತಿಗೆಯನ್ನು ಲಿಲಾವಿನ ಮೂಲಕ ಪಡೆದುಕೊಳ್ಳಲು ದಿನಾಂಕ: 17-03-2026 ರಂದು ಬೆಳಿಗ್ಗೆ 11:30 ಗಂಟೆಗೆ ಪುರಸಭೆ ಕಾರ್ಯಾಲಯ ಆವರಣದಲ್ಲಿ ಬಹಿರಂಗ ಹರಾಜನ್ನು ಮಾಡಲಾಗುವುದು. ಆದ್ದರಿಂದ ನಿಗಧಿತ ಠೇವಣಿ ಹಣ ಹಾಗೂ ನಿಗಧಿತ ಅರ್ಜಿ ಶುಲ್ಕವನ್ನು ದಿನಾಂಕ: 16-03-2026 ರಂದು ಬೆಳಿಗ್ಗೆ 11:00 ಗಂಟೆಯಿಂದ ದಿನಾಂಕ: 17-03-2026 ರಂದು ಬೆಳಿಗ್ಗೆ 11:00 ಗಂಟೆಯ ರವರೆಗೆ ಮುಖ್ಯಾಧಿಕಾರಿ ಪುರಸಭೆ ಹುಮನಾಬಾದ ರವರ ಹೆಸರಿಗೆ ಸಂದಾಯವಾಗುವಂತೆ ಬ್ಯಾಂಕ ಡಿ.ಡಿ. ಅಥವಾ ಪುರಸಭೆಯಲ್ಲಿ ನಗದು ರಸೀದಿ ಪಡೆದು ಹರಾಜಿನಲ್ಲಿ ಭಾಗವಹಿಸಬಹುದಾಗಿದ್ದು ಹೆಚ್ಚಿನ ಮಾಹಿತಿಗಾಗಿ ಪುರಸಭೆ ಕಾರ್ಯಾಲಯದ ಕಂದಾಯ ಶಾಖೆಗೆ ಸಂಪರ್ಕಿಸಲು ಸೂಚಿಸಿದೆ.

| ಕ್ರ.ಸಂ | ಹರಾಜಿನ ವಿವರ | ಆರ್ಥಿಕ ವರ್ಷ | ಠೇವಣಿ ಮೊತ್ತ | ಹಿಂದಿರುಗಿಸಲಾಗದ ಅರ್ಜಿ ಶುಲ್ಕ |
|---|---|---|---|---|
| 1. | ವಾರದ ಸಂತೆ ವಸೂಲಿ ಗುತ್ತಿಗೆ | 2026-27 | 50,000/- | 2500/- |

ಸಹಿ

ಮುಖ್ಯಾಧಿಕಾರಿಗಳು
ಪುರಸಭೆ ಹುಮನಾಬಾದ

# ಬ್ರಹ್ಮಾಕುಮಾರಿಸ್ ಪಾವನಧಾಮ ರಕ್ತದಾನ ಶಿಬಿರ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ನಗರದ ಜನವಾಡ ರಸ್ತೆಯಲ್ಲಿರುವ ಪ್ರಜಾಪಿತಾ ಬ್ರಹ್ಮಾಕುಮಾರಿಸ್ ಈಶ್ವರೀಯ ವಿಶ್ವವಿದ್ಯಾಲಯದ ರಾಜಯೋಗ ಕೇಂದ್ರ ಪಾವನಧಾಮ ಅವರಣದಲ್ಲಿ ದಾದಿ ರತನಮೋಹಿನಿ(ಗುಲ್ಜಾರ ದಾದಿ) ಅವರ ಸ್ಮರಣಾರ್ಥ ರಕ್ತದಾನ ಶಿಬಿರವನ್ನು ಇಂದು ಬುಧವಾರ (ಮಾ.11) ಬೆಳಿಗ್ಗೆ 9 ಗಂಟೆಗೆ ಆಯೋಜಿಸಲಾಗಿದೆ.

ಸಮಾಜದಲ್ಲಿ ಮಾನವೀಯತೆ ಮತ್ತು ಸೇವಾ ಮನೋಭಾವವನ್ನು ಉತ್ತೇಜಿಸುವ ಉದ್ದೇಶದಿಂದ ಈ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನಿಗಳು ಭಾಗವಹಿಸಿ ರಕ್ತದಾನ ಮಾಡುವಂತೆ ಬ್ರಹ್ಮಾಕುಮಾರಿಸ್ ಕೇಂದ್ರದ ಸಹೋದರಿಯರು ಮನವಿ ಮಾಡಿದ್ದಾರೆ.ಇದೇ ವೇಳೆ ಮಾಧ್ಯಮ ಸ್ನೇಹಿತರು ಕಾರ್ಯಕ್ರಮಕ್ಕೆ ಆಗಮಿಸಿ ಸುದ್ದಿಯನ್ನು ಪ್ರಸಾರ ಮಾಡಬೇಕೆಂದು ಕೋರಲಾಗಿದೆ. ಹಾಗೆಯೇ ರಕ್ತದಾನ ಮಾಡಲು ಇಚ್ಛಿಸುವ ಪತ್ರಕರ್ತರು ಹಾಗೂ ಮಾಧ್ಯಮ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ರಕ್ತದಾನ ಮಾಡುವಂತೆ ಕೇಂದ್ರದ ಸಂಚಾಲಕಿ ಬಿ.ಕೆ ಪ್ರತಿಮಾ ಬಹೆನಜಿ ವಿನಂತಿಸಿದ್ದಾರೆ.

# ಮರ ಕಡಿದರೆ 10 ಸಸಿ ನೆಡಲು ವಿಧಿಸುವ ಶುಲ್ಕಕ್ಕೆ ವಿನಾಯಿತಿ ಇಲ್ಲ: ಈಶ್ವರ ಖಂಡ್ರೆ

ವಿಧಾನಸಭೆ, ಮಾ.10: ಮರ ಕಡಿತಲೆಯನ್ನು ಒಳಗೊಂಡ ಯಾವುದೇ ರಸ್ತೆ ಯೋಜನೆಯಲ್ಲಿ ಕಡಿಯುವ ಒಂದು ಮರದ ಬದಲಿಗೆ 10 ಪಟ್ಟು ಸಸಿ ನೆಡಲು ವಿಧಿಸುವ ಶುಲ್ಕದ ಮೊದ ಪ್ರತಿ ಸಸಿಗೆ 411.27 ಆಗಿದ್ದು, ಇದನ್ನು ಉಪಯೋಗಿ ಸಂಸ್ಥೆ ಪಾವತಿಸಬೇಕಾಗುತ್ತದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ವಿಧಾನಸಭೆಗಿಂದು ಸ್ಪಷ್ಟಪಡಿಸಿದ್ದಾರೆ.

ಸದಸ್ಯ ತಮ್ಮಯ್ಯ ಎಚ್.ಡಿ. ಅವರು ರಾ.ಹೆ.373 ರಸ್ತೆ ಕಾಮಗಾರಿಗೆ ಸಂಬಂಧಿಸಿದಂತೆ ಶುಲ್ಕ ವಿನಾಯಿತಿ ನೀಡುವ ಕುರಿತಂತೆ ಗಮನ ಸೆಳೆದ ಪ್ರಸ್ತಾಪಕ್ಕೆ, ಉತ್ತರಿಸಿದ ಸಚಿವರು, ಬೆಳೆದ ಮರಗಳನ್ನು ಕಡಿಯುವುದನ್ನು ಒಳಗೊಂಡ ರಸ್ತೆ ಯೋಜನೆಗಳ ವಿಚಾರದಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್.ಎಚ್.ಎ.ಐ.)ಗೆ ಪ್ರತಿ ಕಿ.ಮೀ.ಗೆ 9.06 ಲಕ್ಷ ಶುಲ್ಕ ವಿಧಿಸಲಾಗಿರುತ್ತದೆ. ಆದರೆ ಎನ್.ಎಚ್.ಎ.ಐ.ನ ವಿಸ್ತೃತ ಯೋಜನಾ ವರದಿಯಲ್ಲಿ ಈ 9 ಲಕ್ಷ ಸೇರಿಸಿ, ಗುತ್ತಿಗೆದಾರರ ಕಡೆಯಿಂದಲೇ ಸಸಿ ನೆಡಿಸುವ ಕೆಲಸ ಮಾಡುತ್ತಿದ್ದು, ಇದಕ್ಕೆ ಮಾತ್ರ ವಿನಾಯಿತಿ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ಎನ್.ಎಚ್.ಎ.ಐ.ಗೆ ಈಗ ನೀಡಿರುವ ಈ ವಿನಾಯಿತಿಯ ಪರಾಮರ್ಶೆ ಮಾಡಲಾಗುತ್ತಿದ್ದು, ಅವರು ರಸ್ತೆಯ ಬದಿಯಲ್ಲಿ ಗುತ್ತಿಗೆದಾರರಿಂದ ಸಸಿ ನೆಡಿಸದಿದ್ದರೆ, ಈಗ ನೀಡಿರುವ ಅನುಮತಿ ಹಿಂಪಡೆಯುತ್ತೇವೆ ಎಂದು ಸದನಕ್ಕೆ ತಿಳಿಸಿದರು.

ರಾಷ್ಟ್ರೀಯ ಹೆದ್ದಾರಿ ವಿಭಾಗಗಳು, ರಾಜ್ಯ ಹೆದ್ದಾರಿ ವಿಭಾಗಗಳು, ರಾಜ್ಯ ಲೋಕೋಪಯೋಗಿ ಇಲಾಖೆ, ಪಿಆರ್.ಇ.ಡಿ.,ಕೆಶಿಪ್,ಕೆ.ಆರ್.ಡಿ.ಸಿ.ಎಲ್ ಅಥವಾ ಯಾವುದೇ ಇತರ ಪ್ರಾಧಿಕಾರದಿಂದ ಕೈಗೊಳ್ಳಲಾಗುವ ರಸ್ತೆ ಯೋಜನೆಗಳಿಗೆ ಈ ವಿನಾಯಿತಿ ಆದೇಶ ಅನ್ವಯಿಸುವುದಿಲ್ಲ ಎಂದೂ ಈಶ್ವರ ಖಂಡ್ರೆ ಸ್ಪಷ್ಟಪಡಿಸಿದರು.

# ಉತ್ತಮ ಪವರ್ ಮ್ಯಾನ್ ಶಿವರಾಜ್ ಸೇವೆ

• ಮಲ್ಲಮ್ಮ ನುಡಿ, ಹಗರಿಬೊಮ್ಮನಹಳ್ಳಿ



ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಸೊನ್ನ ಗ್ರಾಮದ ಹೆಮ್ಮೆಯ ಪುತ್ರರಾದ *ಶಿವರಾಜ್ (ಂಠಿಠಿಣ*) ಅವರು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (GESCOM)ಸಂಸ್ಥೆಯ ಉತ್ತಂಗಿ ಉಪವಿಭಾಗದಲ್ಲಿ ಪವರ್ ಮ್ಯಾನ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ಕರ್ತವ್ಯವನ್ನು ಪ್ರಾಮಾಣಿಕತೆ, ನಿಷ್ಠೆ ಮತ್ತು ಸೇವಾಭಾವದಿಂದ ನಿರ್ವಹಿಸುವ ಮೂಲಕ ಅವರು ಜನಮನ ಗೆದ್ದಿರುವ ಕಾರ್ಯನಿಷ್ಠ ಉದ್ಯೋಗಿಯಾಗಿದ್ದಾರೆ.

ವಿದ್ಯುತ್ ಇಲಾಖೆ ಎಂದರೆ ದಿನರಾತ್ರಿ ಕೆಲಸ ಮಾಡುವ ಜವಾಬ್ದಾರಿ

. ಮಳೆ, ಗಾಳಿ, ಬಿಸಿಲು ಎಂಬುದನ್ನೇ ಲೆಕ್ಕಿಸದೇ ಜನರಿಗೆ ನಿರಂತರ ವಿದ್ಯುತ್ ಸರಬರಾಜು ಆಗುವಂತೆ ನೋಡಿಕೊಳ್ಳುವುದು ಪವರ್ ಮ್ಯಾನ್‌ಗಳ ಪ್ರಮುಖ ಕರ್ತವ್ಯ. ಈ ಕರ್ತವ್ಯವನ್ನು ಶಿವರಾಜ್ Appu ಅವರು ಅತ್ಯಂತ ಹೊಣೆಗಾರಿಕೆಯಿಂದ ನಿರ್ವಹಿಸುತ್ತಿದ್ದಾರೆ. ವಿದ್ಯುತ್ ವ್ಯತ್ಯಯ ಉಂಟಾದಾಗ ತಕ್ಷಣ ಸ್ಥಳಕ್ಕೆ ತೆರಳಿ ಸಮಸ್ಯೆಯನ್ನು ಪರಿಹರಿಸುವುದು, ಗ್ರಾಮೀಣ ಪ್ರದೇಶದ ಜನರಿಗೆ ತೊಂದರೆ ಆಗದಂತೆ ಸೇವೆ ನೀಡುವುದು ಇವರ ವಿಶೇಷತೆ.

ಗ್ರಾಹಕರ ಸಮಸ್ಯೆಗಳನ್ನು ತಮ್ಮ ಸಮಸ್ಯೆಯಂತೆ ಪರಿಗಣಿಸಿ,ದಿನರಾತ್ರಿ ಎನ್ನದೆ ಸೇವೆ ನೀಡುವ ಇವರ ಮನೋಭಾವದಿಂದ ಜನರು ಕೂಡ ಇವರನ್ನು ಗೌರವದಿಂದ ನೋಡುತ್ತಾರೆ. ಹಲವಾರು ಬಾರಿ ಅಪಾಯಕಾರಿ ಪರಿಸ್ಥಿತಿಗಳಲ್ಲಿಯೂ ಕೆಲಸ ಮಾಡಿ ವಿದ್ಯುತ್ ಸರಬರಾಜು ಸರಿಪಡಿಸಿರುವ ಉದಾಹರಣೆಗಳು ಇವರ ಸೇವಾ ಜೀವನದಲ್ಲಿ ಕಂಡು ಬರುತ್ತವೆ.

2026ನೇ ಸಾಲಿನಲ್ಲಿ ಗ್ರಾಹಕರಿಗೆ ಉತ್ತಮ ಸೇವೆ ನೀಡಿದ್ದಕ್ಕಾಗಿ ವಿದ್ಯುತ್ ಇಲಾಖೆಯ ವತಿಯಿಂದ *"ಉತ್ತಮ ಪವರ್ ಮ್ಯಾನ್"* ಎಂದು ಗುರುತಿಸಿ ಶಿವರಾಜ್ ಂಠಿಠಿಣ ಅವರನ್ನು ಸನ್ಮಾನಿಸಲಾಗಿದೆ. ಈ ಗೌರವವು ಅವರ ಪರಿಶ್ರಮ, ನಿಷ್ಠೆ ಮತ್ತು ಸಮಾಜದ ಮೇಲಿನ ಕಾಳಜಿಗೆ ದೊರೆತ ಸಮರ್ಪಕ ಮಾನ್ಯತೆ ಆಗಿದೆ.

ಸೊನ್ನ ಗ್ರಾಮದ ಈ ಯುವಕ ಇಂದು ತನ್ನ ಕರ್ತವ್ಯನಿಷ್ಠೆಯಿಂದ ಜಿಲ್ಲೆಯ ಜನರ ಮೆಚ್ಚುಗೆಗೆ ಪಾತ್ರನಾಗಿದ್ದಾನೆ.ಸಮಾಜದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ದುಡಿಯುವ ಸರ್ಕಾರಿ ಸಿಬ್ಬಂದಿ ಹೇಗಿರಬೇಕು ಎಂಬುದಕ್ಕೆ ಶಿವರಾಜ್ Appu ಅವರು ಒಳ್ಳೆಯ ಉದಾಹರಣೆ.

ಇವರಂತಹ ಸೇವಾ ಮನೋಭಾವದ ವ್ಯಕ್ತಿಗಳು ಸಮಾಜಕ್ಕೆ ಮಾದರಿಯಾಗಲಿ, ಇನ್ನಷ್ಟು ಸಾಧನೆಗಳನ್ನು ಮಾಡಿ ಜಿಲ್ಲೆಗೆ ಹೆಮ್ಮೆ ತರಲಿ ಎಂಬುದು ಎಲ್ಲರ ಆಶಯ.

ಶಿವರಾಜ್ ಂಠಿಠಿಣ ಅವರಿಗೆ ಹಾರ್ದಿಕ ಅಭಿನಂದನೆಗಳು ಮತ್ತು ಮುಂದಿನ ದಿನಗಳಲ್ಲಿ ಇನ್ನಷ್ಟು ಯಶಸ್ಸುಗಳು ದೊರಕಲಿ ಎಂದು ಹಾರೈಸೋಣ.

# ಆನೆ ಮಾನವ ಸಂಘರ್ಷ ಶಾಶ್ವತ ಪರಿಹಾಕ್ಕೆ ಪ್ರಾಮಾಣಿಕ ಯತ್ನ: ಈಶ್ವರ ಖಂಡ್ರೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಆನೆ-ಮಾನವ ಸಂಘರ್ಷ ನಿಯಂತ್ರಿಸಲು 2025-26ನೇ ಸಾಲಿನಲ್ಲಿ ಮಡಿಕೇರಿ ವಿಭಾಗಕ್ಕೆ 7 ಕಿ.ಮೀ ಮತ್ತು ನಾಗರಹೊಳೆ ವಿಭಾಗಕ್ಕೆ 20 ಕಿ.ಮೀ. ರೈಲು ಹಳಿ ತಡೆಗೋಡೆ ಮಂಜೂರಾಗಿದ್ದು, ಶೀಘ್ರ ಕಾಮಗಾರಿ ಆರಂಭಿಸಲಾಗುವುದು ಎಂದು ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ವಿಧಾನ ಪರಿಷತ್ತಿಗಿಂದು ತಿಳಿಸಿದ್ದಾರೆ. ಮಾನವ-ವನ್ಯಜೀವಿ ಸಂಘರ್ಷ ತಡೆಯಲು ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ. ಆನೆ ನಿಗ್ರಹ ಕಂದಕ, ಸೌರ ವಿದ್ಯುತ್ ಬೇಲಿ ನಿರ್ವಹಣೆ ಮಾಡಲಾಗುತ್ತಿದೆ. 2 ಆನೆ ಕಾರ್ಯಪಡೆ ಕಾರ್ಯನಿರ್ವಹಿಸುತ್ತಿದೆ. ಈಗ 2 ಪುಂಡಾನೆಗಳ ಸೆರೆಗೆ ಮುಖ್ಯ ವನ್ಯಜೀವಿ ಪರಿಪಾಲಕರು ಆದೇಶ ನೀಡಿದ್ದಾರೆ ಎಂದು ತಿಳಿಸಿದರು.

ಶೂನ್ಯವೇಳೆಯಲ್ಲಿ ಸುಜಾ ಕುಶಾಲಪ್ಪ ಅವರ ಪ್ರಸ್ತಾಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ಫೆ.28ರಂದು ಕಾಡಿನಂಚಿನ ನಿವಾಸಿ 17 ವರ್ಷದ ಬಾಲಕಿ ಆನೆ ದಾಳಿಯಿಂದ ಮೃತಪಟ್ಟಿದ್ದರೆ, ಮಾ.9ರಂದು ಕಾಡಿನೊಳಗೇ ವಾಸಿಸುತ್ತಿದ್ದ 55 ವರ್ಷದ ಬುಡಕಟ್ಟು ಮಹಿಳೆ ಸಾವಿಗೀಡಾಗಿದ್ದಾರೆ ಇದು ಅತ್ಯಂತ ನೋವಿನ ಸಂಗತಿ ಎಂದರು.

ಜೀವ ಅತ್ಯಂತ ಅಮೂಲ್ಯವಾದ್ದು, ಇದಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ಅರಣ್ಯ ಇಲಾಖೆ ಈ ಎರಡೂ ಪ್ರಕರಣದಲ್ಲಿ ಈಗಾಗಲೇ 5 ಲಕ್ಷ ರೂ. ಪರಿಹಾರವನ್ನು ಮೃತರ ಹತ್ತಿರದ ಬಂಧುಗಳಿಗೆ ವಿತರಿಸಲಾಗಿದ್ದು, ವಾರದೊಳಗೆ ಉಳಿಕೆ ತಲಾ 15 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ತಿಳಿಸಿದರು.

ಆನೆ-ಮಾನವ ಸಂಘರ್ಷ ನಿಯಂತ್ರಿಸಲು ಶಾಶ್ವತ ಪರಿಹಾರ ಕ್ರಮಗಳ ಬಗ್ಗೆಯೂ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

# ಮಹಾನಂದ ಇಂಡಸ್ಟ್ರೀಸ್ ಆದೇಶ ಉಲ್ಲಂಘನೆ ವಿದ್ಯುತ್ ಸಂಪರ್ಕ ತಕ್ಷಣ ಸ್ಥಗಿತಗೊಳಿಸಿ

ಮಲ್ಲಮ್ಮನುಡಿವಾರ್ತೆ ಸಿಂಧನೂರು



ತಾಲೂಕಿನ ವಿರೂಪಾಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ 4ನೇ ಮೈಲ್ ಕ್ಯಾಂಪಿನಲ್ಲಿ ಇರುವ ಮಹಾನಂದ ಇಂಡಸ್ಟ್ರೀಸ್ 4 ನೆ ಮೈಲ್ ಕ್ಯಾಂಪ್ ದಲ್ಲಿ ಫರ್ನಿಚರ್ ತಯಾರಿಸುವ ಕಾನೂನು ವಿರೋಧಿ, ಜನ ಜಾನುವಾರುಗಳಿಗೆ ಕಂಟಕವಾದ, ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿರುವ ಘಟಕಕ್ಕೆ ಸಂಬಂಧಿಸಿದಂತೆ ಹಲವಾರು ಬಾರಿ ಮನವಿ ಮೇರೆಗೆ ಗ್ರಾಮ ಪಂಚಾಯತ್ ದಿನಾಂಕ 27-01-2026 ರಂದು ಅಧಿಕೃತ ಆದೇಶ ಹೊರಡಿಸಿದ್ದು, ಆ ಇಂಡಸ್ಟ್ರಿಗೆ ಯಾವುದೇ ರೀತಿಯ ವಿದ್ಯುತ್ ಸಂಪರ್ಕ ನೀಡಬಾರದು ಎಂದು ಸ್ಪಷ್ಟವಾಗಿ ಸೂಚಿಸಲಾಗಿದೆ.

ಹಾಗೆಯೇ ಸದರಿ ಆದೇಶವನ್ನು ಉಲ್ಲೇಖಿಸಿ, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ತಮಗೆ ದಿನಾಂಕ : 09.02.2026 ರಂದು ಪತ್ರ ಬರೆದು ವಿದ್ಯುತ್ ಸ್ಥಗಿತಗೊಳಿಸಲು ತಿಳಿಸಿರುತ್ತಾರೆ.

ಆದರೆ ಪಂಚಾಯತ್ ಆದೇಶವನ್ನು ಲೆಕ್ಕಿಸದೆ ಆ ಸ್ಥಳಕ್ಕೆ ಈಗಾಗಲೇ ವಿದ್ಯುತ್ ಸಂಪರ್ಕ ನೀಡಿರುವುದು ತಿಳಿದುಬಂದಿದ್ದು, ಇದು ಗ್ರಾಮ ಪಂಚಾಯತ್ ಆದೇಶಕ್ಕೂ ಹಾಗೂ ಏಚಿಡಿಟಚಿಣಚಿಞಚಿ ಕಚಿಟಿಛಿhಚಿಥಿಚಿಣ ಖಚಿರಿ ಂಛಿಣ ರ ವಿಧಿ 66 ಸೇರಿದಂತೆ ಸಂಬಂಧಿತ ಕಾನೂನು ನಿಯಮಗಳಿಗೆ ವಿರುದ್ಧವಾಗಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ನಾವು ಕೆಳಗಿನ ತುರ್ತು ಕ್ರಮಗಳನ್ನು ಕೈಗೊಳ್ಳುವಂತೆ ಪರಿಸರ ರಕ್ಷಣಾ ವೇದಿಕೆ ತಾಲೂಕು ಸಮಿತಿ ಒತ್ತಾಯಿಸುತ್ತದೆ .

ನಂತರ ಮಾತನಾಡಿದ ಪರಿಸರ ರಕ್ಷಣಾ ವೇದಿಕೆ ತಾಲೂಕು ಸಮಿತಿ ಸಂಚಾಲಕ ಎಂ ಗಂಗಾಧರ್ ಅವರು ಮಹಾನಂದ ಇಂಡಸ್ಟ್ರಿಗೆ ನೀಡಿರುವ ವಿದ್ಯುತ್ ಸಂಪರ್ಕವನ್ನು ತಕ್ಷಣವೇ ಸ್ಥಗಿತಗೊಳಿಸಬೇಕು. ಪಂಚಾಯತ್ ಅನುಮತಿ ಇಲ್ಲದೆ ಮುಂದಿನ ದಿನಗಳಲ್ಲಿ ಯಾವುದೇ ಹೊಸ ಅಥವಾ ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡಬಾರದು. ಈ ಕುರಿತು ಕೈಗೊಂಡ ಕ್ರಮದ ಬಗ್ಗೆ ಲಿಖಿತವಾಗಿ ಗ್ರಾಮ ಪಂಚಾಯತ್ ಹಾಗೂ ಪರಿಸರ ರಕ್ಷಣಾ ವೇದಿಕೆಗೆ ತಿಳಿಸಬೇಕು.

ಪಂಚಾಯತ್ ಆದೇಶವನ್ನು ಪಾಲಿಸದೆ ವಿದ್ಯುತ್ ಸಂಪರ್ಕ ಮುಂದುವರಿದಲ್ಲಿ, ಸಾರ್ವಜನಿಕರ ಪರವಾಗಿ ನಾವು ಮೇಲಾಧಿಕಾರಿಗಳು, ಜಿಲ್ಲಾ ಆಡಳಿತ ಹಾಗೂ ಸಂಬಂಧಿತ ಕಾನೂನು ಸಂಸ್ಥೆಗಳಿಗೆ ದೂರು ನೀಡುವುದು ಹಾಗೂ ಕಾನೂನು ಕ್ರಮಕ್ಕಾಗಿ ಹೋರಾಟ ನಡೆಸುವುದು ಅನಿವಾರ್ಯವಾಗುತ್ತದೆ ಎಂದು ತಿಳಿಸುತ್ತೇವೆ.

ಆದುದರಿಂದ ವಿಷಯದ ಗಂಭೀರತೆಯನ್ನು ಪರಿಗಣಿಸಿ ತಕ್ಷಣ ಜನ ಜಾನುವಾರುಗಳಿಗೆ ಕಂಟಕವಾದ, ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿರುವ ಮಹಾನಂದ ಇಂಡಸ್ಟ್ರಿ ಮೇಲೆ ಕ್ರಮ ಕೈಗೊಳ್ಳುವಂತೆ ತುರ್ತಾಗಿ ಕ್ರಮ ಕೈಗೊಳ್ಳಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಜೆಸ್ಕಾಂ ಉಪವಿಭಾಗ ಅಧಿಕಾರಿ ಅವರಿಗೆ ಪರಿಸರ ರಕ್ಷಣಾ ವೇದಿಕೆ ತಾಲೂಕು ಸಮಿತಿಯಿಂದ ಮನವಿ ಪತ್ರ ಸಲ್ಲಿಸಿ ಒತ್ತಾಯಿಸುತ್ತದೆ.

ಎಂ.ಗಂಗಾಧರ್ ಸಂಚಾಲಕರು,ಸಿಂಧನೂರು ಕನಕಪ್ಪ ಮುರಣಿ ಸಂಚಾಲಕರು 4ನೇ ಮೈಲ್ ಕ್ಯಾಂಪ್ ,ಸಿಂಧನೂರು

ಈ ಸಂಧರ್ಭದಲ್ಲಿ ಹೆಚ್ ಆರ್ ಹೊಸಮನಿ, ನರಸಪ್ಪ ಕಟ್ಟಿಮನಿ, ಮುದಿಯಪ್ಪ ಹೆಚ್ ಎನ್ ಕ್ಯಾಂಪ್, ಮಂಜುನಾಥ್ ದಿದ್ದಗಿ ಸೇರಿದಂತೆ ಇತರರು ಇದ್ದರು.

# ಉತ್ತಮ ಅಂಕ ಪಡೆಯುವುದು ಸುಲಭ: ಮರಿಯಪ್ಪ

• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ



ಎಸ್ ಎಲ್ ಸಿ ಮಕ್ಕಳಿಗೆ ಪರೀಕ್ಷೆಯ ಒತ್ತಡಗಳನ್ನು ಕಡಿಮೆ ಮಾಡವ ಸಲುವಾಗಿ ವಿಷಯಕ್ಕೆ ಸಂಬಂಧಿಸಿದಂತ ಪಠ್ಯಪುಸ್ತಕಗಳನ್ನು ಕೇಂದ್ರೀಕರಿಸಿ, ಹಿಂದಿನ ವರ್ಷದ ಪ್ರಶ್ನೆ ಪತ್ರಿಕೆಗಳನ್ನು ಅಭ್ಯಾಸ ಮಾಡಿ, ಸಮಯ ನಿರ್ವಹಣೆ ಮಾಡುವುದು ಅತ್ಯಗತ್ಯ. ನಿಯಮಿತ ಪುನರಾವರ್ತನೆ ಆರೋಗ್ಯಕರ ಆಹಾರ ಮತ್ತು ಪರೀಕ್ಷೆಯ ಮಾದರಿ (ಃಟಣಜಠಿಡಿಟಿಣ) ಅರ್ಥಮಾಡಿಕೊಳ್ಳುವುದು ಯಶಸ್ಸಿಗೆ ಮುಖ್ಯವಾಗಿದೆ.

ಪರೀಕ್ಷಾ ಕೆಲವು ಸಲಹೆಗಳು:-

ಪ್ರತಿದಿನ ಮಕ್ಕಳಿಗೆ ಬೆಳಗಿನ ಜಾವದಲ್ಲಿ ಬೇಗ ಎದ್ದು ವಿದ್ಯಾಭ್ಯಾಸ ಮಾಡುವ ಅಭ್ಯಾಸವನ್ನು ರೂಡಿ ಮಾಡಬೇಕು.

ವ್ಯವಸ್ಥಿತ ಅಧ್ಯಯನ ಯೋಜನೆ ಪ್ರತಿಯೊಂದು ವಿಷಯಕ್ಕೂ ನಿರ್ದಿಷ್ಟ ಸಮಯ ಮೀಸಲಿಡಿ. ಕಠಿಣ ವಿಷಯಗಳಿಗೆ ಹೆಚ್ಚಿನ ಸಮಯ ನೀಡಿ.

ಪಠ್ಯಪುಸ್ತಕಗಳೇ ಮುಖ್ಯ:-

ಕರ್ನಾಟಕ ಖಖಐಅ ಪಠ್ಯಕ್ರಮಕ್ಕೆ ಅಧಿಕೃತ ಪುಸ್ತಕಗಳನ್ನು ಓದಿ, ಮುಖ್ಯವಾದ ಅಧ್ಯಾಯಗಳಿಗೆ ಒತ್ತು ನೀಡಿ.

ಪಠ್ಯಪುಸ್ತಕದಲ್ಲಿರುವ ಪ್ರತಿಯೊಂದು ವಿಷಯವನ್ನು ಚೆನ್ನಾಗಿ ಅಭ್ಯಾಸ ಮಾಡಬೇಕು.

ಹಿಂದಿನ ವರ್ಷದ ಪತ್ರಿಕೆಗಳು:-

ಕಳೆದ ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುವುದರಿಂದ ಪರೀಕ್ಷೆಯ ಮಾದರಿ ಮತ್ತು ಸಮಯ ನಿರ್ವಹಣೆ ತಿಳಿಯುತ್ತದೆ.

ಪುನರಾವರ್ತನೆ ಓದಿದ ವಿಷಯಗಳನ್ನು ನೆನಪಿಟ್ಟುಕೊಳ್ಳಲು ನೋಟ್ಸ್ ಅಥವಾ ಮೈಂಡ್ ಮ್ಯಾಪ್‌ಗಳನ್ನು ಬಳಸಿ.

ಆರೋಗ್ಯ ನಿರ್ವಹಣೆ:-

ಪರೀಕ್ಷೆಯ ಒತ್ತಡ ಕಡಿಮೆ ಮಾಡಲು ಸಾಕಷ್ಟು ನಿದ್ರೆ ಮತ್ತು ಪೌಷ್ಟಿಕ ಆಹಾರ ತೆಗೆದುಕೊಳ್ಳಿ.

ಪಾಲಕ ಪೋಷಕರು ಮುಖ್ಯ ಗುರುಗಳು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಅತಿ ಹೆಚ್ಚು ಕಾಳಜಿ ವಹಿಸಬೇಕು.

ಪರೀಕ್ಷಾ ಹಾಲ್‌ನಲ್ಲಿ :-

ಪ್ರಶ್ನೆ ಪತ್ರಿಕೆ ಓದಲು 15 ನಿಮಿಷಗಳ ಸಮಯವನ್ನು ಸರಿಯಾಗಿ ಬಳಸಿ.

ಗೊತ್ತಿರುವ ಪ್ರಶ್ನೆಗಳಿಗೆ ಮೊದಲು ಉತ್ತರಿಸಿ.

ಪರೀಕ್ಷಾ ಕೊಟ್ಟಡಿಯಲ್ಲಿ ಅನಾವಶ್ಯಕ ವಿಚಾರಗಳನ್ನು ಮಾತನಾಡಬಾರದು.

ಐದು ನಿಮಿಷ ಕಾಲ ಕೊಟ್ಟಿರುವ ಪ್ರಶ್ನೆ ಪತ್ರಿಕೆಯ ವಿಷಯದ ಬಗ್ಗೆ ಚಿಂತನೆ ಮಾಡಬೇಕು.

ಸುಲಭ ಮತ್ತು ನೇರ ಉತ್ತರಗಳನ್ನು ಮೊದಲು ಉತ್ತರಿಸಬೇಕು.

ಕಠಿಣ ಉತ್ತರವನ್ನು ಬರೆಯಲು ಪ್ರಯತ್ನಿಸಬಾರದು.

ಪ್ರಶ್ನೆ ಪತ್ರಿಕೆ ನೋಡಿ ಯಾವುದೇ ರೀತಿಯ ಗಾಬರಿಗೆ ಒಳಗಾಗಬಾರದು.

ಪ್ರತಿಯೊಂದು ಪ್ರಶ್ನೆಯನ್ನು ಚೆನ್ನಾಗಿ ಓದಿ ಅರ್ಥೈಸಿಕೊಳ್ಳಬೇಕು.

ಅಕ್ಷರಗಳನ್ನು ಸ್ಪಷ್ಟವಾಗಿ ಸುಂದರವಾಗಿ ಬರೆಯಬೇಕು.

ಉತ್ತರ ಪತ್ರಿಕೆಯಲ್ಲಿ ಚಿತ್ತುಕಾಟು ಮಾಡುವುದನ್ನು ಕಡಿಮೆ ಮಾಡಬೇಕು.

ಪರೀಕ್ಷಾ ಸಮಯದಲ್ಲಿ ಅನಾವಶ್ಯಕವಾಗಿ ಇದರ ಜೊತೆ ಮಾತನಾಡಬಾರದು.

ಪ್ರತಿಯೊಂದು ಪ್ರಶ್ನೆಗೂ ಉತ್ತರ ಬರೆಯಲು ಪ್ರಯತ್ನಿಸಬೇಕು

# ಪಿಎಸ್ಐ ನೇಮಕಾತಿ ಕಿಂಗ್ ಪಿನ್ ಆರ್. ಡಿ ಪಾಟೀಲ್‌ಗೆ ಜಾಮೀನು ನಿರಾಕರಣೆ

**ಕಲಬುರಗಿ:** ಪಿಎಸ್ಐ ನೇಮಕಾತಿಯೂ ಸೇರಿ ಹಲವು ನೇಮಕಾತಿ ಹಗರಣಗಳ ಕಿಂಗ್‌ಪಿನ್ ಎನ್ನಲಾದ ಆರ್.ಡಿ. ಪಾಟೀಲ್ ಅಲಿಯಾಸ್ ರುದ್ರಗೌಡ ಪಾಟೀಲ್‌ಗೆ ಹೈಕೋರ್ಟ್ ಜಾಮೀನು ನಿರಾಕರಿಸಿದೆ.



ಕರ್ನಾಟಕ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ (ಕೊಕಾ) ಅಡಿ 2023ರಲ್ಲಿ ಬಂಧನಕ್ಕೊಳಗಾಗಿ ಸದ್ಯ ಮೈಸೂರು ಕಾರಾಗೃಹದಲ್ಲಿರುವ ರುದ್ರಗೌಡ ಪಾಟೀಲ್ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಕಲಬುರಗಿಯಲ್ಲಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ. ರಾಜೇಶ್ ರೈ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ. ಅರ್ಜಿದಾರರು ಮೇಲ್ನೋಟಕ್ಕೆ ಹಲವು ನೇಮಕಾತಿ ಅಕ್ರಮಗಳಲ್ಲಿ ಭಾಗಿಯಾಗಿರುವುದು ಕಂಡು ಬಂದಿದೆ. ಅವರಿಗೆ ಅಪರಾಧವೆಸಗುವುದೇ ಅಭ್ಯಾಸವಾಗಿದ್ದು (ಹ್ಯಾಬಿಚುಯಲ್ ಅಫೆಂಡರ್), ಜಾಮೀನು ನೀಡಲು ಸಾಧ್ಯವಿಲ್ಲ ಎಂದು ನ್ಯಾಯಪೀಠ ಆದೇಶಿಸಿದೆ.

# ಆನೆ-ಮಾನವ ಸಂಘರ್ಷ ಶಾಶ್ವತ ಪರಿಹಾರಕ್ಕೆ ಪ್ರಾಮಾಣಿಕ ಯತ್ನ



**ಮಡಿಕೇರಿ:** ಆನೆ-ಮಾನವ ಸಂಘರ್ಷ ನಿಯಂತ್ರಿಸಲು 2025-26ನೇ ಸಾಲಿನಲ್ಲಿ ಮಡಿಕೇರಿ ವಿಭಾಗಕ್ಕೆ 7 ಕಿ.ಮೀ ಮತ್ತು ನಾಗರಹೊಳೆ ವಿಭಾಗಕ್ಕೆ 20 ಕಿ.ಮೀ. ರೈಲು ಹಳಿ ತಡೆಗೋಡೆ ಮಂಜೂರಾಗಿದ್ದು, ಶೀಘ್ರ ಕಾಮಗಾರಿ ಆರಂಭಿಸಲಾಗುವುದು ಎಂದು ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ವಿಧಾನ ಪರಿಷತ್ತಿಗಿಂದು ತಿಳಿಸಿದ್ದಾರೆ.

ಶೂನ್ಯವೇಳೆಯಲ್ಲಿ ಸುಜಾ ಕುಶಾಲಪ್ಪ ಅವರ ಪ್ರಸ್ತಾಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ಫೆ.28ರಂದು ಕಾಡಿನಂಚಿನ ನಿವಾಸಿ 17 ವರ್ಷದ ಬಾಲಕಿ ಆನೆ ದಾಳಿಯಿಂದ ಮೃತಪಟ್ಟಿದ್ದರೆ, ಮಾ.9ರಂದು ಕಾಡಿನೊಳಗೇ ವಾಸಿಸುತ್ತಿದ್ದ 55 ವರ್ಷದ ಬುಡಕಟ್ಟು ಮಹಿಳೆ ಸಾವಿಗೀಡಾಗಿದ್ದಾರೆ ಇದು ಅತ್ಯಂತ ನೋವಿನ ಸಂಗತಿ ಎಂದರು. ಜೀವ ಅತ್ಯಂತ ಅಮೂಲ್ಯವಾದ್ದು, ಇದಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ಅರಣ್ಯ ಇಲಾಖೆ ಮಾನವ-ವನ್ಯಜೀವಿ ಸಂಘರ್ಷ ತಡೆಯಲು ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ. ಆನೆ ನಿಗ್ರಹ ಕಂದಕ, ಸೌರ ವಿದ್ಯುತ್ ಬೇಲಿ ನಿರ್ವಹಣೆ ಮಾಡಲಾಗುತ್ತಿದೆ. 2 ಆನೆ ಕಾರ್ಯಪಡೆ ಕಾರ್ಯನಿರ್ವಹಿಸುತ್ತಿದೆ. ಈಗ 2 ಪುಂಡಾನೆಗಳ ಸೆರೆಗೆ ಮುಖ್ಯ ವನ್ಯಜೀವಿ ಪರಿಪಾಲಕರು ಆದೇಶ ನೀಡಿದ್ದಾರೆ ಎಂದು ತಿಳಿಸಿದರು. ಈ ಎರಡೂ ಪ್ರಕರಣದಲ್ಲಿ ಈಗಾಗಲೇ 5 ಲಕ್ಷ ರೂ. ಪರಿಹಾರವನ್ನು ಮೃತರ ಹತ್ತಿರದ ಬಂಧುಗಳಿಗೆ ವಿತರಿಸಲಾಗಿದ್ದು, ವಾರದೊಳಗೆ ಉಳಿಕೆ ತಲಾ 15 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ತಿಳಿಸಿದರು. ಆನೆ-ಮಾನವ ಸಂಘರ್ಷ ನಿಯಂತ್ರಿಸಲು ಶಾಶ್ವತ ಪರಿಹಾರ ಕ್ರಮಗಳ ಬಗ್ಗೆಯೂ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.



**ಬಸವಕಲ್ಯಾಣ: ತಾಲೂಕಿನ ಗದಲೇಗಾಂವ ಬಿ. ಗ್ರಾಮದಲ್ಲಿ ಸೈಲಾನಿ ಬಾಬಾ 10ನೇ ಜಾತ್ರಾ ಮಹೋತ್ಸವ ನಿಮಿತ್ಯ ಹಾರಕೂಡ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಶ್ರೀ ಸೈಲಾನಿ ಬಾಬಾ ಮಜಾರಕ್ಕೆ ಗಂಧ ಲೇಪನ ಮಾಡಿದರು. ಈ ಸಂದರ್ಭದಲ್ಲಿ ಮಲ್ಲಿನಾಥ ಹಿರೇಮಠ ಹಾರಕೂಡ, ಮಾತೋಶ್ರೀ ಫಾತೀಮಾಬಿ ಸೇರಿದಂತೆ ಗದಲೇಗಾಂವ ಬಿ. ಗ್ರಾಮದ ಮುಖಂಡರು ಉಪಸ್ಥಿತರಿದ್ದರು.**

# ಅಕ್ರಮ ಮರುಳು ಸಾಗಾಣಿಕೆ ವಿರುದ್ಧ ದೂರು ದಾಖಲಿಸಿ, ರೈತರಿಗೆ ಪರಿಹಾರ ಕೊಡಿ



**ಯಾದಗಿರಿ:** ಶಹಾಪುರ ತಾಲ್ಲೂಕಿನ ಟೋಣ್ಣೂರು ಗ್ರಾಮದ ಪಕ್ಕದಲ್ಲಿರುವ ಕೃಷ್ಣಾ ನದಿ ಭಾಗದ ನಡುವೆ ಸಿಮೆಂಟಿನ ಪೈಪ್‌ಗಳನ್ನು ಅಳವಡಿಸಿ, ಅದರ ಮೇಲೆ ಮರಮ್ ಹಾಕಿಸಿ ಸುಮಾರು ನೂರಾರು ಟಿಪ್ಪರುಗಳು ಮರಳನ್ನು ತುಂಬಿಕೊಂಡು ಬೇರೆ ಬೇರೆ ಸ್ಥಳಗಳಲ್ಲಿ ಸುಮಾರು ಸಾವಿರಾರು ಟ್ರಿಪ್‌ಗಳ ಅಕ್ರಮ ಮರಳನ್ನು ರಾಜಾರೋಷವಾಗಿ ಅಕ್ರಮವಾಗಿ ಸ್ಟಾಕ್ ಮಾಡಿಕೊಂಡಿರುತ್ತಾರೆ.

ಅಕ್ರಮ ಮರಳು ಸಾಗಾಣಿಕೆಯ ರಸ್ತೆಯ ಬದಿಯಲ್ಲಿರುವ ಜಮೀನುಗಳಲ್ಲಿ ರೈತರು ಬೆಳೆದ ಬೆಳೆಗಳು ನಾಶಗೊಂಡು ರೈತರು ನಷ್ಟ ಅನುಭವಿಸಿರುತ್ತಾರೆ. ಹಗಲು ರಾತ್ರಿ ಎನ್ನದೆ ಆಕ್ರಮ ಮರಳು ಸಾಗಾಣಿಕೆಯಿಂದ ಗ್ರಾಮಗಳಲ್ಲಿರುವ ಸಾರ್ವಜನಿಕರಿಗೆ ತೊಂದರೆಯುಂಟಾಗಿರುತ್ತದೆ. ಕಾರಣ ಶಹಾಪುರ ತಾಲ್ಲೂಕಿನ ನದಿ ತೀರದಿಂದ ಅಕ್ರಮ ಮರಳು ಸಾಗಾಣಿಕೆ, ಶೇಖರಣೆ ಮಾಡಿಕೊಂಡು ನಿರಂತರವಾಗಿ ಅಕ್ರಮ ಸಾಗಾಟದಿಂದ ರೈತ ಬೆಳೆಗಳ ನಾಶ ಮತ್ತು ಸಾರ್ವಜನಿಕರಿಗೆ ತೊಂದರೆಯುಂಟು ಮಾಡುತ್ತಿರುವ ಅಕ್ರಮ ಮರಳು ಸಾಗಾಣಿಕೆಯನ್ನು ಸಂಪೂರ್ಣವಾಗಿ ತಡೆದು ಇದಕ್ಕೆ ಕಾರಣರಾದ ಡಕ್ಕದ ಮಾಲೀಕರು ಬಸನಗೌಡ ಮಲ್ಲಾಬಾದಿ ಟೋಣ್ಣೂರು, ವಾಹನ ಮಾಲೀಕರು ಮತ್ತು ಚಾಲಕರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಸೂಕ್ತ ಕಾನೂನು ಕ್ರಮ ವಹಿಸುವಂತೆ ಅಂಬೇಡ್ಕರ್ ಸ್ವಾಭಿಮಾನಿ ಸೇನೆ ಜಿಲ್ಲಾ ಸಮಿತಿ ರಾಯಚೂರು, ಒತ್ತಾಯ ಮಾಡಿದರು.

ಈ ಸಂದರ್ಭದಲ್ಲಿ ಅಂಬೇಡ್ಕರ್ ಸ್ವಾಭಿಮಾನಿ ಸೇನೆ ಜಿಲ್ಲಾಧ್ಯಕ್ಷರಾದ ಮಲ್ಲಪ್ಪ ಗೌಡೂರು, ರವಿ ಬಾಗೂರು, ಅಂಬರೇಶ ಯರಮರಸ್ ರಾ.ಜಿ.ಪ್ರ. ಕಾರ್ಯದರ್ಶಿ, ಗಂಗಪ್ಪ ಜೋಳದಹೆಡ್ಗಿ ದೇ.ತಾ. ಅಧ್ಯಕ್ಷರು, ದುರುಗಪ್ಪ ಸಮುದ್ರ ತಾ. ಉಪಾಧ್ಯಕ್ಷರು. ಮತ್ತಿತರು ಭಾಗಿಯಾಗಿದ್ದರು.

# ಕೈಗಾರಿಕಾ ಬೆಳವಣಿಗೆಗೆ ಇಂಬು ನೀಡಲು ಸಮಿತಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

'ಸುಲಲಿತ ಕೈಗಾರಿಕಾ ಸಂಸ್ಕೃತಿ'ಗೆ ಮತ್ತಷ್ಟು ಬಲ ತುಂಬುವ ಉದ್ದೇಶದಿಂದ ಸರಕಾರದ ಉನ್ನತ ಅಧಿಕಾರಿ ಮತ್ತು ಖಾಸಗಿ ಉದ್ಯಮಿಗಳನ್ನು ಒಳಗೊಂಡ ಜಂಟಿ ಸಮಾಲೋಚನಾ ಸಮಿತಿಯನ್ನು ರಚಿಸಲಾಗುವುದು. ಇದರಿಂದ ಕೈಗಾರಿಕಾ ರಂಗಕ್ಕೆ ಸಂಬಂಧಿಸಿದ ಅಗತ್ಯ ಪ್ರಕ್ರಿಯೆ ಮುಂತಾದವು ತ್ವರಿತವಾಗಿ ಪರಿಹಾರ ಕಾಣಲಿವೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಹೇಳಿದ್ದಾರೆ.

ಮಂಗಳವಾರ ಇಲ್ಲಿನ ಖಾಸಗಿ ಹೋಟೆಲಿನಲ್ಲಿ ನಡೆದ ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ರಾಜ್ಯ ಶಾಖೆಯ ವಾರ್ಷಿಕ ಸಭೆಯಲ್ಲಿ ಅವರು ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, 'ಕೈಗಾರಿಕಾ ವಲಯದಲ್ಲಿ ಕಂಡುಬರುವ ಸಮಸ್ಯೆಗಳಿಗೆ ಕ್ಷಿಪ್ರವಾಗಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಕೇರಳದಲ್ಲಿ ಸರಕಾರದ ಮುಖ್ಯ ಕಾರ್ಯದರ್ಶಿ ಮತ್ತು ಉದ್ಯಮಿಗಳಿಬ್ಬರೂ ಇರುವ ವೇದಿಕೆ ಇದ್ದು, ಅದು ಅತ್ಯುತ್ತಮವಾಗಿ ಕೆಲಸ ಮಾಡುತ್ತಿದೆ ಎನ್ನುವ ಸಂಗತಿಯನ್ನು ಸಿಐಐ ಪ್ರತಿನಿಧಿಗಳು ಗಮನಕ್ಕೆ ತಂದಿದ್ದಾರೆ. ಇದನ್ನು ನಮ್ಮಲ್ಲೂ ಅಳವಡಿಸಿಕೊಳ್ಳಲಾಗುವುದು. ಒಟ್ಟಿನಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಬೇಕಾದ ರಚನಾತ್ಮಕ ಕ್ರಮಗಳು ಎಲ್ಲೇ




ಇದ್ದರೂ ಅವುಗಳನ್ನು ನಮ್ಮದನ್ನಾಗಿಸಿಕೊಳ್ಳಲು ಮುಕ್ತ ಮನಸ್ಸಿದೆ' ಎಂದಿದ್ದಾರೆ.

ರಾಜ್ಯದಲ್ಲಿ ಈಗಾಗಲೇ ದಕ್ಷ ಕೈಗಾರಿಕಾ ನೀತಿ, ಇಂಧನ ನೀತಿ, ಏಕಗವಾಕ್ಷಿ ವ್ಯವಸ್ಥೆ, ಚಾಟ್-ಬಾಟ್, ಏಕೀಕೃತ ಸೇವೆಗಳ ಜಾಲ ಮುಂತಾದ ಉಪಕ್ರಮಗಳನ್ನು ಜಾರಿಗೆ ತರಲಾಗಿದೆ. ಒಟ್ಟಿನಲ್ಲಿ ರಾಜ್ಯವು ಕೈಗಾರಿಕಾ ಬೆಳವಣಿಗೆಯಲ್ಲಿ ಅಗ್ರಪಂಕ್ತಿಯಲ್ಲಿ ಇರುವಂತೆ ನೋಡಿಕೊಳ್ಳಲು ಬೇಕಾದ ಅಗತ್ಯ ಕ್ರಮಗಳನ್ನು ವಿಳಂಬ ಮಾಡದೆ ತರಲಾಗುವುದು. ನಾವು ಸುಲಲಿತ ವಾಣಿಜ್ಯ ವಹಿವಾಟಿನ ಜತೆ-ಗೆ ನಾವೀನ್ಯತೆಯ ವೇಗಕ್ಕೂ (ಸ್ಪೀಡ್ ಆಫ್ ಇನ್ನೋವೇಶನ್) ಆದ್ಯತೆ ಕೊಟ್ಟಿದ್ದೇವೆ ಎಂದು ಅವರು ತಿಳಿಸಿದ್ದಾರೆ.

ಕೃತಕ ಬುದ್ಧಿಮತ್ತೆ ಕ್ಷೇತ್ರದ ಉತ್ತೇಜನಕ್ಕೆ ಸರಕಾರವು 1,386 ಕೋಟಿ ರೂ. ವೆಚ್ಚದಲ್ಲಿ 'ಕೆ-ಕ್ವೆಸ್ಟ್' ಯೋಜನೆಯನ್ನು ಮತ್ತು 233 ಕೋಟಿ ರೂ. ವೆಚ್ಚದಲ್ಲಿ ವಿಜ್ಞಾನ ನಗರ ಯೋಜನೆಯನ್ನು 2026-27ರ ಬಜೆಟ್ಟಿನಲ್ಲಿ ಘೋಷಿಸಿದೆ. ಜತೆಗೆ 'ಕ್ಯಾಟ್ಸ್' (ಸೆಂಟರ್ ಫಾರ್ ಅಪ್ಲೈಡ್ ಎಐ ಫಾರ್ ಟೆಕ್-ಸೊಲ್ಯೂಷನ್ಸ್) ಸಂಸ್ಥೆಗೆ 50 ಕೋಟಿ ರೂ. ಕೊಡಲಾಗುತ್ತಿದೆ. ಇದಕ್ಕೆ ಪೂರಕವಾಗಿ ಬೆಂಗಳೂರಿನಲ್ಲಿರುವ ಕೆಐಎಬಿಡಿ ಏರೋಸ್ಪೇಸ್ ಪಾರ್ಕ್ ಪ್ರದೇಶದಲ್ಲಿ ಏರೋಸ್ಪೇಸ್ ಕಾಮನ್ ಫೆಸಿಲಿಟಿ ಸೆಂಟರನ್ನು ಸ್ಥಾಪಿಸಲಾಗುತ್ತಿದೆ ಎಂದು ಅವರು ವಿವರಿಸಿದ್ದಾರೆ.

ಐಟಿ ಮತ್ತು ಆಧುನಿಕ ಉತ್ಪಾದನೆಯನ್ನು ಉತ್ತೇಜಿಸಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ಡಾಬಸಪೇಟೆ-ದೊಡ್ಡಬಳ್ಳಾಪುರ ಸಮೀಪ ಅಸ್ತಿತ್ವಕ್ಕೆ ಬರುತ್ತಿರುವ ಕ್ವಿನ್ ಸಿಟಿಯಲ್ಲಿ 200 ಎಕರೆ ಜಾಗದಲ್ಲಿ ಸೆಮಿಕಂಡಕ್ಟರ್ ಪಾರ್ಕ್ ಸ್ಥಾಪಿಸಲಾಗುವುದು. ಈ ಸಿಟಿಯ ಮೊದಲ ಹಂತವು ಈ ವರ್ಷದ ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳಲಿದೆ. ಇದಲ್ಲದೆ ಹೆಸರಘಟ್ಟದ ಹತ್ತಿರ ಭಾರತದ ಪ್ರಪ್ರಥಮ ಕ್ವಾಂಟಂ ಸಿಟಿ ಮತ್ತು ಬಿಡದಿ ಬಳಿ 'ಎಐ ಸಿಟಿ' ಅಭಿವೃದ್ಧಿಪಡಿಸಲಾಗುವುದು. ಸದ್ಯಕ್ಕೆ ಭಾರತವು ಎಐ ಕ್ಷೇತ್ರದಲ್ಲಿ 200 ಬಿಲಿಯನ್ ಡಾಲರ್ ಗೂ ಹೆಚ್ಚು ಮೌಲ್ಯದ ವಹಿವಾಟು ನಡೆಸುತ್ತಿದ್ದು, ಇದರಲ್ಲಿ ರಾಜ್ಯವು ಸಿಂಹಪಾಲು ಕೊಡುಗೆ ನೀಡುತ್ತಿದೆ ಎಂದು ಪಾಟೀಲ ನುಡಿದಿದ್ದಾರೆ.

ಕಾರ್ಯಕ್ರಮದಲ್ಲಿ ಮುತ್ತೂಟ್ ಫಿನ್ ಕಾರ್ಪ್ ಲಿಮಿಟೆಡ್ ಅಧ್ಯಕ್ಷ ಥಾಮಸ್ ಜಾನ್ ಮುತ್ತೂಟ್, ಸಿಐಐ ರಾಜ್ಯ ಘಟಕದ ಅಧ್ಯಕ್ಷ ರವೀಂದ್ರ ಶ್ರೀಕಂಠನ್, ಉಪಾಧ್ಯಕ್ಷ ಗುರುಪ್ರಸಾದ್ ಮುದಲಾಪುರ ಮುಂತಾದವರು ಉಪಸ್ಥಿತರಿದ್ದರು.

# ನಿರ್ಗತಿಕ ಮಹಿಳೆಗೆ ವಸತಿ ಹಸ್ತಾಂತರ

• ಮಲ್ಲಮ್ಮ ನುಡಿ ವಾರ್ತೆ ಚಿತ್ತಾಪುರ

ತಾಲೂಕಿನ ಅಳ್ಳೊಳ್ಳಿ ಗ್ರಾಮದ ನಿರ್ಗತಿಕ ಮಹಿಳೆಯೊಬ್ಬರಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಅಧಿಕಾರಿಗಳು "ವಾತ್ಸಲ್ಯ ಮನೆ" ಯೋಜನೆಯಲ್ಲಿ ನಿರ್ಮಿಸಲಾದ ಮನೆ ಹಸ್ತಾಂತರ ಮಾಡಿದರು.

2025-26ನೇ ಸಾಲಿನ ಮಾಶಾಸನ ಫಲಾನುಭವಿ "ವಾತ್ಸಲ್ಯ ಮನೆ" ಈ ಯೋಜನೆಯಲ್ಲಿ 1.35 ಲಕ್ಷ ವೆಚ್ಚದಲ್ಲಿ ಮನೆ ನಿರ್ಮಿಸಿ ಅಳ್ಳೊಳ್ಳಿ ಗ್ರಾಮದ ನಿವಾಸಿ ಮಹಾದೇವಿ ಮುತ್ತಗಿ ಎನ್ನುವ ಮಹಿಳೆಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ವಸತಿ ಸೌಲಭ್ಯ ನೀಡಿ ನೆರವಾಗಿದೆ.

ನಂತರ ಮಾತನಾಡಿದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಕ್ಷೇತ್ರ ಯೋಜನಾಧಿಕಾರಿ ಗುರುರಾಜ್ ಬಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಸಂಸ್ಥಾಪಕ ಪೂಜ್ಯ ಡಾ.ಡಿ.ವೀರೇಂದ್ರ ಹೆಗ್ಗಡೆ ಹಾಗೂ ಮಾಲಾಶ್ರೀ ಹೇಮಾವತಿ ಅಮ್ಮನವರ ಆಶಯದಂತೆ ಅನೇಕ ಬಡ ಕುಟುಂಬಗಳಿಗೆ ಆಸರೆ ನೀಡುವ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಧರ್ಮಸ್ಥಳ ಸಂಸ್ಥೆ ಹೆಚ್ಚಿನ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ



ನಿರಂತರ ಸಮಾಜಮುಖಿ ಕಾರ್ಯಗಳು ಮಾಡುತ್ತಿದೆ ಇದರಿಂದ ಜನರಿಗೆ ತುಂಬಾ ಅನುಕೂಲವಾಗಿದೆ ಎಂದು ಹೇಳಿದರು.

ಅಳ್ಳೊಳ್ಳಿ ಗ್ರಾಪಂ ಕಾರ್ಯದರ್ಶಿ ಜಕ್ಕಪ್ಪ ಪೂಜಾರಿ, ಗ್ರಾಮದ ಮುಖಂಡರಾದ ಶರಣು ಆಡಕಿ, ಚನ್ನಪ್ಪ ಮುತ್ತಗಿ, ಚಂದ್ರು ರೆಡ್ಡಿ, ಯಂಕಪ್ಪ ವಿ.ಕಟ್ಟಿಮನಿ, ಜ್ಞಾನವಿಕಾಸ ಯೋಜನಾಧಿಕಾರಿ ಜ್ಯೋತಿ ಜೋಳದ, ಸಮನ್ವಯಾಧಿಕಾರಿ ಅರ್ಚನ ಕುಲಗುಡೆ, ವಲಯ ಮೇಲ್ವಿಚಾರಕ ಮಂಜುನಾಥ್ ಹಿರೇಮಠ, ಸೇವಾ ಪ್ರತಿನಿಧಿಗಳಾದ ಅಕ್ಷತಾ ಜಮಾದಾರ, ಕ್ಯಾದಿಗೆ ಹಳಬಣ್ಣರ, ಅಂಬಿಕಾ, ಭಾಗ್ಯಶ್ರೀ ತಿಂಗಳಿಗೆ ಸೇರಿದಂತೆ ಸ್ಥಳೀಯ ಸಂಸ್ಥೆಯ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಮಾರ್ಚ್ 16ರಂದು ಜಿಲ್ಲಾ ಮಟ್ಟದ ಸಮಾವೇಶ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ರಾಜ್ಯದಲ್ಲಿ ಕೆಪಿಎಸ್-ಮ್ಯಾಗ್ನೆಟ್ ಯೋಜನೆಯಡಿ ಸಾವಿರಾರು ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವ ನಿರ್ಧಾರಕ್ಕೆ ವಿರೋಧ ವ್ಯಕ್ತಪಡಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಶನ್ (ಎಐಡಿಎಸ್ಒ) ವಿಜಯಪುರ ಜಿಲ್ಲಾ ಸಮಿತಿ ಮಾರ್ಚ್ 16ರಂದು ಜಿಲ್ಲಾ ಮಟ್ಟದ ಸಮಾವೇಶವನ್ನು ಆಯೋಜಿಸಿದೆ.

ಸಂಘಟನೆಯ ಪ್ರಕಾರ, ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯದಲ್ಲಿ ಸುಮಾರು 800 ಕೆಪಿಎಸ್-ಮ್ಯಾಗ್ನೆಟ್ ಶಾಲೆಗಳನ್ನು ಆರಂಭಿಸಲು ಯೋಜನೆ ರೂಪಿಸಿದ್ದು, ಈ ಶಾಲೆಗಳ 3ರಿಂದ 5 ಕಿಲೋಮೀಟರ್ ವ್ಯಾಪ್ತಿಯೊಳಗಿನ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಮಾದರಿಯಲ್ಲಿ ಚನ್ನಪಟ್ಟಣ ತಾಲೂಕಿನ ಹೊಂಗನೂರು ಸರ್ಕಾರಿ ಶಾಲೆಯನ್ನು ಮ್ಯಾಗ್ನೆಟ್ ಶಾಲೆಯಾಗಿ ಗುರುತಿಸಲಾಗಿದ್ದು, ಅದರ ವ್ಯಾಪ್ತಿಯಲ್ಲಿರುವ ಹಲವಾರು ಸಣ್ಣ ಸರ್ಕಾರಿ ಶಾಲೆಗಳನ್ನು ಅದಕ್ಕೆ ವಿಲೀನಗೊಳಿಸುವಂತೆ ಆದೇಶ ನೀಡಲಾಗಿದೆ ಎಂದು ತಿಳಿಸಿದೆ. ಈ ಕ್ರಮದಿಂದ ಗ್ರಾಮೀಣ ಪ್ರದೇಶದ ಜನರಲ್ಲಿ ಆತಂಕ ಉಂಟಾಗಿದೆ. ತಮ್ಮ ಊರಿನ ಶಾಲೆಗಳು ಉಳಿಯಬೇಕು ಹಾಗೂ ಅವುಗಳನ್ನು ಅಭಿವೃದ್ಧಿಪಡಿಸಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸುತ್ತಿದ್ದಾರೆ




ಎಂದು ಸಂಘಟನೆ ತಿಳಿಸಿದೆ. ರಾಜ್ಯ ಸರ್ಕಾರದ ಉದ್ದೇಶ ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಸುಮಾರು 6,000 ಕೆಪಿಎಸ್-ಮ್ಯಾಗ್ನೆಟ್ ಶಾಲೆಗಳನ್ನು ಸ್ಥಾಪಿಸುವುದಾಗಿದ್ದು, ಇದರಿಂದ ಸರ್ಕಾರಿ ಪದವಿ ಕಾಲೇಜುಗಳನ್ನೂ ಸೇರಿ ಸುಮಾರು 40,000 ಸರ್ಕಾರಿ ಶಾಲೆಗಳು ಮುಚ್ಚುವ ಅಪಾಯವಿದೆ ಎಂದು ಎಐಡಿಎಸ್ಒ ಆತಂಕ ವ್ಯಕ್ತಪಡಿಸಿದೆ.

ಈ ಹಿನ್ನೆಲೆಯಲ್ಲಿ ಮಾರ್ಚ್ 16ರಂದು ಬೆಳಿಗ್ಗೆ 11 ಗಂಟೆಗೆ ವಿಜಯಪುರ ಕೇಂದ್ರ ಬಸ್ ನಿಲ್ದಾಣದ ಎದುರಿನ ಸಹಕಾರಿ ಯೂನಿಯನ್ ಹಾಲ್‌ನಲ್ಲಿ ಜಿಲ್ಲಾ ಮಟ್ಟದ ಸಮಾವೇಶ ನಡೆಯಲಿದ್ದು, ಜಿಲ್ಲೆಯ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಭಾಗವಹಿಸಲು ಸಂಘಟನೆ ಕರೆ ನೀಡಿದೆ.

# ಶ್ರೀ ಶರಣಬಸವೇಶ್ವರ 39ನೇ ವರ್ಷದ ಪುರಾಣ ಮಹಾಮಂಗಲೋತ್ಸವ




• ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ

ಪ್ರತಿ ವರ್ಷದ ಪದ್ಧತಿಯಂತೆ ನಿರಂತರವಾಗಿ ಶರಣಬಸವೇಶ್ವರ ಪುರಾಣ ಕಾರ್ಯಕ್ರಮ ಸಾಗಿಬಂದಿತು. ಶ್ರೀ ಶರಣಬಸವೇಶ್ವರ 39 ನೇ ವರ್ಷದ ಪುರಾಣ ಮಹಾ ಮಂಗಲವಾಗಿತು.

ಪ್ರವಚನಕಾರ ಕಲ್ಲೂರಿನ ಕಲ್ಲಯ್ಯ ಶಾಸ್ತ್ರೀ, ಸಂಗೀತ ಬಳಗದ ಕಲಾವಿದರಾದ ಇಂದರಗಿಯ ಹನುಮಂತಪ್ಪ ಎಸ್, ಚಿಕ್ಕಮ್ಯಾಗೇರಿಯ ನೀಲಕಂಠಪ್ಪ ರೋಡ್ಡರ ಸಂಗೀತ ಸೇವೆ ನೀಡಿದರು. ಬ್ರಾಹ್ಮಿ ಮುಹೂರ್ತದಲ್ಲಿ ಗ್ರಾಮದ ಶ್ರೀ ಪ್ಯಾಟಿ ಬಸವೇಶ್ವರ, ಶ್ರೀ ಶರಣಬಸವೇಶ್ವರ ಮೂರ್ತಿಗೆ ರುದ್ರಾಭಿಷೇಕ ಹಾಗು ಸಹಸ್ರ ಬಿಲ್ವಾರ್ಚನೆ ಜರುಗಿದ ಬಳಿಕ ಸಾಮೂಹಿಕ ವಿವಾಹಗಳು ಜರುಗಿದವು.

ಈ ವೇಳೆ ಮುಖಂಡರಾದ ಬಸಪ್ಪ ಹಳ್ಳದ, ಕಳಕನಗೌಡ ಪಾಟೀಲ, ಶರಣಪ್ಪ ಈಳಗೇರ, ಶೇಷಗಿರಿರಾವ್ ಕುಲಕರ್ಣಿ, ನಿಂಗಪ್ಪ ಈಳಗೇರ, ತಿರುಗುಣೆಪ್ಪ ಸಾಸ್ವಿಹಾಳ, ದುರಗಪ್ಪ ಪರಂಗಿ, ಪರಸಪ್ಪ ವಜ್ರಬಂಡಿ, ಸುರೇಶ ಹಳ್ಳದ ಯಮನೂರ ಡೋಳ್ಳಿನ, ಭೀಮಣ್ಣ ಚಿಕ್ಕಗೌಡ್ರ ಗ್ರಾಮದ ಗುರು ಹಿರಿಯರು ಭಾಗವಹಿಸಿದ್ದರು.




**ಬಸವಕಲ್ಯಾಣ: ಇಲ್ಲಿನ ತಿಪುರಾಂತಿನ ಸಂಸ್ಥಾನ ಗವಿಮಠದಲ್ಲಿ ಎಪ್ರಿಲ್ 7 ರಂದು ಶ್ರೀ ಘನಲಿಂಗ ರುದ್ರಮುನಿ ಜಾತ್ರಾ ಮಹೋತ್ಸವ ಹಾಗೂ 2026ನೇ ಸಾಲಿನ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರಧಾನ ಸಮಾರಂಭದ ಕರಪತ್ರವು ಪೂಜ್ಯ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಶರಣಪ್ಪ ಬಿರಾದಾರ, ಬಸವಂತಪ್ಪಾ ಲವಾರೆ, ಸಂಜುಕುಮಾರ ಜಾಧವ, ವೀರಶೆಟ್ಟಿ ಎಂ.ಪಾಟೀಲ, ರಾಕೇಶ ಪುರವಂತ, ಸವಿತಾ ರಮೇಶ ಸ್ವಾಮಿ, ಸರಸ್ವತಿ ಬೆಂಬಳೆ, ಸುರೇಖಾ ಸಜ್ಜನಶೆಟ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.**

# ಸಂಕುಚಿತ ಮನಸಿನ ಸೋಗಿನ ಸಜ್ಜನಿಕೆ



**ಭೋಗ-ಐಭೋಗ**
• ವೀರಣ್ಣ ಕಲಕೇರಿ
ಪತ್ರಕರ್ತ ಸಾಹಿತಿ, ಕೆಂಭಾವಿ

"ಒಬ್ಬರ ಪ್ರತಿಭೆ ಅಥವಾ ವ್ಯಕ್ತಿತ್ವವನ್ನು ಪ್ರಶಂಸಿಸಲು ಹಲವರು ಇಚ್ಛಿಸುವುದಿಲ್ಲ, ಏಕೆಂದರೆ ಎಲ್ಲಿ ತಮಗೆ ಹಿನ್ನಡೆಯಾಗುತ್ತದೆಯೋ ಎಂಬ ಭಯ ಅವರನ್ನು ಸದಾ ಕಾಡುತ್ತಿರುತ್ತದೆ." ಎಂಬ ಕವಿವಾಣಿಯ ಸಾಲುಗಳಂತೆ ಇಂದಿನ ಸಮಾಜದಲ್ಲಿ ಸಂಕುಚಿತ ಮನಸ್ಥಿತಿಯನ್ನು ಬಿಂಬಿಸುವ ಹಲವರು ಹಲವರ ಬದುಕಿನಲ್ಲಿ ಪ್ರತ್ಯಕ್ಷವಾಗಿರಲೇಬೇಕು. ಇವರದ್ದು ಸಜ್ಜನಿಕೆಯ ಮುಖವಾಡದಿಂದ ಬರುವ ಕಾಳಜಿಯ ಮಾತುಗಳು. ಮತ್ತೊಬ್ಬರ ಯಶಸ್ಸನ್ನು ಕಂಡಾಗ ಇವರು ನೀಡುವ ಹೊಗಳಿಕೆ ಕೇವಲ ತೋರಿಕೆಯದ್ದಾಗಿರುತ್ತದೆ ಹೊರತು ಅವರ ಮನಸ್ಸಿನ ಆಳದಲ್ಲಿ ಅಸೂಯೆಯ ಕುದಿ ತುಂಬಿಕೊಂಡಿರುತ್ತದೆ.

ತಮಗಿಂತ ಇತರರು ಪ್ರಬಲರಾಗುತ್ತಾರೆ ಎಂಬ ಅಭದ್ರತೆ ಹಾಗೂ ಉಧಾರ ಭಾವದ ಅಭಾವದ ಕಾರಣವೆ ಇವರ ಆಂತರ್ಯದ ಹೊಗೆಗೆ ಕಾರಣವೆಂದು ಹೇಳಬಹುದು. ವಾಸ್ತವ ಒಪ್ಪಿಕೊಳ್ಳದ ನೈಜ ಪ್ರಶಂಸೆ ಇಲ್ಲದ ಇವರ ಮಾತುಗಳು ಜೀವಂತಿಕೆಯಿಲ್ಲದ ಶಬ್ದಗಳೆ ಎಂದು ಹೇಳಬಹುದು. ಸಮಾಜ ಕಣ್ಣಗೆ ಸಜ್ಜನಿಕೆಯ ಲೇಪನದಲ್ಲಿ ಕಾಣುವ ಇವರಿಂದ ಚೂರು ಜಾಗರೂಕತೆ ವಹಿಸಿಕೊಳ್ಳುವುದು ಉತ್ತಮ. ಹೃದಯ ವೈಶಾಲ್ಯ ಇರದೆ ಇರುವ ಕಾರಣ ಇವರು ಮತ್ತೊಬ್ಬರ ಯಶಸ್ಸು ಅಥವಾ ಪ್ರತಿಭೆಯನ್ನು ಮುಕ್ತವಾಗಿ ಸ್ವೀಕರಿಸಲು ಅಶಕ್ತರಾಗಿರುತ್ತಾರೆ. ಇವರಲ್ಲಿನ ನಿರಾಳ ಭಾವದ ಕೊರತೆ, ಸಂಕುಚಿತ ಮನಸ್ಸು ಎದುರಿಗಿರುವವರ ಬೆಳವಣಿಗೆಯು ಸಹಿಸುವುದಿಲ್ಲ. ಮತ್ತೊಬ್ಬರ ಪ್ರತಿಭೆ ಎಲ್ಲಿ ತಮ್ಮ ಅಸ್ತಿತ್ವಕ್ಕೆ ಹಿನ್ನಡೆ ತರುತ್ತದೆ ಎಂಬ ಸಂಶಯದ ಭಾವ ಅವರನ್ನು ಕಾಡುತ್ತಿರುತ್ತದೆ. ಈ ಭಯವೇ ಅವರನ್ನು ಅಸೂಯೆಯ ಕುದಿಯಲ್ಲಿ ಬೇಯುವಂತೆ ಮಾಡುತ್ತದೆ. ತಮ್ಮೊಳಗಿನ ಕುದಿಯನ್ನು ಮುಚ್ಚಿಟ್ಟು ಹೊರನೋಟಕ್ಕೆ ಇವರು ತೋರುವ 'ಹುಸಿ ನಗುಮೊಗದ' ಮಾತುಗಳು ಕೇವಲ ನಾಟಕೀಯ.

ಇಂತಹ ವ್ಯಕ್ತಿತ್ವದವರು ನಿಮ್ಮ ಯಶಸ್ಸನ್ನು ಕೇಳಿದಾಗ "ತುಂಬಾ ಒಳ್ಳೆಯದಾಯಿತು" ಎಂದು ಸಂಭ್ರಮಿಸಿದಂತೆ ಹೊಗಳಬಹುದು. ಆದರೆ ಆ ಹೊಗಳಿಕೆಯಲ್ಲಿ ಜೀವವಿರುವುದಿಲ್ಲ. ಅವರ ಕಣ್ಣುಗಳಲ್ಲಿ ಸಂಭ್ರಮದ ಬದಲು ಒಂದು ರೀತಿಯ ಶೂನ್ಯತೆ ಅಥವಾ ಅಸಮಾಧಾನ ಎದ್ದು ಕಾಣುತ್ತದೆ. ಆಂತರ್ಯದಲ್ಲಿ ಹೊಯ್ದಾಟ ನಡೆಯುವ ಈ ನಾಟಕೀಯ ಬದುಕು ಮಾನಸಿಕ ಶಾಂತಿಯನ್ನು ನೀಡುವುದಿಲ್ಲವಾದರೂ, ತಮಗಿಂತ ಇತರರು ಶ್ರೇಷ್ಠರೆನಿಸಿಕೊಳ್ಳಬಾರದು ಎಂಬ ಮಹಾ ಮಾತ್ಸರ್ಯ ಅವರನ್ನು ಈ ಸುಳ್ಳಿನ ಹಾದಿಯಲ್ಲಿ ನಡೆಸುತ್ತದೆ.

ಸಮಾಜದ ಕಣ್ಣಿಗೆ ನಾವು ಹೇಗೆ ಕಾಣುತ್ತೇವೆ ಎಂಬುವುದು ಮುಖ್ಯವಲ್ಲ. ನಮ್ಮ ಆತ್ಮಸಾಕ್ಷಿಗೆ ನೇರವಾಗಿ ನಾವಿದ್ದರೆ ಸಾಕು ಗುರಿಯೊಂದಿಗೆ ಸಾಗಲು ಅದೇ ನಮಗೆ ದಾರಿ ಮಾಡಿಕೊಡುತ್ತದೆ. ಗುಲಾಬಿಯೊಳಗಿನ ಮುಳ್ಳಿನಂತೆ 'ಸಾಚಾ' ಮುಖವಾಡದವರ ಮಾತುಗಳನ್ನು ನಿಮ್ಮ ಏಳಿಗೆಗೆ ನೇರವಾಗಿ ಅಡ್ಡಿಪಡಿಸದಿದ್ದರೂ, ಜಾಗೃತೆ ಮರೆತರೆ ಮನೋಬಲ ಕುಗ್ಗಿಸವ ಕಾರಣವಾಗಬಹುದು. ಏಕೆಂದರೆ ಅವರ ಸಂಕುಚಿತತೆ ತಮಗೆ ಮರಳಿ ಬರುವ ಬಾಣವಾಗಿ ಪರಿಣಮಿಸಿ ತಮ್ಮನ್ನೇ ಕುಂಟಿತಗೊಳಿಸುತ್ತದೆ ಎಂಬ ಅರಿವಿಲ್ಲದೆ ಬೆನ್ನಹಿಂದೆ ಕುಹಕವಾಡುವ ಕೆಲಸವನ್ನು ಜಾಣ್ಮೆಯಿಂದ ಮಾಡುತ್ತಾರೆ.

ಹಾಗಾಗಿ ಮುಖವಾಡದ ನಗುವಿಗಿಂತ, ಸಹಜವಾದ ಮೌನವೇ ಲೇಸು ಎಂಬ ಮಾತಿನಂತೆ ಮತ್ತೊಬ್ಬರ ಪ್ರತಿಭೆಯನ್ನು ಗೌರವಿಸುವ ಸಂಸ್ಕೃತಿ ನಮ್ಮದಾಗಬೇಕು. ಹಾಗಾದಾಗ ಮಾತ್ರ ಸಮಾಜದಲ್ಲಿ ಆರೋಗ್ಯಕರ ವಾತಾವರಣ ನಿರ್ಮಾಣವಾಗಲು ಸಾಧ್ಯ. ಸೋಗಿನ ಬದುಕು ನಮ್ಮನ್ನು ನಾವು ಆತ್ಮವಂಚೆ ಮಾಡುಕೊಂಡಂತೆ, ಪ್ರಾಮಾಣಿಕವಾದ ಪ್ರಶಂಸೆ ನಮ್ಮದಾದರೆ ಅದು ತನ್ನಷ್ಟಕ್ಕೆ ತಾನೆ ನೈಜ ವ್ಯಕ್ತಿತ್ವದ ಘನತೆ ಎತ್ತಿ ಹಿಡಿಯುವದರಲ್ಲಿ ಸಂದೇಹವಿಲ್ಲ. ಆದ್ದರಿಂದ ವಾಸ್ತವವನ್ನು ಸ್ವೀಕರಿಸೋಣ ಸಹಜತೆಯಲ್ಲಿ ನಡೆಯೋಣ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)